*A.*—Sri K. F. PATIL (Minister for Agriculture and Food).—

(*a*) Yes.

(*b*) Yes.

1. Nutrition (Mysore Serum Institute).

2. Demonstration plots (Different Livestock Farms).

3. Fodder Development Scheme (14 Key Village Centres).

4. Distribution of Grass seeds, roots, slips produced at Livestock Farms.

(*c*) No.

(*d*) The Fodder Development Organisation has been recently set up. After collecting the factual information about the results literature will be published.

---

**Grants to underground Drainage Scheme for Hassan Town.**

**Q.*—528. Sri K. T. DASAPPA (Hassan).—

Will the Government be pleased to state :—

(*a*) whether they will give sufficient grants for the underground drainage scheme in Hassan town this year ;

(*b*) whether the grant for this purpose given four years back was transferred to Kolar town ?

*A.*—Sri T. SUBRAMANYA (Minister for Law, Labour and Local Self-Government).—

(*a*) No assurance can be given, since the proposals for the underground drainage scheme in respect of Hassan Town costing Rs. 15,50,000 have been received only on 25th February 1959 and they have to be examined in detail.

(*b*) Yes, since the water supply scheme for Kolar Town was under execution and the work was nearing completion.

---

**Opening of Hospitals in the Villages of Gauribidanur and Bagepalli Taluks.**

**Q.*—605. Sri S. MUNI RAJU (Chickballapur).—

Will the Government be pleased to state :—

(*a*) when did the Government pass orders sanctioning Hospitals to the following villages ;

(i) Watardahoshalli (Gauribidanur Taluk)

(ii) Nagaragere (Gauribidanur Taluk)

(iii) Womens's Dispensary (Bagepalli)

(*b*) what action has been taken to open the Hospitals in the above places?

*A.*—Sri K. K. HEGDE (Minister for Health).—

(*a*) (i) In May 1949.
(ii) In July 1947.
(iii) In July 1918.

(*b*) The question of opening dispensaries in these places is under consideration.

---

**Member's Representation.**

Sri C. M. ARUMUGHAM (Kolar Gold Fields).—Mr. Speaker, in the beginning of March, I have given notice of a privilege motion. May I know what happened to it ?

Mr. DEPUTY SPEAKER.—I will examine it. Please meet me in my Chambers and I will let you know.

Sri C. M. ARUMUGHAM.—When I raised the Privilege Motion, the Chief Minister said that he would call for particulars. Now two months are over.

Mr. DEPUTY SPEAKER.—I will see what has happened.

---

2 P.M.

## NON-OFFICIAL RESOLUTIONS

**Formation of a Corporation of Silk Industries in the State**

(*Debate contd.*)

ಶ್ರೀ ಜಿ. ವೆಂಕಟೇಗೌಡ (ಪಾಳ್ಯಂ).—ಮಾನ್ಯ ಸಭಾಪತಿಗಳೇ, ಮಾನ್ಯ ಮಿತ್ರರಾದ ಶ್ರೀ ಲಿಂಗೇಗೌಡರು

ತಂದಿರತಕ್ಕಂಥ ಈ ನಿರ್ಣಯ ಸ್ವಾಗತಾರ್ಹವಾಗಿದೆ ಎಂದು ಹೇಳುವುದಕ್ಕೆ ನನಗೆ ಸಂತೋಷವಾಗುತ್ತದೆ. ಏಕೆಂದರೆ ನಮ್ಮ ದೇಶದಲ್ಲಿ ವ್ಯವಸಾಯಕ್ಕೆ ನಾವು ಹೆಚ್ಚು ಪ್ರಾಶಸ್ತ್ಯವನ್ನು ಕೊಡುತ್ತಾ ಇದ್ದೇವೆ. ವ್ಯವಸಾಯವನ್ನು ಬಿಟ್ಟರೆ ರೇಷ್ಮೆ ಮೊಟ್ಟೆಯನ್ನು ತಯಾರು ಮಾಡತಕ್ಕಂಥ ಉದ್ಯಮಕ್ಕೆ, ರೇಷ್ಮೆ ಬಿಚ್ಚತಕ್ಕಂಥ ಉದ್ಯಮಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡಬೇಕಾದ್ದು ಅನಿವಾರ್ಯವಾಗಿದೆ. ಸುಮಾರು ಹತ್ತು ಲಕ್ಷ ಜನ ಈ ಉದ್ಯಮದಲ್ಲಿ, ನಮ್ಮ ಮೈಸೂರು ಸಂಸ್ಥಾನದಲ್ಲಿ ನಿರತರಾಗಿದ್ದಾರೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸರ್ಕಾರದವರು ಸುಮಾರು 33 ಯೋಜನೆಗಳನ್ನು ಈ ಕೈಗಾರಿಕೆಯನ್ನು ಅಭಿವೃದ್ಧಿ ಮಾಡಿಕೊಳ್ಳುವುದಕ್ಕೆ ಹಾಕಿಕೊಂಡಿದ್ದರೂ, ಅದು ಸಮರ್ಪಕವಾಗಿ ಇಲ್ಲಿಯವರೆಗೂ ಯಾವ ದೃಷ್ಟಿಯಲ್ಲಿಯೂ ಕೂಡ ಯಶಸ್ವಿಯಾಗಿ ಕಾರ್ಯಗತವಾಗದೆ ಇರತಕ್ಕಂಥ ಕಾರಣದಿಂದ, ಮತ್ತು ಸರ್ಕಾರ ಎಷ್ಟು ಪ್ರಮಾಣದಲ್ಲಿ ಈ ಕೈಗಾರಿಕೆಗೆ ವಿಶೇಷವಾದಂಥ ಪ್ರೋತ್ಸಾಹವನ್ನು ಕೊಡಬೇಕಾಗಿತ್ತೋ ಅಷ್ಟನ್ನೂ ಕೊಡಲಿಕ್ಕೆ ಸರ್ಕಾರಕ್ಕೆ ಸಾಧ್ಯವಾಗದೆ ಇರತಕ್ಕಂಥ ಕಾರಣದಿಂದ ಈ ಒಂದು ಬೋರ್ಡು ರಚನೆಯಾಗತಕ್ಕಂಥದ್ದು ಅತ್ಯಾವಶ್ಯಕವೆಂದು ನಾನು ಅಭಿಪ್ರಾಯಪಡುತ್ತೇನೆ. 1958-59ನೆಯ ವರ್ಷದಲ್ಲಿ, ಈ ಉದ್ಯಮದ ಸರ್ವತೋಮುಖವಾದ ಅಭಿವೃದ್ಧಿಗೆ, ಬೆಳವಣಿಗೆಗೆ ಸುಮಾರು 25 ಲಕ್ಷ ರೂಪಾಯಿಗಳನ್ನು ಒದಗಿಸಿರುತ್ತಾರೆ. ಆದರೆ ಅಂಕಿ ಅಂಶಗಳನ್ನು ನೋಡಿದರೆ ಸುಮಾರು 13 ಲಕ್ಷ ರೂಪಾಯಿಗಳನ್ನು ಖರ್ಚುಮಾಡಲಿಕ್ಕೆ ಸಾಧ್ಯವಾಗುತ್ತಾ ಇಲ್ಲ. ಅಂದರೆ ಶೇಕಡ 50 ರಷ್ಟು ಸರ್ಕಾರದಿಂದ ಈ ಉದ್ಯಮದ ಅಭಿವೃದ್ಧಿ ಕಡೆಗೆ ಖರ್ಚಾಗದೆ ಇರತಕ್ಕಂಥ ಸನ್ನಿವೇಶ ನೋಡಿದರೆ, ಸರ್ಕಾರದಿಂದ ಈ ಉದ್ಯಮಕ್ಕೆ ಹೆಚ್ಚು ಗಮನವನ್ನು ಕೊಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ ಎಂದು ಕಾಣುತ್ತದೆ. ಈ ಒಂದು ಕಾರಣದಿಂದ ಈ ಒಂದು ಬೋರ್ಡನ್ನು ರಚನೆಮಾಡುವುದಾದರೆ, ಅದು ನಿಶ್ಚಯವಾಗಿಯೂ ಹೆಚ್ಚಾದ ಗಮನವನ್ನು ಕೊಟ್ಟು, ಎಲ್ಲಾ ದೃಷ್ಟಿಯಿಂದಲೂ ಸಹಾಯಕಾರಿಯಾಗಿರುತ್ತದೆ ಎಂದು ನನಗನ್ನಿಸುತ್ತದೆ. ಇವತ್ತಿನ ದಿವಸ ಎಷ್ಟು ಪ್ರಮಾಣದಲ್ಲಿ ರೋಗರಹಿತ ಮೊಟ್ಟೆಗಳು ಸರಬರಾಜು ಆಗಬೇಕೋ, ಅಷ್ಟುಮಟ್ಟಿಗೆ ಆಗುತ್ತಿಲ್ಲ ಅದಕ್ಕೆ ಸರ್ಕಾರದವರು ಹಾಕಿಕೊಂಡಿರತಕ್ಕಂಥ ಯೋಜನೆಗಳನ್ನು ಕಾರ್ಯಗತ ಮಾಡುತ್ತಾ ಇಲ್ಲ. ಅಲ್ಲದೆ ಹಿಪ್ಪನೇರಿಳೆಯ ಸತ್ವ ಏನಿದೆಯೋ ಅದನ್ನು ಹೆಚ್ಚು ಮಾಡಲಿಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆದುಕೊಳ್ಳುತ್ತಾ ಇಲ್ಲ. ಇವತ್ತಿನ ದಿವಸ ಮೈಸೂರಿನಲ್ಲಿ $1\frac{1}{4}$ ಲಕ್ಷಕ್ಕಿಂತ ಹೆಚ್ಚಿನ ಎಕರೆ ಮಲ್‌ಬರಿಯಿಂದ ಕವರಾಗಿದೆ. ಇದನ್ನು ಜಾಸ್ತಿಮಾಡಲಿಕ್ಕೆ ಯಾವ ಒಂದು ವ್ಯವಸ್ಥೆಯನ್ನು ಮಾಡಿದ್ದೀರಿ, ಪ್ರಯತ್ನ ಪಟ್ಟಿದ್ದೀರಿ ಎಂದು ನಾನು ಕೇಳಬೇಕಾಗಿದೆ. ಇದಕ್ಕೆ ಬೇಕಾದಷ್ಟು ಹಣವನ್ನು ಒದಗಿಸಿದ್ದರೂ ಕೂಡ, ಬೇಕಾದಷ್ಟು ಭಾವಿಗಳನ್ನು ತೆಗೆಯಲಿಕ್ಕೆ ಸಾಧ್ಯವಾಗಿಲ್ಲ. ರೈತರಿಗೆ ಸಹಾಯಮಾಡಬೇಕೆಂದು ಆಲೋಚನೆ ಮಾಡಿರತಕ್ಕಂಥದ್ದು ಸರಿಯಾಗಿ ಕಾರ್ಯಗತವಾಗದೆ ಇರುವುದು ವಿಷಾದಕರ. ನಮ್ಮ ಕೊಳ್ಳೇಗಾಲ ಪ್ರದೇಶದಲ್ಲಿ ಸಮಾರು 30 ಸಾವಿರ ಎಕರೆ ಹಿಪ್ಪನೇರಿಳೆ ವ್ಯವಸಾಯದಲ್ಲಿದೆ. ಬರೀ ಐದು ಭಾವಿಗಳಿಗೆ ಮಾತ್ರ ಧನಸಹಾಯ ಕೊಟ್ಟಿರುವುದನ್ನು ನೋಡಿದರೆ, ನಿಜವಾಗಿಯೂ ಸರ್ಕಾರದಲ್ಲಿ ನಿಷ್ಪಕ್ಷಪಾತ ಭಾವನೆಯಿಂದ ಕೆಲಸವಾಗಿಲ್ಲವೆಂದು ಕಾಣುತ್ತದೆ. ಮೈಸೂರಿನಲ್ಲಿ ಶೇಕಡ 25ರಷ್ಟು ಪ್ರದೇಶ ಹಿಪ್ಪನೇರಿಳೆ ವ್ಯವಸಾಯದಲ್ಲಿದ್ದು, ಬರೀ ದಬು ಭಾವಿಗಳಿಗೆ ಹಣ ಒದಗಿಸಿರುವುದು ನೋಡಿದರೆ, ನಿಜವಾಗಿಯೂ ಅದು ರೈತರಿಗೆ ಸಹಾಯ ಮಾಡುವ ಮನೋಭಾವನೆಯನ್ನು ತೋರಿಸುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಏಕೆಂದರೆ ಇವತ್ತಿನ ದಿವಸ ಅನೇಕ ಜನ ರೈತರು, ಲಕ್ಷಾಂತರ ಮಂದಿ, ಈ ಉಪಕಸಬಿನಲ್ಲಿ ನಿರತರಾಗಿರುತ್ತಾರೆ. ಆ ರೈತರು ಸುಧಾರಿತರಾಗುವ ಕಾರ್ಯಕ್ರಮವನ್ನು ಇಟ್ಟುಕೊಂಡಿರುತ್ತೀರಿ. ಅದರಲ್ಲಿ ಪಕ್ಷಪಾತ ತಾವು ತೋರಿಸತಕ್ಕಂಥದು ತಮ್ಮ ಇಲಾಖೆಯವರಿಗೂ, ಸರ್ಕಾರಕ್ಕೂ ಸಲ್ಲತಕ್ಕುದಲ್ಲ ಎಂದು ಹೇಳಬೇಕಾಗಿದೆ. ನನ್ನ ಮಾನ್ಯ ಸ್ನೇಹಿತರು ಅರ್ಥಗರ್ಭಿತವಾಗಿ ಮಾತನಾಡಿದ್ದಾರೆ. ವ್ಯವಸಾಯದ ರೇಸುಗಳಲ್ಲಿ, ಎರಡು ಮೂರು ವೆರೈಟಿ ಮಾತ್ರ ಮಾಡುತ್ತಿದ್ದೀರಿ. ಇವತ್ತಿನ ದಿವಸ ನಾವು ಬೇರೆ ವಿದೇಶಗಳ ಜೊತೆಗೆ ಪೈಪೋಟಿಮಾಡಬೇಕಾದ ಸಂಧರ್ಭ ಇರುವಾಗ, ಇದರ ಕಡೆಗೆ ವಿಶೇಷವಾದ ಗಮನವನ್ನು ಕೊಡುವುದಕ್ಕೆ ಸಾಧ್ಯವಾಗದೆ ಇರುವ ಸನ್ನಿವೇಶದಲ್ಲಿ, ಇಂಥ ಒಂದು ಬೋರ್ಡು ಅಗತ್ಯ. ಅದರ ರಚನೆ ಎಷ್ಟರಮಟ್ಟಿಗೆ ಅಗತ್ಯವೆನ್ನುವುದನ್ನು ಸರ್ಕಾರದವರು ಒಪ್ಪಿಕೊಳ್ಳಲೇಬೇಕೆಂದು ನನಗನ್ನಿಸುತ್ತದೆ. ತಮ್ಮ ಅಂದಾಜಿನ ಪ್ರಕಾರ, ತಾವೇ ಕೊಟ್ಟಿರತಕ್ಕಂಥ ಯೋಜನೆ ಮತ್ತು ಕಾರ್ಯಕ್ರಮವನ್ನು ಯಶಸ್ವಿಯಾಗಿ, ಪರಿಣಾಮಕಾರಿಯಾಗಿ ಮಾಡುತ್ತೀರ ಎಂದು ಪ್ರಶ್ನೆ ಮಾಡಬೇಕಾಗಿದೆ. ಇಷ್ಟು ಗ್ರೇನೆಜ್‌ಗಳನ್ನು ತೆರೆಯುವುದಕ್ಕೆ ಎಷ್ಟು ರೇರಿಂಗ್ ಸೆಂಟರುಗಳನ್ನು ಓಪನ್‌ಮಾಡಿದ್ದೀರಿ? ಮೂರು ವರ್ಷದವರೆಗೂ ಸರ್ಕಾರ ಯಾವ ಗ್ರೇನೆಜ್ ಬಿಲ್ಡಿಂಗಿಗೂ ಧನಸಹಾಯ ಕೊಟ್ಟಿಲ್ಲ. ಯಾವ ಒಂದು ವ್ಯವಸ್ಥೆಯನ್ನೂ ಮಾಡದಿರುವುದಕ್ಕೆ ಕಾರಣವೇನು? ಯಾವ ಯಾವ ಪ್ರದೇಶದಲ್ಲಿ ಮಲ್‌ಬರಿ ಬೆಳೆಯುವ ಉಪಕಸಬಿನಲ್ಲಿ ನಿರತರಾಗಿರತಕ್ಕ ರೈತರಿಗೆ ಸಹಾಯವನ್ನು ಒದಗಿಸಿ ಕೊಟ್ಟಿದ್ದೀರಿ ಎನ್ನುವ ಅಂಶ ಅಂಕಗಳಿವೆಯೇ? Replacing outmoded basins by up-to-date basins ಎಂದಿದೆ: ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟೊಂದು ಬೇಸಿನ್ನುಗಳನ್ನು ರಿಪ್ಲೇಸ್ ಮಾಡಿದ್ದೀರಿ, ಮತ್ತು ಬೇಸಿನ್ನುಗಳನ್ನು ಒದಗಿಸಿದ್ದೀರಿ? ಈ ಮೂರು ವರ್ಷದಲ್ಲಿ ತಮ್ಮ ಅಂದಾಜಿನ ಪ್ರಕಾರ ಈ ಕೈಗಾರಿಕೆ ಯಶಸ್ವಿಯಾಗಿದೆ ಎಂಬುದನ್ನು ಹೇಳುತ್ತೀರ? ಸೆರಿಕಲ್‌ಚರ್ ಏರಿಯಾಗಳಲ್ಲಿ ಎಲ್ಲಿ ಲೆಜಿಸ್ಲೇಟಿವ್ ಮೆಷರ್ಸ್ ಮಾಡಿದ್ದೀರಿ. ಈ ಒಂದು ಮುಖ್ಯ ಕೈಗಾರಿಕೆಗೆ ಬೇಕಾದಂಥ ಅವಶ್ಯಕವಾದ ಕಾನೂನನ್ನು ಪಾಸ್ ಮಾಡಿ, ಅದನ್ನು ಅನುಷ್ಠಾನಕ್ಕೆ ತರುವ ವಿಚಾರದಲ್ಲಿ ನಿಜವಾಗಿ ಫೇಲ್‌ಆಗಿದ್ದೀರಿ ಎಂದು ಹೇಳಿದರೆ ತಪ್ಪಾಗಲಾರದು. ಇವತ್ತಿನದಿನ ಎಷ್ಟು ಜನ ಸಿಲ್ಕ್ ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ಮಾರಾಟ ಮಾಡುತ್ತಾರೆ. ಅದಕ್ಕೆ ಏನು ಫೆಸಿಲಟಿಗಳನ್ನು ಪ್ರೊವೈಡ್ ಮಾಡಿದ್ದೀರಿ? ಇದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕು. ಅನೇಕ ಜನ ಮಾರ್ಕೆಟಿಂಗ್ ಸೊಸೈಟಿಗಳಿಗೆ ಹೋಗುತ್ತಾ ಇಲ್ಲ. ಖಾಸಗಿ ಜನಗಳ ಮುಖಾಂತರ ಮಾರಾಟ ನಡೆಯುತ್ತಿದೆ. ಇದರಲ್ಲಿ ಏನೋ ಒಂದು ನ್ಯೂನತೆ ಇದೆ. ಇದನ್ನು ತಿಳಿದುಕೊಂಡು ಹೆಚ್ಚು ಹೆಚ್ಚು ಜನ ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿಗೆ ಬರುವ ಹಾಗೆ ಮಾಡಿಕೊಡದಿದ್ದರೆ ಪ್ರಯೋಜನವಿಲ್ಲ. ಇವತ್ತಿನ ದಿವಸ ಕೊಳ್ಳೇಗಾಲದಲ್ಲಿ ತಯಾರಾಗತಕ್ಕಂಥ ರೇಷ್ಮೆ ಬೆಂಗಳೂರು ಸೊಸೈಟಿಗೆ ಬಂದು ಅದರ ಮೂಲಕ ಮಾರಾಟವಾಗಬೇಕು. ಅನೇಕ ಜನ ಎಲ್ಲಿ ಪಡೆಯುವುದಕ್ಕೆ ತಯಾ

(ಶ್ರೀ ಜಿ. ವೆಂಕಟೇಗೌಡ)

ರಿದ್ದಾರೋ ಅಲ್ಲಿ ಕೊಡುವ ವ್ಯವಸ್ಥೆ ಇಲ್ಲ. ಬೆಂಗಳೂರಿಗೆ ಸಿಲ್ಕು ಸರಬರಾಜು ಆಗಬೇಕು, ಇಲ್ಲಿಗೆ ಒಂದು ಸೊಸೈಟಿಗಳ ಮೂಲಕ ತೆಗೆದುಕೊಳ್ಳಬೇಕೆಂದರೆ ವ್ಯಾಪಾರಗಾರರಿಗೆ ಬಹಳ ಕಷ್ಟವಾಗುತ್ತದೆ. ಎಲ್ಲೆಲ್ಲಿ ರೇಷ್ಮೆ ಉತ್ಪನ್ನವಾಗುತ್ತದೆಯೋ, ಅಲ್ಲೆಲ್ಲಾ ಒಂದು ಕೋ-ಆಪರೇಟಿವ್ ಸೊಸೈಟಿಯ ಬ್ರಾಂಚನ್ನು ತೆಗೆಯುವುದು ಅವಶ್ಯಕ. ಗವರನ್‌ಮೆಂಟ್ ಸಿಲ್ಕ್ ಫಿಲೇಚರ್ ನವರು ಕೊಳ್ಳೇಗಾಲದಲ್ಲಿ ಮತ್ತು ಮೈಸೂರಿನಲ್ಲಿ ಎರಡು ಕಡೆ ಬ್ರಾಂಚುಗಳನ್ನು ತೆಗೆಯುವುದಾದರೆ ಈ ವ್ಯವಸ್ಥೆ ಉತ್ತಮವಾಗುವುದರಲ್ಲಿ ಸಂದೇಹವಿಲ್ಲ ಎಂದು ನನಗೆ ಎನಿಸುತ್ತದೆ. ಆದ್ದರಿಂದ ಈ ಕೈಗಾರಿಕೆಗೆ ಯಾವ ಒಂದು ಪ್ರಮಾಣದ ಪ್ರೋತ್ಸಾಹ ಕೊಡಬೇಕೋ ಅದನ್ನು ಕೊಡುತ್ತಾ ಇಲ್ಲ; ಮತ್ತು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಕೈಗಾರಿಕೆಗೆ ಯಾವ ಪ್ರಾಶಸ್ತ್ಯ ಕೊಡಬೇಕೋ ಅದನ್ನು ಕೊಡುವ ವಿಚಾರದಲ್ಲಿ ತಾವು ಫೇಲ್ ಆಗಿದ್ದೀರಿ ಎಂದು ಹೇಳಿದರೆ ತಪ್ಪಾಗದು. ಈ ವಿಚಾರವನ್ನು ಕುರಿತು ಮಾತನಾಡುವಾಗ, ರೇಷ್ಮೆಮೊಟ್ಟೆ ತಯಾರುಮಾಡಲಿಕ್ಕೆ, ಹಿಪ್ಪನೇರಳೆ ಸೊಪ್ಪನ್ನು ಹೆಚ್ಚು ಮಾಡುವುದಕ್ಕೆ ಯಾವ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರೋ ಅದನ್ನು ಯಶಸ್ವಿಮಾಡಲಿಕ್ಕೆ ಸರಿಯಾದ ಸಾಧನೆಯನ್ನು ಇಟ್ಟುಕೊಂಡಿಲ್ಲವೆಂದು ಹೇಳಬೇಕಾಗಿದೆ.

ಇವತ್ತಿನ ದಿವಸ ಮೈಸೂರು ರಾಜ್ಯದಲ್ಲಿರತಕ್ಕ ಎಲ್ಲಾ ಹಿಪ್ಪನೇರಳೆ ಬೆಳೆಯತಕ್ಕ ಪ್ರದೇಶಗಳು ನೀರಾವರಿಗೆ ಯೋಗ್ಯವಾಗಿವೆ. ಅವನ್ನೆಲ್ಲಾ ನೀರಾವರಿಗೋಸ್ಕರವಾಗಿಯೇ ಉಪಯೋಗಿಸುವುದರಿಂದ, ಈಗ ಬೆಳೆಯುವುದಕ್ಕಿಂತ ಶೇಕಡ 150ರಷ್ಟು ಜಾಸ್ತಿಯಾಗಿ ಹಿಪ್ಪನೇರಳೆ ಸೊಪ್ಪನ್ನು ಬೆಳೆಯುತ್ತಿದ್ದಾರೆ. ಇದರಿಂದ ಗೂಡಿನಸತ್ವ ಜಾಸ್ತಿಯಾಗುತ್ತದೆ. ಇವತ್ತಿನ ದಿವಸ ರೇಷ್ಮೆ ಬಿಚ್ಚುವ ಉದ್ಯಮದಲ್ಲಿ ಶೇಕಡ 80ರಷ್ಟು ಕಾಸ್ಟ್ ಆಫ್ ಪ್ರೊಡಕ್ಷನ್ ರಾಮೆಟೀರಿಯಲ್ಸ್‌ಗೇ ಆಗುತ್ತದೆ. ಎಲ್ಲಿಯವರೆಗೆ ಈ ಕಾಸ್ಟ್ ಆಫ್ ಪ್ರೊಡಕ್ಷನ್ ಕಡಿಮೆ ಮಾಡುವುದಿಲ್ಲವೋ ಅಲ್ಲಿಯವರೆಗೆ ಈ ರೇಷ್ಮೆ ಉದ್ಯಮದಲ್ಲಿ ಯಾವ ಫಲವನ್ನೂ ಪಡೆಯಲಾರೆವು. ಗೂಡಿನ ಸತ್ವವನ್ನು ಜಾಸ್ತಿಮಾಡಬೇಕಾದರೆ, ಮತ್ತು ಹಿಪ್ಪನೇರಳೆ ಸೊಪ್ಪಿನ ಸತ್ವವನ್ನೂ ಸಹ ಜಾಸ್ತಿಮಾಡಬೇಕಾದರೆ ನೀರಾವರಿ ಆಶ್ರಯ ಹೆಚ್ಚಬೇಕು. ನಮ್ಮ ಸಂಸ್ಥಾನದ ಎಲ್ಲಾ ಪ್ರದೇಶಗಳೂ ನೀರಾವರಿ ಆಶ್ರಯಕ್ಕೆ ಬರುವಹಾಗೆ ಮಾಡಬೇಕು. ರೋಗರಹಿತ ಮೊಟ್ಟೆಗಳನ್ನು ಕಾಲಕ್ಕೆ ಸರಿಯಾಗಿ ಸರಬರಾಜುಮಾಡಬೇಕು. ಈಗ ಕೇವಲ ಶೇಕಡ 50-60ರಷ್ಟು ಮಾತ್ರ ಸರಬರಾಜುಮಾಡುತ್ತಿದ್ದಾರೆ. ಈಗ್ಗೆ ಮೂರು ವರ್ಷಗಳಿಂದಲೂ ಅನೇಕ ಕಡೆಗಳಲ್ಲಿ ರೋಗರಹಿತ ಮೊಟ್ಟೆಗಳನ್ನು ಪಡೆಯುವುದಕ್ಕೆ ಬಹಳ ಮಂದಿ ಪ್ರಯತ್ನಮಾಡುತ್ತಿದ್ದಾರೆ. ಈಗಾಗಲೇ ಎಂಟು-ಹತ್ತು ವರ್ಷಗಳಾದುವು. ಆ ಬಗ್ಗೆ ಸರ್ಕಾರದವರ ಸಹಾಯ ಸಿಕ್ಕುತ್ತಿಲ್ಲ. ಅದಕ್ಕಾಗಿ ಸರ್ಕಾರದವರು ಈ ಕೂಡಲೆ ಹೆಚ್ಚಾದ ಪ್ರಯತ್ನ ಆ ಬಗ್ಗೆ ಮಾಡಬೇಕು. ಅದನ್ನು ಫ್ರೀ ಆಫ್ ಕಾಸ್ಟಾಗಿ ಒದಗಿಸಬೇಕು. ಇನಿಷಿಯಲ್ ಸ್ಟೇಜಿನಲ್ಲಿ ಈ ಬಗ್ಗೆ ಯಾವ ಒಂದು ವ್ಯವಸ್ಥೆಯನ್ನೂ ಮಾಡದೇ ಇದ್ದರೆ, ನಿಜವಾಗಿ ಬೆಳೆಯತಕ್ಕ ರೇಷ್ಮೆ ಬೆಳೆ ಸತ್ವವಿಲ್ಲದೆ ಹೀನವಾಗುತ್ತದೆ. ಆ ಕಾರಣದಿಂದ ಮೈಸೂರು ರೇಷ್ಮೆಗೆ ಹೆಚ್ಚಿನ ನಿಗಾ ಕೊಡಬೇಕು. 1954 ರಿಂದ 1957ರವರೆಗೆ ಇದರ ಸತ್ವ ಶೇಕಡ 17 ಇತ್ತು. ಇವತ್ತಿನ ದಿವಸ ಶೇಕಡ 20ಕ್ಕೆ ಏರಿದೆ. ಈಗ ಇದಕ್ಕೆ ವಿನಾಯಿತಿಮಾಡುವುದಾದರೆ, ಇದರ ಬೆಲೆ ಇನ್ನೂ ಕಡಿಮೆಯಾಗುತ್ತದೆ. ಇದರ ಸತ್ವ ದೂರವಿದೆ. ಇನಿಷಿಯಲ್ ಸ್ಟೇಜಿನಲ್ಲಿ ಯಾವುದಾದರೂ ಒಂದು ಕಾರ್ಯಕ್ರಮವನ್ನು ಸೂಕ್ತವಾಗಿ ಹಾಕಿಕೊಂಡು ಅದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡುವುದಕ್ಕೆ ಈಗ ಇಲಾಖೆಯವರಿಗೆ ಸಾಧ್ಯವಾಗುತ್ತಿಲ್ಲ. ಈ ಒಂದು ಕಾರಣದಿಂದಲೇ ಬೋರ್ಡಿನ ಸ್ಥಾಪನೆ ಅಗತ್ಯವೆಂದು ನನಗನ್ನಿಸುತ್ತದೆ. ಈಗಿರತಕ್ಕ ರೇಷ್ಮೆ ಕೇಂದ್ರ ಬೋರ್ಡ್ ಯಾವಾಗ ಒಂದು ಅಸ್ತಿತ್ವದಲ್ಲಿ ಇದೆಯೋ ಅದು ಒಂದು ವಿಧದಲ್ಲಿ ನೂತನ ಪದ್ಧತಿಯಮೇರೆಗೆ ಅದರ ಕೆಲಸಕಾರ್ಯಗಳನ್ನು ಕಾರ್ಯಗತಮಾಡಬೇಕೆಂದು ನಾನು ಹೇಳುತ್ತೇನೆ. ಇದಕ್ಕೆ ವಿಶೇಷ ಗಮನ ಕೊಡುವುದಕ್ಕೆ ಒಂದು ಸರಿಯಾದ ಬೋರ್ಡ್ ಅವಶ್ಯಕ. ಈ ಬೋರ್ಡಿನ ಕೆಲಸಕಾರ್ಯಗಳು ನಮ್ಮ ಶಾಸನ ಸಭೆಯ ಒಂದು ವ್ಯಾಪ್ತಿಗೆ ಒಳಪಟ್ಟಿರಬೇಕು. ಈ ಬಗ್ಗೆ ಅಟಾನಮಸ್ ಕಾರ್ಪೊರೇಷನ್‌ಮಾಡಬೇಕೆಂದು ನನ್ನ ಮಿತ್ರರಲ್ಲಿ ಕೆಲವರು ಹೇಳಿದರು. ಅವರು ಏನು ಮಾಡಿದರೂ ಆ ಕೆಲಸಗಳನ್ನು ಪರಿಶೀಲನೆಮಾಡುವ ಅಧಿಕಾರ ನಮಗೆ ಇಲ್ಲದಿದ್ದರೆ ಅಂತಹ ಅಟಾನಮಸ್ ಕಾರ್ಪೊರೇಷನ್‌ಗಳನ್ನು ಎಷ್ಟುಮಾಡಿದರೂ ಏನೂ ಪ್ರಯೋಜನವಿಲ್ಲ. ಅವರು ಏನು ತಪ್ಪುಮಾಡಿದರೂ ಅಂಥಾದ್ದನ್ನು ಪರಿಶೀಲನೆಮಾಡುವ ಅಧಿಕಾರವಾದರೂ ನಮಗೆ ಇಲ್ಲದಿದ್ದರೆ ಬಹಳ ಕಷ್ಟ. ನಮ್ಮ ಸಭೆಯಲ್ಲಿ ಪಕ್ಷಪಾತ ಮನೋಭಾವದ ಸುಳಿವು ಯಾವ ವಿಧದಲ್ಲೂ ಇಲ್ಲದೇಇರುವುದರಿಂದ ನಮ್ಮ ವ್ಯಾಪ್ತಿಗೆ ಒಳಪಟ್ಟಿರತಕ್ಕ ಬೋರ್ಡ್ ಆಗಬೇಕು. ಒಂದುವೇಳೆ ಅವರಲ್ಲಿ ಏನಾದರೂ ದೋಷ ಕಂಡುಬಂದರೆ ಅದನ್ನು ಪರಿಶೀಲಿಸುವ ಅಧಿಕಾರ ನಮಗೆ ಇಲ್ಲದಿದ್ದರೆ ಅಂತಹ ಅಟಾನಮಸ್ ಕಾರ್ಪೊರೇಷನ್ ಮಾಡುವುದು ಬೇಡ. ಎಲ್ಲಾ ವಿಧದಲ್ಲೂ ಅಭಿವೃದ್ಧಿಮಾಡಲು ತಕ್ಕ ಈ ಕೈಗಾರಿಕೆಗೆ ಬೇಕಾದಂಥ ನೀತಿನಿಯಮಗಳನ್ನು ಹಾಕಿಕೊಂಡು ಅದನ್ನು ಪರಿಪೂರ್ಣಮಾಡಲು ಬೋರ್ಡಿನ ರಚನೆ ಅವಶ್ಯಕವಿದೆಯೆಂದು ನಾನು ಒತ್ತಿ ಒತ್ತಿ ಹೇಳಬೇಕಾಗಿದೆ. ಇವತ್ತಿನ ದಿವಸ ತಮಗೆ ಗೊತ್ತಿರುವ ಹಾಗೆ ರೈತರ ಜೀವನ ಎಷ್ಟೋ ಸುಧಾರಣೆಯಾಗಬೇಕು. ಸುಮಾರು ಹತ್ತು ಲಕ್ಷ ಜನ ಈ ಉಪಕಸಬಿನಲ್ಲಿದ್ದಾರೆ. ಆದ್ದರಿಂದ ನಮ್ಮಲ್ಲಿ ಬೆಳೆಯತಕ್ಕ ರೇಷ್ಮೆ ಉತ್ಪಾದನೆಯ ಪ್ರಮಾಣ ಹೆಚ್ಚಬೇಕು. ರೇಷ್ಮೆಯನ್ನು ಸ್ವಪರಿಪೂರ್ಣತೆಯಿಂದ ಬೆಳೆಯುವುದು, ಹಂಚುವುದು ಒಂದು, ಉತ್ತಮ ರೇಷ್ಮೆಯನ್ನು ಪಡೆಯುವುದು ಇನ್ನೊಂದು— ಈ ಎರಡು ದೃಷ್ಟಿಗಳಿಂದ ಗ್ರಾಮಾಂತರ ಪ್ರದೇಶಗಳ ಜನರ ಜೀವನ ಸುಧಾರಣೆಯಾಗಬೇಕು. ಈ ಕೈಗಾರಿಕೆ ಅಭಿವೃದ್ಧಿಯಾಗಬೇಕು. ಮೊದಲನೆಯದಾಗಿ ಹಿಪ್ಪಲಿನೇರಳೆ ಸೊಪ್ಪನ್ನು ಬೆಳೆಯುವುದರಿಂದ ರೇಷ್ಮೆ ಬಿಚ್ಚುವವನ ತನಕ ತಾವು ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ತೆಗೆದುಕೊಂಡು ಅದನ್ನು ಅಸ್ತಿತ್ವಕ್ಕೆ ತರಬೇಕಾದರೆ ಒಂದು ಮಂಡಲಿಯ ರಚನೆ ಅವಶ್ಯಕ. ರೇಷ್ಮೆ ಬೆಲೆ ಕಾಲಕಾಲಕ್ಕೆ ಬಹಳ ಫ್ಲಕ್ಚುಯೇಟ್ ಆಗುತ್ತದೆ. ಅದಕ್ಕೆ ಒಂದು ನಿರ್ದಿಷ್ಟವಾದ ಪ್ರಮಾಣದಲ್ಲಿ ಬೆಲೆ ನಿರ್ಧರಿಸಲು ಇನ್ನೂ ಸಾಧ್ಯವಾಗಿಲ್ಲ. ಕಾಫಿ ಬೆಳೆಗೆ ಒಂದು ನಿರ್ದಿಷ್ಟವಾದ ಬೆಲೆಯನ್ನು ನಿಲ್ಲಿಸಿದ್ದಾರೆ. ನಿಜವಾಗಿ ಅನೇಕ ರೈತರಿಗೆ ಇದರಿಂದ ಹೆಚ್ಚಿನ ರೀತಿಯಲ್ಲಿ ಆಕರ್ಷಣೆಯುಂಟಾಗುವಂತೆ ಮಾಡಬಹುದು. ಈ ಬೆಳೆಗೆ ಏರುತ್ತಿರುವ ಬೆಲೆಯನ್ನು ಕಡಮೆಮಾಡುವುದಕ್ಕೆ ಸರ್ಕಾರದವರು ತಕ್ಕ ಅವಕಾಶವನ್ನು ಮಾಡಿಕೊಡಬೇಕು. ಇದೆಲ್ಲಾ ಆಗಬೇಕಾದರೆ ಒಂದು ಮಂಡಲಿಯ ರಚನೆ ಅಗತ್ಯ. ಇನ್ನು ಅನೇಕರು

ಸ್ಪಣ್‌ಸಿಲ್ಕ್ ವಿಷಯವಾಗಿ ಮಾತನಾಡಿದ್ದಾರೆ. ಇವತ್ತಿನ ದಿವಸ ಅದು ನಿಂತಿರುವುದರಿಂದ ಎಷ್ಟೋ ಜನ ಚರಕದಿಂದ ತಯಾರುಮಾಡಿದಂಥ ರೇಷ್ಮೆಯನ್ನು ನೋಡಿ ಎಷ್ಟು ಚೆನ್ನಾಗಿದೆ ಎಂದು ಹೇಳುತ್ತಾರೆ. ಇದರಿಂದ ಈಗೀಗ ಸಾವಿರ ಪೌಂಡು, ಎರಡು ಸಾವಿರ ಪೌಂಡ್, ಐದು ಸಾವಿರ ಪೌಂಡುಗಳಷ್ಟು ರೇಷ್ಮೆ ಒಬ್ಬೊಬ್ಬರ ಹತ್ತಿರ ಸ್ಟಾಕ್ ನಿಂತಿದೆ. ಏನಾದರೂ ಇನ್ನು ಈ ಉದ್ಯಮವನ್ನು ಅವರು ಮುಂದುವರಿಸುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಅನೇಕ ಜನರ ಹತ್ತಿರ ವೇಸ್ಟ್ ಸಿಲ್ಕ್ ಸ್ಟಾಕಾಗಿ ನಿಂತಿದೆ. ಈ ಉದ್ಯಮವನ್ನು ಮುಂದಕ್ಕೆ ಅಭಿವೃದ್ಧಿಮಾಡುತ್ತೇವೆಂದರೆ ಅದು ಸಾಧ್ಯವಾಗುವುದಿಲ್ಲ. ಒಂದು ದೃಷ್ಟಿಯಿಂದ ಈ ವಿಷಯದಲ್ಲಿ ಬೇಗನೆ ವ್ಯವಸ್ಥೆಮಾಡಿ ಸ್ಪಣ್‌ಸಿಲ್ಕ್‌ಮಿಲ್ ಮೂಲಕ ತಕ್ಕ ಕ್ರಮ ತೆಗೆದುಕೊಳ್ಳದೆ ಇದ್ದರೆ ನಿಜವಾಗಿ ಅನೇಕ ಮಂದಿ ಈ ಕಸಬಿನಲ್ಲಿ ನಿರತರಾಗಿರತಕ್ಕ ಜನ ಈ ಉದ್ಯಮವನ್ನೇ ಬಿಡಲಿಕ್ಕೆ ತಯಾರಾಗುತ್ತಿದ್ದಾರೆ. ಈ ಬಗ್ಗೆ ಮಾನ್ಯ ಮಂತ್ರಿಗಳಿಗೆ ಅನೇಕ ಜನ ಕಾಗದ ಬರೆದಿದ್ದಾರೆ. ಆದ್ದರಿಂದ ಸರ್ಕಾರದ ಏಜೆಂಟ್‌ಮೂಲಕ ಈ ವೇಸ್ಟ್ ಸಿಲ್ಕ್ ಏನಿದೆ ಅದನ್ನು ಒಟ್ಟಿಗೆ ಸಂಗ್ರಹಮಾಡಿಸಿ ಫಾರಮ್ಮಿನಿಂದ ಎಕ್ಸ್‌ಪೋರ್ಟ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈಗ ಅವರ ಉದ್ಯಮವನ್ನು ಮುಂದುವರಿಸುವುದಕ್ಕೆ ಆಗದೇಇರುವ ಸ್ಥಿತಿ ಎಲ್ಲೆಲ್ಲಿಯೂ ಇರುವುದರಿಂದ ಸರ್ಕಾರ ಇದನ್ನು ಕೂಡಲೇ ಪರಿಶೀಲನೆ ಮಾಡಬೇಕು. ಈ ಮಾಲನ್ನು ಸರ್ಕಾರದವರೇ ತೆಗೆದುಕೊಂಡು ಯಾವರೀತಿಯಾದರೂ ಡಿಸ್‌ಪೋಸ್‌ಮಾಡಬೇಕು. ಅನೇಕ ಜನರು ಕೇವಲ ಐದು ಚರಕಾಗಳಿಂದ ನೂರು ಚರಕಾಗಳವರೆಗೆ ಮಾರಾಟಮಾಡುವುದಕ್ಕೆ ಸಾಧ್ಯವಾಗದೆ ಸ್ಪಣ್‌ಸಿಲ್ಕ್ ಮಿಲ್, ಚನ್ನಪಟ್ಟಣದಲ್ಲಿಯೇ ಅವೆಲ್ಲಾ ನಿಂತಿರುವ ಪರಿಸ್ಥಿತಿಯಾಗಿದೆ. ಈ ಎಲ್ಲಾ ವಿಷಯಗಳನ್ನು ಗಣನೆಗೆ ತೆಗೆದುಕೊಂಡು ಒಂದು ಮಂಡಲಿಯನ್ನು ನಿಜವಾಗಿ ಸರ್ಕಾರದವರು ರಚನೆ ಮಾಡಬೇಕೆಂದು ನಾನು ಹೇಳುತ್ತೇನೆ. ನಿಜವಾಗಿ ಈ ಉದ್ಯಮದಲ್ಲಿ ಆಸಕ್ತಿವುಳ್ಳವರನ್ನೂ ತಾಂತ್ರಿಕ ಜ್ಞಾನವಿರುವವರನ್ನೂ ಮಂಡಲಿಗೆ ಸದಸ್ಯರನ್ನಾಗಿ ಸೇರಿಸಬೇಕು. ಆಗ ಈ ಉದ್ಯಮ ಅಭಿವೃದ್ಧಿಯಾಗುವುದಕ್ಕೆ ಸಂದೇಹವಿಲ್ಲವೆಂದು ನನಗನ್ನಿಸುತ್ತದೆ. ಇವತ್ತಿನ ಪರಿಸ್ಥಿತಿಯಲ್ಲಿ ಸುಮಾರು ಹತ್ತಾರು ವರ್ಷಗಳಿಂದ ಈ ಉದ್ಯಮದ ಬೆಳವಣಿಗೆಯನ್ನು ಅಂಕಿ ಅಂಶಗಳ ಪ್ರಕಾರ ನೋಡಿದರೆ, ಈ ವರ್ಷದಲ್ಲಿ ಇದರ ಸ್ಥಿತಿ ಬಹಳವಾಗಿ ಹದಗೆಟ್ಟಿದೆ. ರೇಷ್ಮೆ ತೆಗೆಯುವ ವಿಚಾರದಲ್ಲಿ ಸರ್ಕಾರದವರು ಕಡಮೆ ಖರ್ಚಿನಲ್ಲಿ ಏನೇನು ಮಾಡಬೇಕಾಗಿದೆಯೆಂಬುದನ್ನು ಯೋಚನೆ ಮಾಡಬೇಕು. ಹತ್ತುಗಂಟೆ ಜಾಸ್ತಿ ಇದನ್ನು ಸ್ಟೋರ್ ಮಾಡುವ ಬಗ್ಗೆ ಕಕೂನ್ಸ್‌ಗಳನ್ನು ನವೀನವಿಧವಾಗಿ ಮಾಡಬೇಕು. ಜಪಾನ್ ಮತ್ತು ಫ್ರಾನ್ಸಿನಲ್ಲಿ ರೇಷ್ಮೆಯನ್ನು ಹಂಚುವ ವಿಧಾನವನ್ನು ಇಲ್ಲಿ ಅನುಸರಿಸಬೇಕು. ಅದರಿಂದ ಗೂಡಿನ ಸತ್ವ ಹೆಚ್ಚಾಗುತ್ತದೆ. ಇಲ್ಲಿ ಅದರ ಗೋಡೌನ್ ಸರಿಯಾಗಿಲ್ಲ. ಅದರಿಂದಲೇ ಗೂಡಿನ ಸತ್ವ ಹಾಳಾಗಿ ಹೋಗುತ್ತದೆ. ಹೆಗ್ಗಣ-ಇಲಿಗಳ ಕಾಟ ಅಲ್ಲಿ ಜಾಸ್ತಿಯಾಗಿ ಅದರಲ್ಲಿರತಕ್ಕ ಸತ್ವವೇ ಕಡಮೆ ಯಾಗುತ್ತಿದೆ. ಇದನ್ನು ಪರಿಶೀಲನೆಮಾಡಬೇಕು. ಇದು ಉತ್ತಮವಾಗಿ ಆಗಬೇಕೆಂಬ ಯೋಚನೆ ಸರ್ಕಾರಕ್ಕಿದ್ದರೂ ಯಾವುದೊಂದು ಸರಿಯಾಗಿ ಮಾಡುವುದಕ್ಕೂ ಪುರಸತ್ತು ಇಲ್ಲ. ಈ ಕೈಗಾರಿಕೆಯ ಅಭಿವೃದ್ಧಿಗೆ ವಿಶೇಷವಾಗಿ ಗಮನಕೊಡುವುದಕ್ಕೆ ನಮ್ಮ ಸರ್ಕಾರದವರಿಗೆ ತಕ್ಕ ಅವಕಾಶವಿಲ್ಲದೇ ಇರುವ ರೀತಿಯಲ್ಲಿದೆಯೋ ಏನೋ ಎಂದು ನನಗನ್ನಿಸುತ್ತದೆ. ಈ ದೃಷ್ಟಿಯಿಂದ ಒಂದು ಮಂಡಲಿಯನ್ನು ರಚನೆಮಾಡಿದರೆ ಅದರ ಮೂಲಕವಾಗಿ ಈ ಒಂದು ಕೈಗಾರಿಕೆ ಎಲ್ಲಾ ವಿಧದಲ್ಲೂ ಅಭಿವೃದ್ಧಿ ಪಡೆಯುವುದಕ್ಕೆ ಮತ್ತು ಜನರ ಜೀವನವನ್ನು ಸಾಗಿಸುವುದಕ್ಕೆ ಸಾಧ್ಯವಾಗುತ್ತದೆ. ಸ್ವಪರಿಪೂರ್ಣತೆಯಿಂದ ರೇಷ್ಮೆಯನ್ನು ಹಂಚುವುದಕ್ಕೆ ಅನುಕೂಲವಿದೆ. ರೇಷ್ಮೆಯನ್ನು ಹೆಚ್ಚು ಉತ್ಪಾದನೆಮಾಡುವುದರಲ್ಲಿ ಇದಕ್ಕೆ ಮಹತ್ವ ಕೊಟ್ಟಿರುವರೀತಿಯಲ್ಲಿ ನಮ್ಮ ಜನಜೀವನವನ್ನು ಒಂದು ಮಟ್ಟಕ್ಕೆ ಎತ್ತುವುದಕ್ಕೆ ಸಾಧ್ಯವಿಲ್ಲವೆಂದು ನಾನು ಅರಿತುಕೊಂಡಿದ್ದೇನೆ. ಈ ಬೆಳೆಯ ಉತ್ಪಾದನೆ ಸಂಪತ್ತನ್ನು ಹೆಚ್ಚುಮಾಡದಿದ್ದರೆ, ವಿದ್ಯಾಸಂಪತ್ತಾಗಲಿ, ಬೇರೆ ಯಾವ ಸಂಪತ್ತೇ ಆಗಲಿ ಹೆಚ್ಚು ಮಾಡುವುದಕ್ಕೇ ಸಾಧ್ಯವಿಲ್ಲ. ಈ ಕೈಗಾರಿಕೆಯ ಉತ್ಪಾದನೆಗೆ ಅದಕ್ಕೆ ತಕ್ಕ ಸಂಪಾದನೆಗೆ ಸರ್ಕಾರ ವಿಶೇಷ ಗಮನಕೊಡುವುದು ಸ್ವಾಲ್ಪ ಅನಿವಾರ್ಯವೆಂದು ಹೇಳಬಹುದು. ಅದಕ್ಕಾಗಿ ಬೋರ್ಡ್ ರಚನೆ ಮಾಡುವುದಾದರೆ ಅದರ ಮೂಲಕ ಯಾವ ಒಂದ ಧ್ಯೇಯವನ್ನು ಸರ್ಕಾರ ಸಾಧನೆಮಾಡಬೇಕೆಂದಿದೆಯೋ ಅದನ್ನು ಪರಿಪೂರ್ಣವಾಗಿ ಮಾಡುವುದಕ್ಕೆ ಸಾಧ್ಯವೆಂದು ಹೇಳಿ ಕೊನೆಯದಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಕರಿಯಪ್ಪ (ವಿರೂಪಾಕ್ಷಿಪುರ).—ಅಧ್ಯಕ್ಷರೇ, ಈ ಸೆರಿಕಲ್‌ಚರ್ ಇಂಡಸ್ಟ್ರಿ ವ್ಯವಸಾಯಗಾರರ ದೃಷ್ಟಿಯಿಂದ ಮತ್ತು ಬೇರೆ ಕಸಬಿನಲ್ಲಿರತಕ್ಕ ಅನೇಕ ಜನರ ದೃಷ್ಟಿಯಿಂದ ಬಹಳ ಮುಖ್ಯವಾದುದು. ಇದರಿಂದ ಲಕ್ಷಾಂತರ ಜನಗಳು ಇವತ್ತು ಜೀವನ ಮಾಡುತ್ತಿದ್ದಾರೆ. ಮತ್ತೊಂದು ಇದರ ಮುಖ್ಯ ಲಕ್ಷಣವೇನೆಂದರೆ ಈ ಕೈಗಾರಿಕೆಗೆ ಹೆಚ್ಚಿನ ಬಂಡವಾಳಬೇಕಾಗಿರುವುದಿಲ್ಲ. ಅಷ್ಟೊಂದು ಕಡಮೆ ಬಂಡವಾಳದಲ್ಲಿ ಅನೇಕ ಜನರಿಗೆ ಅದರಲ್ಲೂ ಗ್ರಾಮಾಂತ ಪ್ರದೇಶಗಳಲ್ಲಿರತಕ್ಕ ನಿರುದ್ಯೋಗಿಗಳಿಗೆ ಒಂದು ಕಸಬನ್ನು ಇದು ಕಲ್ಪಿಸಿ ಕೊಡುವುದು. ಈ ಕೈಗಾರಿಕೆಗೆ ಹೆಚ್ಚಿನ ಗಮನವನ್ನು ಸರ್ಕಾರ ಕೊಡಬೇಕಾದುದು ತುಂಬ ಅವಶ್ಯಕ. ಹೀಗಿರುವಾಗ ಎಷ್ಟರಮಟ್ಟಿಗೆ ಸರ್ಕಾರದ ಪ್ರೋತ್ಸಾಹ, ಗಮನ ಆ ಕಡೆ ಇದೆಯೆಂಬುದನ್ನು ನೋಡಿದರೆ ನನಗೆ ತುಂಬ ಸಂಶಯವಾಗಿದೆ. ಈ ಕೈಗಾರಿಕೆ ಸರಿಯಾಗಿ ನಡೆಯಬೇಕಾದರೆ ಮೊದಲು ಹಿಪ್ಪನೇರಳೆ ಗಿಡಗಳನ್ನು ಬೆಳೆಸತಕ್ಕದ್ದರಿಂದಹಿಡಿದು ಕೊನೆಗೆ ರೇಷ್ಮೆ ಬಟ್ಟೆ ತಯಾರಾಗುವವರೆಗೂ ನಾವು ಬಹು ಗಮನವನ್ನು ಕೊಡಬೇಕಾಗಿದೆ. ಅದನ್ನು ಹೆಚ್ಚಿಗೆ ಪೋಷಿಸಿಕೊಂಡು ಬರಬೇಕು. ಇಲಾಖೆಯವರು ಆಗಾಗ್ಗೆ ಅಲ್ಲಿ ಇಲ್ಲಿ ಓಡಾಡುತ್ತಿದ್ದಾರೆ. ಅವರು ಒಳ್ಳೆಯ ಗ್ರಾಫ್ಟ್ ಮಲ್‌ಬರಿ ಕಟಿಂಗ್ಸ್ ಕೊಡುತ್ತೇವೆಂದೇನೋ ಹೇಳಿದ್ದಾರೆ. ಜನರಿಗೆ ಅವಶ್ಯಕತೆ ಎಷ್ಟಿದೆಯೋ ಅದರಲ್ಲಿ ಹತ್ತು ಪರ್ಸೆಂಟ್ ಕೂಡ ಜಾಸ್ತಿಯಾಗಿಲ್ಲ. ಜನರು ತಮಗೆ ಕಟಿಂಗ್ ಬೇಕು ಎಂದು ಕೇಳಿದರೆ ಇಲಾಖೆಯವರು ಅದನ್ನು ಅವರಿಗೆ ಸಪ್ಲೈ ಮಾಡುತ್ತೇವೆ ಅಥವಾ ಸಪ್ಲೈ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುವುದಕ್ಕೂ ಕೂಡ ಅವರಿಗೆ ಕಷ್ಟವಾಗಿದೆ.

ಇನ್ನು ರೋಗರಹಿತವಾದ ಮೊಟ್ಟೆಗಳನ್ನು ಜನರಿಗೆ ಸರಬರಾಯಿಮಾಡತಕ್ಕ ವಿಚಾರದಲ್ಲಿ ಹೇಗೆ ಇಲಾಖೆಯವರು ಗಮನಕೊಡುತ್ತಿದ್ದಾರೆಂದು ಕೇಳಿದರೆ ಅದಿನ್ನೂ ಶೋಚನೀಯವಾಗಿದೆ. ಈ ದಿವಸ ಈ ರೋಗರಹಿತವಾದ ಮೊಟ್ಟೆಗಳನ್ನು ತಯಾರಿಸತಕ್ಕ ಬಗ್ಗೆ ಗ್ರೈನರಿಗಳನ್ನು ಪ್ರಾರಂಭಿಸಲು ಅನೇಕ ಜನ ಶಿಕ್ಷಣ ಪಡೆದಂಥವರು ಇದ್ದಾರೆ. ಇದಕ್ಕೆ ಅನೇಕ

(ಶ್ರೀ ಎಸ್. ಕರಿಯಪ್ಪ)

ಕಡೆಗಳಿಂದ ಗಿರಾಕಿ ಸಹಷ್ಟಿದೆ. ಅದಕ್ಕಾಗಿ ರೋಗರಹಿತ ಮೊಟ್ಟೆಗಳನ್ನು ಸರಬರಾಯಿ ಮಾಡಲು ಇನ್ನೂ ಹೆಚ್ಚಿನ ಗ್ರೈನರಿಗಳನ್ನು ಸ್ಥಾಪಿಸಬೇಕಾದದ್ದು ಅತ್ಯಗತ್ಯ. ಆದರೆ ಪ್ರತಿಯೊಂದು ಕಡೆಯಲ್ಲೂ ಸರ್ಕಾರದವರೇ ಈ ಗ್ರೈನರಿಗಳನ್ನು ಸ್ಥಾಪಿಸಬೇಕೆಂದರೆ ಅದು ಬಹಳ ಕಷ್ಟ. ಈ ಕಾರ್ಯದಲ್ಲಿ ಯಾರಾದರೂ ಶಿಕ್ಷಣ ಪಡೆದಂಥ ಖಾಸಗೀ ಜನರು ಮುಂದೆ ಬಂದರೆ ಅಂಥವರಿಗೆ ಪರವಾಇಲ್ಲ ನೀವು ಈ ಕಾರ್ಯವನ್ನು ಮಾಡಿ ಎಂದು ಹೇಳುವುದಕ್ಕೂ ಕೂಡ ಈ ದಿವಸ ಸರ್ಕಾರದವರಿಗೆ ಬಹಳ ಕಷ್ಟವಾಗಿವೆ. ಈ ವಿಚಾರದಲ್ಲಿ ಆ ಇಲಾಖೆಯುವರು ಯಾರಿಗಾದರೂ ಶಿಫಾರ್ಸು ಮಾಡತಕ್ಕ ಅವಕಾಶ ದೊರೆತರೆ ಆಗ ಅವರು, ಇವರು ತಮ್ಮವರು ತಮಗೆ ಬೇಕಾದವರು, ಇವರು ತಮಗೆ ಬೇಡವಾದವರು ಎಂದು ಭಿನ್ನಭೇದವಿಟ್ಟುಕೊಂಡು ಕೆಲಸ ಮಾಡುತ್ತಿರುವಾಗ ಅವರಿಗೆ ಈ ರೇಷ್ಮೆ ಉದ್ಯಮವನ್ನು ಅಭಿವೃದ್ಧಿಗೆ ತರಬೇಕೆಂಬ ಭಾವನೆ ಹೇಗೆ ಇರಲು ಸಾಧ್ಯವಿದೆ? ಈ ಉದ್ಯಮದಲ್ಲಿ ಶಿಕ್ಷಣ ಪಡೆದುಕೊಂಡು ಬಂದಿರುವಂಥ ತರುಣರಿಗೆ ಅವಕಾಶ ಕೊಡಿ ಎಂತ ಕೇಳಿದರೆ ಅದಕ್ಕೂ ಕೂಡ ಇಲಾಖೆಯಲ್ಲಿ ಒಂದು ಶೂನ್ಯತೆ ಉಂಟಾಗಿದೆ. ಹೀಗೆ ಒಂದಲ್ಲ ನಾನಾ ರೀತಿಯಲ್ಲಿ-ಮೊಟ್ಟೆಗಳನ್ನು ತಯಾರಿಸತಕ್ಕದ್ದರಲ್ಲಿ, ರೇಷ್ಮೆ ಗೂಡುಗಳನ್ನು ತಯಾರಿಸತಕ್ಕದ್ದರಲ್ಲಿ, ಚಂದ್ರಿಕೆ ಮಾಡತಕ್ಕದ್ದರಲ್ಲಿ—ಇತ್ಯಾದಿ ಯಾವ ಒಂದು ಬಾಬಿಗೂ ಸರ್ಕಾರದವರು ನಿಗಾ ಕೊಡದೆ ಇರುವುದು ತುಂಬ ಶೋಚನೀಯವಾಗಿದೆ.

ಇನ್ನು ಗೂಡುಗಳನ್ನು ತಯಾರಿಸುವುದು ಅವುಗಳ ವ್ಯಾಪಾರದಲ್ಲಿ ಮತ್ತು ಅವುಗಳನ್ನು ಚುನಾಯಿಸಿಕೊಳ್ಳುವುದರಲ್ಲಿ ಅಲ್ಲಿ ಸಹ ನಮ್ಮ ಮಾಲಿಗೆ ತಕ್ಕ ಧಾರಣೆಗಳು ಸಿಕ್ಕುವಂತಿಲ್ಲ. ಮೊದಲು ಒಂದು ಜೂಟಿಗೆ ಆರುಕಾಸಿತ್ತು. ಈಗ ಅದು 20 ರಷ್ಟು ಹೆಚ್ಚಾಗಿದೆ. ಹೀಗಾಗಿ ಈ ದಿವಸ ಜೂಟಿನ ಕಾರ್ಖಾನೆಗಳೆಲ್ಲ ಮುಚ್ಚಲ್ಪಟ್ಟಿರುತ್ತವೆ. ಇದಕ್ಕೆ ಕಾರಣ ಒಂದು ಒಳ್ಳೆಯ ವ್ಯವಸ್ಥೆಯನ್ನು ಮಾಡದಿರತಕ್ಕದ್ದೇ ಆಗಿದೆ. ಇದು ಇಲಾಖೆಯಲ್ಲಿ ದಕ್ಷತೆ ಎಷ್ಟರಮಟ್ಟಿಗೆ ಶೂನ್ಯವಾಗಿದೆಯೆಂಬುದನ್ನು ಎತ್ತಿ ತೋರಿಸುತ್ತಿದೆ. ಇಂಥ ಅವ್ಯವಸ್ಥೆಗಳೆಲ್ಲ ಇರುವಾಗ ಈ ಉದ್ಯಮದ ಅಭಿವೃದ್ಧಿಗಾಗಿ ಒಂದು ಬೋರ್ಡೋ ಅಥವಾ ಒಂದು ಕಾರ್ಪೊರೇಷನ್ನೋ ಯಾವುದಾದರೂ ಒಂದು ಇರತಕ್ಕದ್ದು ಆವಶ್ಯಕ ಎಂಬುದನ್ನು ಯಾರಾದರೂ ಸಹ ಒಪ್ಪಿಕೊಳ್ಳಲೇಬೇಕು. ಆದುದರಿಂದ ಸರ್ಕಾರದವರು ಈ ವಿಚಾರದ ಕಡೆಗೆ ಹೆಚ್ಚಿನ ಗಮನ ಕೊಡಬೇಕಾದದ್ದು ಅತ್ಯಗತ್ಯ. ಸರ್ಕಾರದವರು ಈ ವಿಚಾರದ ಕಡೆಗೆ ತಮ್ಮ ಒಂದು ಒಳ್ಳೆಯ ಗಮನವನ್ನು ಕೊಡದೆ ಹೋದರೆ ಈ ಉದ್ಯಮದಲ್ಲಿ ನಿರತರಾಗಿರತಕ್ಕ ಲಕ್ಷಾಂತರ ಜನರಿಗೆ ತುಂಬ ಅನ್ಯಾಯ ಮಾಡಿದಂತಾಗುತ್ತದೆ. ಈ ಒಂದು ರೇಷ್ಮೆ ವ್ಯವಸಾಯವನ್ನು ಪೋಷಿಸಿಕೊಂಡು ಬರಲು ಎಲ್ಲಾ ಹಂತಗಳಲ್ಲೂ ರೈತರಿಗೂ ಮತ್ತು ಇತರ ಉದ್ಯಮದಲ್ಲಿ ತೊಡಗಿರತಕ್ಕ ಜನರಿಗೂ ತಕ್ಕ ಸಹಾಯ ನೀಡಲು ಒಂದು ಒಳ್ಳೆಯ ಸಂಸ್ಥೆಯಿರಬೇಕಾದದ್ದು ಅತ್ಯಗತ್ಯ.

ಇನ್ನು ರೇಷ್ಮೆ ಹುಳುಗಳನ್ನು ಸಾಕತಕ್ಕ ವಿಚಾರದಲ್ಲಿ ಒಳ್ಳೆ ಜಾತಿಯ ಹುಳುಗಳನ್ನು ಸಾಕಿ ಅವುಗಳ ವಂಶವನ್ನ (ರೇಸನ್ನು) ಬೆಳೆಸಿಕೊಂಡು ಅವುಗಳನ್ನು ಉತ್ತಮಪಡಿಸಿಕೊಂಡು ಬರಬೇಕಾದದ್ದು ಅಗತ್ಯ. ನಮ್ಮ ದೇಶದ ಅನೇಕ ಯುವಕರು ಜಪಾನಿಗೆ ಹೋಗಿ ಈ ಬಾಬಿನಲ್ಲಿ ಬಹಳ ಶ್ರಮಪಟ್ಟು ಶಿಕ್ಷಣ ಪಡೆದುಕೊಂಡು ಬಂದಿದ್ದಾರೆ. ಸರ್ಕಾರದಲ್ಲಿ ಅಂಥವರಿಗೆ ಪ್ರೋತ್ಸಾಹದ ಶೂನ್ಯತೆಯಾಗಿ ಅವರಿಂದ ಈ ದೇಶಕ್ಕೇನೂ ಪ್ರಯೋಜನವಾಗುತ್ತಿಲ್ಲ. ನಮ್ಮಲ್ಲಿ ಉತ್ತಮವಾದ ಥಳಿ ಇರುವುದಿಲ್ಲ. ಅದರ ಅಭಿವೃದ್ಧಿಗೆ ಆ ಶಿಕ್ಷಣ ಪಡೆದಂಥ ಜನರು ಬಹಳ ಪ್ರಯತ್ನಗಳನ್ನು ಮಾಡಿದರು. ಆದರೆ ಸರ್ಕಾರದವರು ಬೆಂಬಲ ನೀಡದಿದ್ದುದರಿಂದ ಅವರ ಪ್ರಯತ್ನಗಳು ಮುಂದುವರೆಯಲು ಸಾಧ್ಯವಾಗಲಿಲ್ಲ. ಯಾರು ಉತ್ತಮ ಮೊಟ್ಟೆಗಳನ್ನು ತಯಾರಿಸುತ್ತಾರೋ ಅವರು ಅಂಥಾ ಮೊಟ್ಟೆಗಳನ್ನು ಬೇರೆ ಕಡೆಗಳಿಗೆ ರವಾನೆ ಮಾಡಲು ಇಷ್ಟಪಡುವುದಿಲ್ಲ. ಪರದೇಶಕ್ಕೆ ಶಿಕ್ಷಣ ಪಡೆಯಲು ಹೋಗಿದ್ದಂಥವರು ಅಲ್ಲಿ ಏನೇನೋ ಮಾಡಿಕೊಂಡು ಅಲ್ಲಿದ್ದ ಆಳುಗಳನ್ನು ಹೊಂದಿಕೊಂಡು ಕೆಲವು ಮೊಟ್ಟೆಗಳನ್ನೇನೋ ಇಲ್ಲಿಗೆ ತಂದಿದ್ದರು. ಆದರೆ ಅವುಗಳನ್ನು ಇಲ್ಲಿ ಬೆಳೆಸಿ ಅಭಿವೃದ್ಧಿಮಾಡಿಕೊಳ್ಳಲು ಸರ್ಕಾರ ಪ್ರೋತ್ಸಾಹ ನೀಡಲಿಲ್ಲ. ಯಾವಾಗ ಹೊರದೇಶದವರಿಗೆ ಅವರ ದೇಶದ ರೇಷ್ಮೆಯ ಅಭಿವೃದ್ಧಿಯಲ್ಲಿ ಮಾತ್ರ ಆಸಕ್ತಿ ಇದ್ದು ಅಂಥಾ ಶ್ರೇಷ್ಠವಾದ ಉತ್ತಮ ಜಾತಿ ಹುಳುಗಳನ್ನು ಬೇರೆ ದೇಶಕ್ಕೆ ಕೊಡಲು ಅವರು ಇಚ್ಛೆಪಡುತ್ತಿಲ್ಲವೋ ಆಗ ನಾವು ಇಲ್ಲಿ ನಮ್ಮ ಥಳಿಯನ್ನು ಉತ್ತಮಗೊಳಿಸಲು ಯಾವ ಒಂದು ಪ್ರಯತ್ನವನ್ನೂ ಮಾಡದೆ ಇರುವುದು ತುಂಬ ಶೋಚನೀಯ.

ಹೀಗೆ ಈ ಉದ್ಯಮದ ಪ್ರತಿಯೊಂದು ಹಂತದಲ್ಲೂ ಸರ್ಕಾರದ ಪ್ರೋತ್ಸಾಹ ಅತ್ಯಗತ್ಯವಾಗಿ ಬೇಕಾಗಿರುತ್ತದೆ. ಆದಕಾರಣ ಸರ್ಕಾರದವರು ಈ ಸಮಸ್ತ ಕೆಲಸಗಳನ್ನೂ ಒಂದು ಸುವ್ಯವಸ್ಥೆಯಿಂದ ಮಾಡತಕ್ಕಂಥ ಒಂದು ಸಂಸ್ಥೆಯನ್ನು ಬೋರ್ಡೆಂತಲಾಗಲಿ ಅಥವಾ ಕಾರ್ಪೊರೇಷನ್ ಎಂತಲಾಗಲಿ ಏರ್ಪಾಡು ಮಾಡತಕ್ಕದ್ದು ತುಂಬ ಆವಶ್ಯಕ ಎಂದು ಇಷ್ಟು ಮಾತುಗಳನ್ನು ಹೇಳಿ ನಾನು ಈ ನಿರ್ಣಯವನ್ನು ವಿರೋಧಿಸುತ್ತೇನೆ.

2-30 P.M.

†ಶ್ರೀ ಟಿ. ಪಿ. ಬೋರಯ್ಯ (ಕೊಳ್ಳೇಗಾಲ).—ಸ್ವಾಮಿ, ರೇಷ್ಮೆ ಕೈಗಾರಿಕೆಯ ವಿಚಾರದಲ್ಲಿ ಕಾರ್ಪೊರೇಷನ್ ಮಾಡಬೇಕೆಂದು ತಂದಿರತಕ್ಕ ನಿರ್ಣಯದಲ್ಲಿರುವ ತತ್ವವನ್ನು ಒಪ್ಪಿಕೊಳ್ಳುತ್ತ ಸದ್ಯದ ಪರಿಸ್ಥಿತಿಯಲ್ಲಿ ಇದು ಅಷ್ಟಾಗಿ ಫಲಕಾರಿಯಾದುದಲ್ಲವೆಂದು ಹೇಳಬೇಕಾಗಿದೆ. ಈ ರೇಷ್ಮೆ ಕೈಗಾರಿಕೆಯನ್ನು ಸಾಮಾನ್ಯವಾಗಿ ಖಾಸಗೀ ಸಂಸ್ಥೆಗಳೇ ಇದುವರೆಗೂ ನಡೆಸಿಕೊಂಡು ಬಂದುವು. ಅದರಲ್ಲಿ ಚನ್ನಪಟ್ಟಣದಲ್ಲಿರುವ ಮೈಸೂರು ಸ್ಪನ್ ಸಿಲ್ಕ್ ಮಿಲ್ಸ್ ಮತ್ತು ಮೈಸೂರು ಸಿಲ್ಕ್ ಫಿಲೇಚರ್ಸ್ ಇವುಗಳನ್ನು ಖಾಸಗಿ ಸಂಸ್ಥೆಗಳು ನಡೆಸಿಕೊಂದು ಬಂದುವು. ಸ್ಪನ್ ಸಿಲ್ಕ್ ಮಿಲ್ಸ್ ಫಲಕಾರಿಯಾಗಿ ಕೆಲಸ ಮಾಡದೆ ಈಗ ಸದ್ಯಕ್ಕೆ ಮುಚ್ಚಿದೆ. ಮೈಸೂರು ಸಿಲ್ಕ್ ಫಿಲೇಚರ್ಸ್ ಸಂಸ್ಥೆಯವರೂ ಸಹ ಸರಿಯಾಗಿ ನಡೆಯಿಸದೇ ಇರುವುದರಿಂದ ಅದನ್ನು ಸರ್ಕಾರದವರೇ ವಹಿಸಿಕೊಂಡು, ನಡಸಿಕೊಂಡು ಬರುತ್ತಿದ್ದಾರೆ. ಕೈಗಾರಿಕಾ ಕಾರ್ಪೊರೇಷನ್ ಆಗಬೇಕಾಗಿದ್ದರೆ ಆ ಸಂಸ್ಥೆ ಸಾಮಾನ್ಯವಾಗಿ self-sufficient ಆಗಿರಬೇಕು ಎಂದು ನನ್ನ ಅಭಿಪ್ರಾಯ. ಈಗಾಗಲೇ ಈ ಉದ್ಯಮ ಬಹಳ ಲುಕ್ಸಾನಿನಲ್ಲಿ ನಡೆಯುತ್ತಿರುವುದರಿಂದ ಇಂಥ ಸ್ಥಿತಿಯಲ್ಲಿ ಕಾರ್ಪೊರೇಷನ್ ಮಾಡುವುದು ಅಗತ್ಯವಿಲ್ಲವೆನ್ನುವುದು ನನ್ನ ಭಾವನೆ. ಈಗಾಗಲೇ ಒಂದು ಪೌಂಡಿಗೆ ಮೂರರಿಂದ ಮೂರೂವರೆ ರೂಪಾಯಿಗಳವರೆಗೂ ಲುಕ್ಸಾನು ಆಗುತ್ತಿದೆ ಎನ್ನುವ ಅಂಶ

ಸರ್ಕಾರಕ್ಕೂ ಮತ್ತು ಮಾನ್ಯ ಸದಸ್ಯರಿಗೂ ಗೊತ್ತಿದೆ.

ರೇಷ್ಮೆ ಉದ್ಯಮ ಮೈಸೂರು ಜಿಲ್ಲೆಯೊಳಗೆ ಬಹಳ ಜಾಸ್ತಿ. ಸುಮಾರು ಶೇಕಡ 80ರಷ್ಟು ಜನ ಈ ವ್ಯವಸಾಯೋದ್ಯಮದಲ್ಲಿ ತೊಡಗಿದ್ದಾರೆ. ಸುಮಾರು ಎಂಟು ಲಕ್ಷ ಜನ ಈ ವ್ಯವಸಾಯದಲ್ಲಿ ನಿರತರಾಗಿದ್ದಾರೆ. ಇವರಿಗೆ ಸರ್ಕಾರದ ರಕ್ಷಣೆ ಅಗತ್ಯವಾಗಿದೆ. ಸರ್ಕಾರ ಈ ಉದ್ಯಮಕ್ಕೆ ರಕ್ಷಣೆಯನ್ನು ಕೊಡದೆ ಇದ್ದರೆ ಆ ಪ್ರಾಂತ್ಯದಲ್ಲಿ ಆರ್ಥಿಕ ಮುಗ್ಗಟ್ಟು ತಲೆದೋರುತ್ತದೆ. ತಾವೇನಾದರೂ ಕಾರ್ಪೊರೇಷನ್ ಮಾಡಿ ಆ ಸಂಸ್ಥೆಗೆ ಇದನ್ನು ವಹಿಸಿದರೆ ಈ ಉದ್ಯಮಕ್ಕೆ ಸಾಕಾದಷ್ಟು ರಕ್ಷಣೆ ದೊರೆಯುವುದಿಲ್ಲ ಮತ್ತು ಅವರು ಆರ್ಥಿಕ ಮುಗ್ಗಟ್ಟಿಗೆ ಸಿಕ್ಕುತ್ತಾರೆ. ಈ ವ್ಯವಸಾಯದಲ್ಲಿ ಮತ್ತು ಕೈಗಾರಿಕೆಯಲ್ಲಿ ಕೆಲಸ ಮಾಡುವ ಜನರೂ ಸಹ ಇದನ್ನು ಅರಿತುಕೊಂಡಿದ್ದಾರೆ. ರೇಷ್ಮೆ ಉದ್ಯಮವನ್ನು ಅಭಿವೃದ್ಧಿ ಮಾಡಬೇಕಾದರೆ, ಒಳ್ಳೆಯ ತಳಿಯನ್ನು ಕೊಡತಕ್ಕದ್ದು ಮತ್ತು ವ್ಯವಸಾಯಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡತಕ್ಕದ್ದು ಮುಖ್ಯ. ಈಗಾಗಲೇ ಕೆಲವು ಸ್ನೇಹಿತರು ಹೇಳಿದಂತೆ ನಮ್ಮಲ್ಲಿ ರೆಂಡೆಟ 16 ರಿಂದ 20ಕ್ಕೆ ಹೋಗಿದೆ. ದಿನೇ ದಿನೇ ನಮ್ಮ ರೇಷ್ಮೆಯ ಉತ್ಕೃಷ್ಟತೆ ಕಡಮೆಯಾಗುತ್ತಿದೆ. ಇದಕ್ಕೆ ಕಾರಣ ನಮ್ಮಲ್ಲಿ ಸಾಕಾದಷ್ಟು ಭೂಮಿ ಫಲವತ್ತಾಗಿಲ್ಲ. ಭೂಮಿ ಫಲವತ್ತಾಗಬೇಕಾದರೆ ಗೊಬ್ಬರ ವಗೈರೆಗಳನ್ನು ಒದಗಿಸತಕ್ಕ ವ್ಯವಸ್ಥೆಯಾಗಬೇಕು. ಸಾಮಾನ್ಯವಾಗಿ ರೇಷ್ಮೆ ವ್ಯವಸಾಯಕ್ಕೆ ರಸಾಯನಿಕ ಗೊಬ್ಬರ ಅಷ್ಟು ಫಲಕಾರಿಯಾದುದಲ್ಲ. Natural manure ಬೇಕಾಗಿರುವುದರಿಂದ ಇದರ ಕಡೆ ಹೆಚ್ಚಿನ ಗಮನವನ್ನು ಇಲಾಖೆಯವರೂ ಮತ್ತು ಸರ್ಕಾರದವರೂ ಕೊಡಬೇಕು ಎಂದು ಸೂಚನೆ ಮಾಡುತ್ತಿದ್ದೇನೆ. ಜಪಾನ್ ದೇಶದಲ್ಲಿ 12 ರೆಂಡೆಟ ಇದ್ದದ್ದು 8ಕ್ಕೆ ಹೋಗಿದೆ; ನಮ್ಮಲ್ಲಿ 16 ರಿಂದ 20ಕ್ಕೆ ಹೋಗಿದೆ. ನಮ್ಮ ರೇಷ್ಮೆಯ ಯೋಗ್ಯತೆ ದಿನೇ ದಿನೇ ಕಡಮೆಯಾಗುತ್ತಿದೆ. ಜಪಾನ್ ದೇಶದವರು ತಮ್ಮ ರೇಷ್ಮೆಯ ಯೋಗ್ಯತೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಇದಕ್ಕೆ ಕಾರಣ ಅಲ್ಲಿಯ ಜನರೂ ಮತ್ತು ಸರ್ಕಾರ ಇದರ ಬಗ್ಗೆ ವಹಿಸಿರತಕ್ಕ ಆಸಕ್ತಿ. ಸರ್ಕಾರದವರು ಸಾಕಾದಷ್ಟು ಮುನ್ನೆಚ್ಚರಿಕೆಯನ್ನು ಈಗಲೇ ತೆಗೆದುಕೊಳ್ಳದೆ, ನಿರ್ಣಯದಲ್ಲಿ ಸೂಚಿಸಿರುವಂತೆ ಕಾರ್ಪೊರೇಷನ್ ಮಾಡಿದರೆ, ಈ ಕೈಗಾರಿಕೆ ಹಾಳಾಗುವುದರಲ್ಲಿ ಸಂಶಯವಿಲ್ಲ. ಆದುದರಿಂದ ಯೋಚನೆಮಾಡಿ ಕಾರ್ಪೊರೇಷನ್ ರಚನೆ ವಿಷಯದಲ್ಲಿ ತೀರ್ಮಾನ ಮಾಡಬೇಕು. ಕಾರ್ಪೊರೇಷನ್ ಮಾಡುವುದಕ್ಕೆ ಇದು ಸಕಾಲವಾಗಿಲ್ಲ.

ಸರ್ಕಾರದವರು ಸ್ಪನ್‌ಸಿಲ್ಕ್ ಕಾರ್ಖಾನೆಯನ್ನು ವಹಿಸಿಕೊಂಡು, ರೈತರ ಹಿತದೃಷ್ಟಿಯಿಂದ ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ನಡೆಸಿ ರಕ್ಷಣೆ ಕೊಡಬೇಕು. ಈಗಾಗಲೇ ಸ್ಪನ್‌ಸಿಲ್ಕ್ ಕಾರ್ಖಾನೆಯನ್ನು ಮುಚ್ಚಿರುವುದರಿಂದ, ನನ್ನ crude ಲೆಕ್ಕದ ಪ್ರಕಾರ 40 ರಿಂದ 50 ಲಕ್ಷ ರೂಪಾಯಿವರೆಗೆ ನಮ್ಮ ಜಿಲ್ಲೆಯ ಜನರಿಗೆ ನಷ್ಟದ ಏಟು ಬಿದ್ದಿದೆ. ಸ್ಪನ್‌ಸಿಲ್ಕ್ ಕಾರ್ಖಾನೆ ಕೆಲಸಮಾಡುತ್ತಿದ್ದಾಗ ಒಂದು ಪೌಂಡ್ ವೇಸ್ಟ್ ಸಿಲ್ಕ್ ಬೆಲೆ 4½ ಯಿಂದ 8 ರೂಪಾಯಿವರೆಗೆ ಇತ್ತು. ಇವೊತ್ತಿನ ದಿವಸ 2 ರಿಂದ 4 ರೂಪಾಯಿಗಳವರೆಗೆ ಇದೆ. ಫ್ಯಾಕ್ಟರಿಯ ಬಂಡವಾಳ ಸುಮಾರು 50 ಲಕ್ಷ ರೂಪಾಯಿ ಎಂದು ಹೇಳುವಾಗ ಪ್ರತಿವರ್ಷ ರೈತರಿಗೆ 50 ಲಕ್ಷ ರೂಪಾಯಿ ಲುಕ್ಸಾನು ಆಗತಕ್ಕ ಪರಿಸ್ಥಿತಿ ಬಂದಿದೆ. ಖಾಸಗಿ ಸಂಸ್ಥೆಯವರು ಇದು ಲಾಭದಾಯಕವಾದ ಕೈಗಾರಿಕೆಯಲ್ಲವೆಂದು ಮುಚ್ಚಿದ್ದಾರೆ. ಇದು ಎಲ್ಲರಿಗೂ ಕೂಡ ಚೆನ್ನಾಗಿ ಗೊತ್ತಿದೆ. ಇಂಥ ಪರಿಸ್ಥಿತಿಯಲ್ಲಿ ಕಾರ್ಪೊರೇಷನ್ ಮಾಡಬೇಕೆಂದು ಹೇಳುವುದು ಸರಿಯಾದುದಲ್ಲವೆಂಬುದು ನನ್ನ ಸ್ವಂತ ಅಭಿಪ್ರಾಯ. ಈಗ ಫಿಲೇಚರ್ ಸಿಲ್ಕ್ ಫ್ಯಾಕ್ಟರಿಗೂ ರಕ್ಷಣೆ ಬೇಕಾಗಿದೆ. ರಕ್ಷಣೆ ಕೊಡದೆ ಹೋದರೆ ಸರಿಯಾಗಿ ಮಾರ್ಕೆಟ್ ಇರುವುದಿಲ್ಲ, ಮಾರ್ಕೆಟ್ ಇಲ್ಲದೆ ಹೋದರೆ ಖಾಸಗಿ ಜನರ ಕೈಗೆ ಸಿಕ್ಕಿ ರೈತರಿಗೆ ಬಹಳ ತೊಂದರೆ ಬರುತ್ತದೆ. ಆದುದರಿಂದ ಮೈಸೂರು ರಾಜ್ಯದಲ್ಲಿರುವ ಸಿಲ್ಕ್ ಫಿಲೇಚರ್‌ಗಳೆಲ್ಲವನ್ನೂ ಒಂದು ಯೂನಿಟ್ ಮಾಡಿ, ಅದನ್ನು ಅಭಿವೃದ್ಧಿ ಮಾಡಿ, ಗೂಡಿಗೆ ಸರಿಯಾದ ಬೆಲೆ ಕೊಟ್ಟು ತೆಗೆದುಕೊಳ್ಳತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ರೇಷ್ಮೆ ವ್ಯವಸಾಯ ಮಾಡತಕ್ಕ ರೈತರೂ ಕೂಡ ಒಂದು ಅಗ್ರಿಮೆಂಟ್ ಮಾಡಿಕೊಳ್ಳಬೇಕು. ಫಿಲೇಚರ್ ಸಂಸ್ಥೆಯವರು ಅವರಿಗೆ ಮುಂಗಡವಾಗಿ ಹಣವನ್ನು ಕೊಟ್ಟು, ಈ ವ್ಯವಸಾಯಕ್ಕೆ ಪ್ರೋತ್ಸಾಹವನ್ನು ಕೊಟ್ಟು, ರೈತರಿಂದ ಗೂಡುಗಳನ್ನು ತೆಗೆದುಕೊಂಡು ಸಂಸ್ಥೆಯನ್ನು ನಡೆಸಬೇಕು. ಇದನ್ನು ಇಲಾಖೆಯವರು ಯೋಚನೆ ಮಾಡಬೇಕು.

ಸಿಲ್ಕ್ ಮಾರ್ಕೆಟಿಂಗ್ ಕೋ-ಆಪರೇಟಿವ್ ಎಂದು ಸ್ಥಾಪನೆ ಮಾಡಿದ್ದಾರೆ. ಅದಕ್ಕೆ ಸಿಲ್ಕ್ ಫಿಲೇಚರಿನ ರೇಷ್ಮೆ ಎಲ್ಲ ಬರಬೇಕಾಗಿದೆ. ಸರ್ಕಾರಿ ಸಿಲ್ಕ್ ಫಿಲೇಚರ್ಸ್, ಕೊಳ್ಳೇಗಾಲ ಮತ್ತು ನಮ್ಮ ಹಳೆಯ ಮೈಸೂರು ರಾಜ್ಯದಲ್ಲಿರತಕ್ಕ ಇತರ ಫಿಲೇಚರ್ ಕಾರ್ಖಾನೆಗಳವರು ಇವರ ಮುಖಾಂತರ ಮಾರಾಟ ಮಾಡಬೇಕೆಂದು ಹೇಳುತ್ತಾರೆ. ಇವರಿಗೆ ನೂರಕ್ಕೆ ಎರಡು ರೂಪಾಯಿಗಳಂತೆ ಕಮಿಷನ್ ಕೊಡಬೇಕು. ಎರಡು ರೂಪಾಯಿ ಪ್ರಕಾರ ಎಂದರೆ ಸುಮಾರು ಲಕ್ಷಾಂತರ ರೂಪಾಯಿ ಕಮಿಷನ್ ಈ ಸಂಸ್ಥೆಗೆ ಕೊಡಬೇಕಾಗುತ್ತದೆ. ಇದು ಬಹಳ ಹೆಚ್ಚಿನ ದರ. ಖಾಸಗಿಯವರು ಎಂಟು ಆಣೆಯ ಕಮಿಷನ್ ಮೇಲೆ ಕೆಲಸಮಾಡುವಾಗ ಸಹಕಾರ ಸಂಸ್ಥೆ ಎರಡು ರೂಪಾಯಿ ಪ್ರಕಾರ ತೆಗೆದುಕೊಳ್ಳತಕ್ಕದ್ದು ಸರಿಯಲ್ಲ. ಸಾಮಾನ್ಯವಾಗಿ ವರ್ಷಕ್ಕೆ ಮೈಸೂರು ಸಿಲ್ಕ್ ಫಿಲೇಚರ್ಸ್‌ನಿಂದ 40 ಲಕ್ಷ, ಕನಕಪುರ ಫಿಲೇಚರ್ಸ್‌ನಿಂದ 20 ಲಕ್ಷ ಮತ್ತು ಕೊಳ್ಳೇಗಾಲ ಫಿಲೇಚರ್ಸ್‌ನಿಂದ 20 ಲಕ್ಷ ಹೀಗೆ ಒಟ್ಟು 80 ಲಕ್ಷ ಪೌಂಡು ರೇಷ್ಮೆ ಉತ್ಪಾದನೆಯಾಗುತ್ತದೆಂದರೆ ಲಕ್ಷಾಂತರ ರೂಪಾಯಿಗಳನ್ನು ಸಿಲ್ಕ್ ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿಗೆ ಸಾಮಾನ್ಯವಾದ ವ್ಯವಹಾರಕ್ಕೋಸ್ಕರ ಕೊಡಬೇಕು. ಇದರಿಂದ ಈ ಕೈಗಾರಿಕೆ ಅಭಿವೃದ್ಧಿಗೆ ಧಕ್ಕೆ ಬರುತ್ತದೆ. ಯಾವ ಪ್ರಮಾಣದಲ್ಲಿ ಕಮಿಷನ್ ಕೊಡಬೇಕೆಂಬುದನ್ನು ಯೋಚಿಸಿ ತೀರ್ಮಾನ ಮಾಡಬೇಕು. ನನ್ನ ಅಭಿಪ್ರಾಯದಲ್ಲಿ ನೂರು ರೂಪಾಯಿಗೆ ಎಂಟಾಣೆ ಕಮಿಷನ್ ಸಾಕು ಎಂದು ಕಾಣುತ್ತದೆ. ಈ ರೀತಿ ಮಾಡುವುದರಿಂದ ಉಳಿಯುವ ದುಡ್ಡಿನಿಂದ ಫಿಲೇಚರ್ಸ್ ಕಾರ್ಖಾನೆಗಳಿಗೆ ಲುಕ್ಸಾನಾಗತಕ್ಕದ್ದನ್ನು ಕಡಮೆಮಾಡಿಕೊಳ್ಳುವುದಕ್ಕೆ ಸಹಾಯವಾಗುತ್ತದೆ. ಇಷ್ಟನ್ನು ಹೇಳಿ ಈಗ ತಾತ್ಕಾಲಿಕವಾಗಿ ಕಾರ್ಪೊರೇಷನ್ ಮಾಡುವುದರ ಅಗತ್ಯವಿಲ್ಲವೆಂದು ನಾನು ಈ ನಿರ್ಣಯವನ್ನು ವಿರೋಧಿಸುತ್ತೇನೆ.

Sri C. M. ARUMUGHAM (Kolar Gold Fields).—Sir, under rule 299 of the Rules of Procedure I move a closure because this resolution has

(SRI C. M. ARUMUGHAM)

been discussed for the last two days and there are other important resolutions to be discussed.

Sri V. P. DEENADAYALU NAIDU (Cubbonpet).—Sir, our friends were very much aggrieved that they did not get sufficient time at the time of Demands for Grants to discuss industries. This resolution provides them sufficient opportunity to discuss that. There are yet 4 or 5 members who want to speak on the resolution.

Mr. DEPUTY SPEAKER.—I do not accept the closure motion.

Sri B. L. NARAYANASWAMY (Mulbagal).—Our only anxiety is that we must take up the next resolution about Karnataka; that is why Sri Arumugham raised a motion for closure.

Sri Y. VEERAPPA (Holenarsipur).—For the past three days we are discussing only one resolution. In this respect we want to know the intention of the Government, whether they are allowing us to discuss the other resolution.

Sri B. D. JATTI (Chief Minister).—If one or two members want to speak till the recess, they may speak and immediately we will reply. If no other members wish to take part in the discussion on this resolution, I have no objection to the reply being given and another resolution taken up.

†ಶ್ರೀ ಕೆ. ಪಿ. ಬೈರೇಗೌಡ (ಬೆಂಗಳೂರು ಉತ್ತರ ತಾಲ್ಲೂಕು).—ಸ್ವಾಮೀ, ನಮ್ಮ ದೇಶದಲ್ಲಿರುವ ರೇಷ್ಮೆ ಕೈಗಾರಿಕೆಯನ್ನು ಮುಂದೆ ತರುವುದಕ್ಕಾಗಿ ಒಂದು ಕಾರ್ಪೊರೇಷನ್ನನ್ನು ತರಬೇಕು ಎಂದು ಮಾನ್ಯ ಶ್ರೀ ಲಿಂಗೇಗೌಡರು ಒಂದು ನಿರ್ಣಯವನ್ನು ಇಲ್ಲಿ ತಂದಿದ್ದಾರೆ. ಬಹುಶಃ ಅವರು ಈ ರೇಷ್ಮೆ ಕೈಗಾರಿಕೆಯ ಕಷ್ಟಗಳನ್ನು ಅರಿತು ಆ ಮೈಸೂರು ದೇಶದಲ್ಲಿ ಬಹು ವರ್ಷಗಳಿಂದಲೂ ಉತ್ತಮಗೊಳ್ಳಲಿಲ್ಲವಲ್ಲ ಎನ್ನುವ ಒಂದು ಶಂಕೆಯಿಂದ ಈ ರೀತಿಯಾದ ನಿರ್ಣಯವನ್ನು ತಂದಿದ್ದಾರೆಂದು ತೋರುತ್ತದೆ. ಈ ಕೈಗಾರಿಕೆಯ ಬಗ್ಗೆ ಪೂರ್ಣವಾದ ಅನುಭವಗಳನ್ನು ಪಡೆದಂತಹ ಶ್ರೀ ವೆಂಕಟಪ್ಪನವರು ಇದರ ವಿಷಯಗಳನ್ನು ಬಹಳ ಚೆನ್ನಾಗಿ ತಿಳಿಸಿದರು. ಇದರಲ್ಲಿ ಮುಖ್ಯವಾಗಿ ಏನು ಕುಂದಕವಿದೆ ಎನ್ನುವುದನ್ನು ಯೋಚನೆ ಮಾಡಬೇಕಾದುದು ಅಗತ್ಯ. ನಾನು ಸುಮಾರು ಆರು ವರ್ಷಗಳಿಂದ ಇದರ ಬಡ್ಜೆಟ್ಟನ್ನು ನೋಡುತ್ತ ಬರುತ್ತಿದ್ದೇನೆ. ಈ ರೇಷ್ಮೆ ಕೈಗಾರಿಕೆಗಾಗಿ ಕೊಡುತ್ತಿದ್ದ ಹಣವೆಲ್ಲ ಪೂರ್ಣವಾಗಿ ಖರ್ಚಾಗದೇ ಲ್ಯಾಪ್ಸ್ ಆಗುತ್ತಿರುವುದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರುವ ವಿಷಯ. ಇದಕ್ಕೆ ಕೇಂದ್ರ ಸರಕಾರದ ಸಹಾಯವಿದೆ. ರಾಜ್ಯ ಸರಕಾರದವರು ಪ್ರಯತ್ನಪಟ್ಟರೆ ಈ ತರಹದ ಒಂದು ರೇಷ್ಮೆ ಕೈಗಾರಿಕೆಯನ್ನು ಒಂದು ಉತ್ತಮವಾದ ಮಟ್ಟಕ್ಕೆ ತರುವ ಅವಕಾಶ ಅವರ ಕೈಯಲ್ಲಿದೆ. ಇಂತಹ ಸಂಪತ್ತನ್ನು ತರುವ ರೇಷ್ಮೆ ಕೈಗಾರಿಕೆಯನ್ನು ನಮ್ಮ ದೇಶದಲ್ಲಿ ಬಿಟ್ಟು ಹೊರಗಿನಿಂದ ನಾವು ಸಿಲ್ಕಿನ ವಸ್ತುಗಳನ್ನು ಇಂಪೋರ್ಟ್ ಮಾಡುತ್ತಿದ್ದೇವೆ. ನಮ್ಮಲ್ಲಿ ಸುಮಾರು ಶೇಕಡ ಎಪ್ಪತ್ತರಿಂದ ಎಂಬತ್ತರಷ್ಟು ಭಾಗ ಈ ವ್ಯವಸಾಯವನ್ನು ಮಾಡತಕ್ಕ ಜನರಿದ್ದಾರೆ ಮತ್ತು ಕೈಗಾರಿಕೆಯಲ್ಲಿ ಸಾಕಾದಷ್ಟು ಮಾಹಿತಿಯನ್ನು, ಅನುಭವವನ್ನು ಪಡೆದಂತಹ ಜನಗಳು ಈ ಇಲಾಖೆಯಲ್ಲಿದ್ದರೆ ಅವರು ಆಸಕ್ತಿ ವಹಿಸಿ ಇದನ್ನು ಮುಂದಕ್ಕೆ ತರಬಹುದಾಗಿತ್ತು. ಇದಕ್ಕೆ ಇಂಡಿಯಾ ಸರಕಾರದವರಾಗಲೇ ಈ ಇಲಾಖೆಯಲ್ಲಿರುವ ಅಧಿಕಾರಿಗಳಲ್ಲಿ ಸರಿಯಾದ ಆಸಕ್ತಿ ಇಲ್ಲದೇ ಇರುವುದೇ ಕಾರಣವಾಗಿದೆಯೇ ಎನ್ನುವುದನ್ನು ಇನ್ನೂ ಯೋಚನೆ ಮಾಡಬೇಕಾಗಿದೆ. ನಾವೆಲ್ಲರೂ ಈಗ ಲಕ್ಷಾಂತರ ರೂಪಾಯಿಗಳಷ್ಟು ಚೈನಾ ಸಿಲ್ಕ್, ಜಪಾನು ಸಿಲ್ಕ್ ಎಂದು ಇಂಪೋರ್ಟ್ ಮಾಡಿ ಬಂಗಾರ ವಗೈರೆಗಳನ್ನು ಹೇಗೆ ಉಪಯೋಗಿಸುತ್ತಾರೋ ಆ ರೀತಿಯಾಗಿ ಜನ ಈ ಬಟ್ಟೆಗಳ ಮೇಲೆ ಪ್ರೇಮವನ್ನಿಟ್ಟಿರುತ್ತಾರೆ. ಇಂತಹ ಉತ್ತಮವಾದ ಬಟ್ಟೆಗಳನ್ನು ಮಾಡಿಕೊಳ್ಳುವುದಕ್ಕೆ ಬೇಕಾಗುವಷ್ಟು ಸೊಪ್ಪನ್ನು ಬೆಳೆದುಕೊಳ್ಳದೇ ಇರುವುದಕ್ಕೆ ಕಾರಣವೇನಾಗಿದೆ ಎಂದರೆ, ಈ ಭಾಗದಲ್ಲಿ ಹೆಚ್ಚಿನ ರೀಸರ್ಚನ್ನು ಮಾಡುವ ಕಡೆಗೆ ಗಮನ ಕೊಟ್ಟಿಲ್ಲ. ಆ ರೀತಿಯಾಗಿ ಗಮನ ಕೊಟ್ಟಿದ್ದರೆ ಇದನ್ನು ಸುಧಾರಿಸಬಹುದಾಗಿತ್ತು. ಇಲಾಖೆಯಲ್ಲಿರುವ ಅಧಿಕಾರಿಗಳನ್ನು ತರಬೇತಿಗಾಗಿ ಕಳುಹಿಸಿ ಯಾವ ವೇಗದಲ್ಲಿ ತರಬಹುದಾಗಿತ್ತೋ ಆ ವೇಗದಲ್ಲಿ ತರುವ ಪ್ರಯತ್ನವನ್ನು ಮಾಡಿಲ್ಲ. ಆಂಧ್ರ ಪ್ರಾಂತದಲ್ಲಿರುವ ಬಾರ್ಡರಿನಲ್ಲಿ ಚಿತ್ತೂರಿನ ಬಳಿ ಒಂದು ರೀಸರ್ಚ್ ಸ್ಟೇಷನ್ನನ್ನು ತೆಗೆಯಲು ಆರಂಭ ಮಾಡಿದ್ದಾರೆ. ಇದು ಬಹುಶಃ ಆರಂಭವಾಗಿ ಸುಮಾರು ಒಂದು ಒಂದೂವರೆ ವರ್ಷವಾಗಿರಬಹುದು. ನಮ್ಮ ರೀಸರ್ಚ್ ಸ್ಟೇಷನ್ನಿನಷ್ಟು ದೊಡ್ಡದೇನೂ ಅಲ್ಲ. ನಮ್ಮಲ್ಲಿ ಇನ್ನೂ ಕೆಲಸವನ್ನೇ ಆರಂಭ ಮಾಡಿಲ್ಲ. ಆದರೆ ಆ ದೇಶದಲ್ಲಿ ಈ ಕೈಗಾರಿಕೆಯ ಕಡೆಗೆ ಎಷ್ಟು ವೇಗದಿಂದ ಹೇಗೆ ಮನಸ್ಸು ಕೊಡುತ್ತಿದ್ದಾರೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಇವತ್ತಿನ ದಿವಸ ಬೆಂಗಳೂರು, ಕೋಲಾರ ಮತ್ತು ಮೈಸೂರು ಈ ಮೂರು ಡಿಸ್ಟ್ರಿಕ್ಟುಗಳಲ್ಲಿ ಈ ಬೆಳೆಗೆ ಬೇಕಾದ ವ್ಯವಸಾಯ ಆಗಬೇಕಾಗಿದೆ. ಆದರೆ ಹೆಚ್ಚಿನ ವ್ಯವಸಾಯವಾಗಲು ಇದರಲ್ಲೇನೋ ಕಷ್ಟಗಳಿರುವುದು ಗೊತ್ತಾಗುತ್ತದೆ. ನೀರಾವರಿ ಇರುವ ಪ್ರದೇಶಗಳಲ್ಲಿ ವರ್ಷಕ್ಕೆ ಆರು ಬೆಳೆಗಳನ್ನು ತೆಗೆಯಬೇಕೆಂದು ಇದ್ದರೂ ಕೂಡ ಮೂರು ಬೆಳೆ ಮಾತ್ರ ಬೆಳೆಯುತ್ತಿದ್ದಾರೆ. ಇದಕ್ಕೆ ಮುಖ್ಯವಾಗಿ ಬಿತ್ತನೆಯ ಕಾಲದಲ್ಲಿ ಅವರಿಗೆ ಮೊಟ್ಟೆಯು ಸರಿಯಾಗಿ ಹಣ್ಣಾಗದೆ ಸುಮಾರು ಮೂವತ್ತು ಮೂವತ್ತೆರಡು ದಿನಗಳವರೆಗೆ ಇರಬೇಕಾದ ಪರಿಸ್ಥಿತಿ ಒದಗಿ ಈ ಬಿತ್ತನೆಯ ದೋಷದಿಂದ ಬೆಳೆಯಾಗುತ್ತಿಲ್ಲ ಎಂದು ಅಲ್ಲಿನ ಜನ ವ್ಯಸನಪಡುತ್ತಿದ್ದಾರೆ. ಈ ವಿಷಯದಲ್ಲಿ ರೀಸರ್ಚ್ ವರ್ಕನ್ನು ಮಾಡಬೇಕು. ಇವತ್ತಿನ ದಿವಸ ವಿದ್ಯಾವಂತರಾದ ನಮ್ಮ ರೈತರ ಮಕ್ಕಳು ಈ ವ್ಯವಸಾಯವನ್ನು ಮಾಡುವುದು ಬಹಳ ಕಷ್ಟವಾಗಿದೆ ಎಂದು ಹೋಗುತ್ತಿಲ್ಲ. ಏಡೆಡ್ ಗ್ರೈನೇಜುಗಳಿಗೆ ಮುಖ್ಯವಾಗಿ

ಬೇಕಾಗುವಂತಹ ಸೌಲಭ್ಯಗಳನ್ನು ಮಾಡಿಕೊಟ್ಟರೆ ಇನ್ನೂ ಹೆಚ್ಚಿನ ಬೆಳೆಯನ್ನು ಇದರಲ್ಲಿ ಮಾಡಿ ಈ ಕೈಗಾರಿಕೆಯನ್ನು ಮುಂದಕ್ಕೆ ತರಬಹುದು. ಇಂಟೆನ್ಸಿವ್ ಆಗಿ ಕಲ್ಟಿವೇಷನ್ನು ಮಾಡುವ ಜನಕ್ಕೆ ಈ ರೀತಿಯಾದ ಸೌಲಭ್ಯಗಳು ದೊರೆತರೆ ಹೆಚ್ಚಿನ ಅವಕಾಶ ಸಿಕ್ಕುತ್ತದೆ. ಇದನ್ನೆಲ್ಲ ಪರಿಶೀಲಿಸಿ ಇದಕ್ಕೆ ಸಂಬಂಧಪಟ್ಟ ಇಲಾಖೆಯವರು ರೀಸರ್ಚಿನ ಕಡೆಗೆ ಹೆಚ್ಚಿನ ಗಮನ ಕೊಡ ಕೊಡಬೇಕೆಂದು ನಾನು ಇಲ್ಲಿ ಸೂಚನೆ ಕೊಡುತ್ತೇನೆ.

ಇದರಲ್ಲಿ ಮುಖ್ಯವಾಗಿ ರೇಷ್ಮೆಗೆ ಬೇಕಾಗುವಂತಹ ಸೊಪ್ಪನ್ನು ಬೆಳೆಯುವವರಿಗೆ ಇಲ್ಲಿಯವರಿಗೆ ಏನೇನು ಕಷ್ಟಗಳಾಗುತ್ತಿವೆ ಎನ್ನುವುದನ್ನು ನೋಡಿ ಸ್ಟೇಜು ಬೈ ಸ್ಟೇಜಾಗಿ ಇವುಗಳನ್ನು ನಿವಾರಣೆ ಮಾಡಿಬಿಟ್ಟರೆ ಇಂತಹ ಒಂದು ಕಾರ್ಪೊರೇಷನ್ನನ್ನು ಮಾಡಬೇಕಾಗಿ ಬರುವುದಿಲ್ಲ. ಇದನ್ನು ಮಾಡುವುದಕ್ಕೆ ಇನ್ನೂ ಸ್ವಲ್ಪ ಹೆಚ್ಚಿನ ಮನಸ್ಸು ಕೊಡಬೇಕು. ಇವತ್ತು ನಮ್ಮಲ್ಲಿ ನಾಲ್ಕಾರು ಕಾರ್ಖಾನೆಗಳು, ಎಷ್ಟೋ ಸಿಲ್ಕು ಮಿಲ್ಲುಗಳು ಇವೆ. ಇದನ್ನು ನಿಜವಾಗಿಯೂ ಒಳಹೊಕ್ಕು ನೋಡಿದರೆ ನಮ್ಮ ಸ್ನೇಹಿತರು ಈ ರೀತಿಯಾದ ನಿರ್ಣಯವನ್ನು ತರಬೇಕಾಗಿತ್ತೋ ಇಲ್ಲವೋ ಎನ್ನುವುದನ್ನು ಯೋಚನೆ ಮಾಡುತ್ತಿದ್ದರು. ಸರಕಾರ ಇದಕ್ಕಾಗಿ ಎಷ್ಟರಮಟ್ಟಿಗೂ ನೆರವು ಕೊಡುತ್ತಿಲ್ಲ, ಯಾವ ರೀತಿಯಾಗಿಯೂ ಯೋಚನೆ ಮಾಡುತ್ತಿಲ್ಲವೆಂದು ಬೇಸಿಸ್ ಮೇಲೆ ಎಂದು ಈ ರೀತಿಯಾದ ಕಾರ್ಪೊರೇಷನ್ನು ಮಾಡಬೇಕೆಂದು ನಿರ್ಣಯ ತಂದಿದ್ದಾರೆ. ಎಲೆಕ್ಟ್ರಿಸಿಟಿ ಬೋರ್ಡು ಎಂದು "ನೋ ಲಾಸು ನೋ ಗೇನು" ಬೇಸಿಸ್ ಮೇಲೆ ತರಲಾಗಿದೆ. ಇದರಲ್ಲಿ ಇಷ್ಟುಮಟ್ಟಿಗೆ ಕೆಲಸವಾಗಿ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಯೋಚನೆಮಾಡಿದ್ದರೆ ಈಗಿರತಕ್ಕ ನ್ಯೂನತೆಗಳೇನು ಎನ್ನುವುದು ಸರಕಾರಕ್ಕೆ ಮನದಟ್ಟಾಗುತ್ತಿತ್ತು. ನಮ್ಮ ಸ್ನೇಹಿತರು ಹೇಳಿದಂತೆ ಕಾನೂನಿನಲ್ಲಿ ಆಸಕ್ತಿ ಇರುವ ಜನರು ಈ ಇಲಾಖೆಯ ಸಾಕರ್ಯಗಳ ಕಡೆಗೆ ಗಮನವನ್ನು ಕೊಟ್ಟು ಮತ್ತು ಎಲ್ಲ ತಜ್ಞರ ಸಲಹೆಗಳನ್ನೂ ತೆಗೆದುಕೊಂಡು ಇದಕ್ಕೆ ಎಷ್ಟು ಮಾನ್ಯತೆಯನ್ನು ಕೊಡಬಹುದೋ ಅಷ್ಟನ್ನೂ ಬಹುಮಟ್ಟಿಗೆ ಒದಗಿಸಿಕೊಡಬಹುದಾಗಿತ್ತು. ನಮಗೆ ಈಗಾಗಲೇ ತಿಳಿದಂತೆ ಚೆನ್ನಪಟ್ಟದಲ್ಲಿದ್ದ ಸಿಲ್ಕಿನ ಫ್ಯಾಕ್ಟರಿಯನ್ನು ಎಷ್ಟರಮಟ್ಟಿಗೆ ನಡೆಸಿಕೊಂಡು ಹೋಗುತ್ತಿದ್ದರು ಎನ್ನುವುದು ಗೊತ್ತಿದೆ ಇದರಲ್ಲಿ ಸುಮಾರು ಒಂದು-ಒಂದೂವರೆ ಸಾವಿರ ಜನ ಜೀವನ ಮಾಡುತ್ತಿದ್ದರು. ಇಂತಹ ಒಂದು ಕಾರ್ಖಾನೆಯನ್ನು ಮುಚ್ಚಿದುದರಿಂದ ಈ ಜನಗಳ ಜೀವನಕ್ಕೆ ಧಕ್ಕೆಯುಂಟಾಯಿತು. ಇಂತಹ ಉತ್ತಮವಾದ ಕಾರ್ಖಾನೆಯಲ್ಲಿ ವೇಸ್ಟು ಸಿಲ್ಕುಗಳನ್ನು ಉಪಯೋಗಿಸಿಕೊಂಡು ಉತ್ತಮವಾದ ಬಟ್ಟೆಯನ್ನು ಮಾಡುತ್ತಿದ್ದುದು ಇದೊಂದೇ ಕಾರ್ಖಾನೆಯಾಗಿತ್ತು. ಇಡೀ ದೇಶದ ರಾಜಕೀಯಗಳ ಒಂದು ಒತ್ತಾಯದಿಂದ ಇಂತಹ ಸಿಲ್ಕು ಫ್ಯಾಕ್ಟರಿಯು ಹಾಳಾಗಿ ಹೋಗಲು ಕಾರಣವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇದನ್ನು ಯಶಸ್ವಿಯಾದ ರೀತಿಯಲ್ಲಿ ಮಾಡಲು ಸಾಕಷ್ಟು ಸೌಲಭ್ಯಗಳನ್ನು ಕೊಟ್ಟು ಸರಕಾರವೇ ನಡೆಸುವಂತೆ ಮನಸ್ಸು ಮಾಡಬೇಕು. ಖಾಸಗಿಯವರಿಗೆ ಕೊಡುವುದಕ್ಕೆ ಅವಕಾಶ ಕೊಡದೆ ಸರಕಾರದವರೇ ನಡೆಸಬೇಕೆಂದು ತಮ್ಮ ಮೂಲಕ ಸರಕಾರಕ್ಕೆ ನಿವೇದಿಸಿಕೊಳ್ಳುತ್ತೇನೆ. ಇದರಲ್ಲಿರುವ ಲೋಪದೋಷಗಳೇನು ಎನ್ನುವುದನ್ನೆಲ್ಲ ನಿವಾರಣೆಮಾಡಲು ಸರಕಾರ ಯೋಚಿಸಬೇಕು. ಮತ್ತು ನಾನಾಗಲೇ ತಿಳಿಸಿದಂತೆ ಆರು ವರ್ಷಗಳಿಂದ ಬರುತ್ತಿರುವ ಬಡ್ಜೆಟ್ಟನ್ನು ನೋಡಿದರೆ ಇದಕ್ಕೆ ಕೊಡುತ್ತಿರುವ ಹಣ ಲ್ಯಾಪ್ಸು ಆಗುತ್ತಿದೆ. ಈ ರೀತಿ ಲ್ಯಾಪ್ಸು ಆಗುತ್ತಿರುವುದರಿಂದ ಹೆಚ್ಚಾಗಿ ಜನ ಜಪಾನು ಸಿಲ್ಕು ಮತ್ತು ಚೈನಾ ಸಿಲ್ಕು ಎನ್ನುವುದರಲ್ಲಿ ಯಾವ ರೀತಿಯಾದ ರಿಸರ್ಚ್ ಮಾಡುತ್ತಿದ್ದಾರೆ ಎನ್ನುವುದನೆಲ್ಲಾ ನೋಡಿಕೊಂಡು ಇಲ್ಲಿಯೂ ಅದನ್ನೇ ಅನುಸರಿಸುವಂತಾದರೆ ಈ ಕೈಗಾರಿಕೆಯನ್ನು ಮುಂದಕ್ಕೆ ತರಲು ಸಾಧ್ಯವಾಗುತ್ತದೆ. ಇಷ್ಟು ಹೇಳಿ ನನ್ನ ಈ ನಾಲ್ಕು ಮಾತುಗಳನ್ನು ಇಲ್ಲಿಗೆ ಮುಗಿಸುತ್ತೇನೆ.

Sri V. SRINIVAS SHETTY (Coondapoor).—I should like to know whether the Government intend allowing us to take up the other resolution, that is the Karnataka resolution. We have discussed the present resolution too long. For a single resolution, however important it is, we have discussed it threadbare, a number of members having spoken on it. I am afraid whether at this rate we can reach other resolutions. Let us have some understanding in these things. We shall not go on obstructing each other.

Sri B. D. JATTI.—Government are not interested in obstructing anybody. We are very anxious that the other resolution also may be taken up. Just now I replied in the absence of the Opposition to the effect that up to the recess if anybody wants to speak, let him speak and after the reply is given by us, we may take up the other resolution. I have no objection.

†ಶ್ರೀ ಬಿ. ರಾಚಯ್ಯ (ಚಾಮರಾಜನಗರ).—ಶ್ರೀ ಲಿಂಗೇಗೌಡರು ತಂದಿರತಕ್ಕ ಈ ನಿರ್ಣಯ ಈಗಾಗಲೇ ಬಹಳ ಮಟ್ಟಿಗೆ ಚರ್ಚೆಯಾಗಿದೆ. ಆದರೂ ಇದೊಂದು ಮುಖ್ಯವಾದ ನಿರ್ಣಯ. ಹೀಗಿರುವಲ್ಲಿ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನು ಕೆಲವರು ಈ ನಿರ್ಣಯದ ಮುಂದಿನ ನಿರ್ಣಯ ಚರ್ಚೆಗೆ ಬಾರದಿರಲಿ ಎಂಬ ಉದ್ದೇಶದಿಂದ ಚರ್ಚಿಸುತ್ತಿದ್ದಾರೆಂದು ಸಂಶಯ ಏಕೆಬಂತೋ ಗೊತ್ತಿಲ್ಲ. ಮುಖ್ಯವಾಗಿ ಮೈಸೂರು ಸಂಸ್ಥಾನದಲ್ಲಿ ಎರಡು ಲಕ್ಷ ಜನರ ಜೀವನಾಧಾರಿಯಾಗಿರುವ ಒಂದು ಕೈಗಾರಿಕೆಯ ವಿಷಯದಲ್ಲಿ ಈ ಮಾನ್ಯ ಸಭೆ ಬಹಳ ಹೆಚ್ಚಿನ ಕಾಲವನ್ನು ತೆಗೆದುಕೊಂಡರೆ ತಪ್ಪೇನೂ ಅಲ್ಲವೆಂದು ನಾನು ತಿಳಿದಿದ್ದೇನೆ.

ಶ್ರೀ ಲಿಂಗೇಗೌಡರ ವಿಷಯದಲ್ಲಿ ನನಗೆ ಬಹಳ ಗೌರವವಿದ್ದರೂ ಅವರು ತಂದಿರತಕ್ಕ ನಿರ್ಣಯ ಈಗಿನ ಸನ್ನಿವೇಶದಲ್ಲಿ ಸರಿಹೋಗುವುದಿಲ್ಲವೆಂದು ನನ್ನ ಭಾವನೆ. ಅವರೇನೋ ರೇಷ್ಮೆ ಕೈಗಾರಿಕೆಯ ವಿಷಯದಲ್ಲಿ ನನಗಿಂತಲೂ ಹಿರಿಯರು, ಅನುಭವಿಗಳು ಮತ್ತು ಹೆಚ್ಚು ಆಸಕ್ತಿಯನ್ನು ಹೊಂದಿರುವವರು. ಅದರಿಂದಾಗಿ, ನಮ್ಮ ದೇಶದಲ್ಲಿರುವ ಸ್ಪನ್ ಸಿಲ್ಕು ಫ್ಯಾಕ್ಟರಿ, ಫಿಲೇಚರ್ ಫ್ಯಾಕ್ಟರಿ ಮುಂತಾದುವುಗಳ

(ಶ್ರೀ ಬಿ. ರಾಚಯ್ಯ)

ನ್ನೆಲ್ಲ ಒಟ್ಟುಗೂಡಿಸಿ ಇದರ ಆಡಳಿತವನ್ನು ಒಂದು ಕಾರ್ಪೊರೇಷನ್ನಿಗೆ ವಹಿಸುವುದರಿಂದ ರೇಷ್ಮೆಯ ಅಭಿವೃದ್ಧಿ ಹೆಚ್ಚೀತು ಎಂಬ ಒಂದೇ ಒಂದು ಹಂಬಲ ದಿಂದ ಅವರು ಈ ನಿರ್ಣಯವನ್ನು ತಂದಿದ್ದಾರೆಂದು ನಾನು ತಿಳಿಯುತ್ತೇನೆ. ಆದರೆ, ನಾನಾದರೋ ಈ ಮಾನ್ಯ ಸಭೆಯಲ್ಲಿ ಅವರ ಅವಗಾಹನೆಗೆ ತರುವುದು ಇಷ್ಟೇ. ಇದೇ ಮಾನ್ಯಸಭೆಯಲ್ಲಿ ಹಿಂದಿನ ಅಸೆಂಬ್ಲಿಯಲ್ಲಿ ಟಿ. ನರಸೀಪುರದ ಫಿಲೇಚರ್ ಫ್ಯಾಕ್ಟರಿಯು ಜಾಯಿಂಟ್ ಸ್ಟಾಕ್ ಕಂಪೆನಿಯಾಗಿ ಸ್ವಯಮಾಡಳಿತ ಹೊಂದಿದ್ದನ್ನು, ಅಲ್ಲಿ ಕಾರ್ಯ ನಿರೀಕ್ಷಿಸಿದಷ್ಟು ಮಟ್ಟದಲ್ಲಿ ನಡೆಯದೆ, ಈ ಕೈಗಾರಿಕೆ ಕುಂಠಿತವಾಗಿ ಶೋಚನಾವಸ್ಥೆಯಲ್ಲಿರುವುದನ್ನು ಈ ಸಭೆಯ ಗಮನಕ್ಕೆ ತಂದು, ಆಗ್ಗೆ ಈ ಮಾನ್ಯ ಸಭೆಯ ಅನೇಕ ಸದಸ್ಯರು ಹಾಗೂ ಈ ಕೈಗಾರಿಕೆಯನ್ನು ಅವಲಂಬಿಸಿಕೊಂಡಿರತಕ್ಕ ಅನೇಕ ಜನರು ಇದನ್ನು ಸರ್ಕಾರವೇ ವಹಿಸಿಕೊಂಡು ಒಂದು ಸುವ್ಯವಸ್ಥಿತ ರೀತಿಯಲ್ಲಿ ನಡೆಸುವುದಾದರೆ ಈ ಕೈಗಾರಿಕೆಯನ್ನು ಉಳಿಸುವುದಕ್ಕೂ ಹಾಗೂ ಬೆಳೆಸುವುದಕ್ಕೂ ಅವಕಾಶವಾಗುತ್ತದೆ, ಮತ್ತು ಈ ಕೈಗಾರಿಕೆಯನ್ನು ಅವಲಂಬಿಸಿಕೊಂಡಿರತಕ್ಕ ಜನಕ್ಕೂ ಪ್ರೋತ್ಸಾಹ ಕೊಟ್ಟ ಹಾಗಾಗುತ್ತದೆಂದು ಹೇಳಿದುದರಮೇಲೆ ಜನರ ಕೂಗಿಗೆ ಸರ್ಕಾರ ಮನ್ನಣೆ ಕೊಟ್ಟು, ಸುಮಾರು 18 ಲಕ್ಷ ರೂಪಾಯಿ ಬಂಡವಾಳಹಾಕಿ ಅದರ ವಹಿವಾಟನ್ನು ವಹಿಸಿಕೊಂಡಿತು. ಆಮೇಲೆ ಅಲ್ಲಿದ್ದ ಹಳೆಯ ಬೇಸಿನ್‌ಗಳನ್ನು ತೆಗೆಸಿಹಾಕಿ ಉತ್ತಮ ಬೇಸಿನ್‌ಗಳನ್ನಿಟ್ಟು ಒಳ್ಳೆಯ ರೀತಿಯಲ್ಲಿ ನಡೆಸುವುದಕ್ಕೆ ಒಂದು ವ್ಯವಸ್ಥೆಮಾಡಿತು. ಇದರಿಂದಾಗಿ, ಹಿಂದೆ ಜಾಯಿಂಟ್ ಸ್ಟಾಕ್ ಕಂಪೆನಿಯಾಗಿದ್ದಾಗ ನಷ್ಟಪಡುತ್ತಿದ್ದ ಒಂದು ಕಾರ್ಖಾನೆ ಇಂದು ಸ್ವಲ್ಪ ಮಟ್ಟಿಗೆ ಲಾಭ ತರುವಂತಾಗಿದೆ. ಇನ್ನೂ ಹೆಚ್ಚಿನ ಶ್ರದ್ಧೆವಹಿಸಿದರೆ, ಹೆಚ್ಚು ಲಾಭದಾಯಕವಾಗಿ ಕೆಲಸ ಮಾಡುವುದಕ್ಕೂ ಅವಕಾಶವಿದೆ.

ಈ ದೃಷ್ಟಿಯಿಂದ, ಈ ಕೈಗಾರಿಕೆ protected Industry ಯಾಗಿಯೇ ಉಳಿದುಕೊಂಡರೆ ಒಳ್ಳೆಯದೆಂದು ತೋರುತ್ತದೆ. ಏಕೆಂದರೆ, ಇದು ಇನ್ನೂ ಈ ಸರ್ಕಾರದ ಸಹಾಯವನ್ನು ಅಪೇಕ್ಷಿಸುತ್ತದೆ. ಹಾಗೂ ಕೇಂದ್ರ ಸರ್ಕಾರದವರ ರಕ್ಷಣೆಯೂ ಬೇಕು. ಸ್ವಯಮಾಡಳಿತಕ್ಕೆ ಕೊಟ್ಟರೆ, ಅಂದು ಲಾಭ-ನಷ್ಟ ಈ ದೃಷ್ಟಿಯಿಂದ ಕೆಲಸ ನಡೆಸಬೇಕಾಗುತ್ತದೆ. ಈಗ ಮೈಸೂರು ಸರ್ಕಾರಕ್ಕೇ ಆಗಲೀ ಇಂಡಿಯ ಸರ್ಕಾರಕ್ಕೇ ಆಗಲಿ ಪ್ರಜೆಗಳಿಂದಲೂ, ಸಾರ್ವಜನಿಕರಿಂದಲೂ ಒತ್ತಡ ತಂದು ಅವರ ಹೆಚ್ಚಿನ ಗಮನ ಸೆಳೆಯಬಹುದಾಗಿದೆ. ಈ ರೀತಿ ಕಾರ್ಪೊರೇಷನ್ ಆದರೆ, ಈ ಗಮನ ಕಡಮೆಯಾಗಬಹುದೆಂಬ ಶಂಕೆಯಿದೆ. ನಮ್ಮ ಮಾನ್ಯ ಮಿತ್ರರು, ಈ ಇಲಾಖೆಯ internal Administration ಚೆನ್ನಾಗಿ ನಡೆಯಲಿ ಎಂಬ ದೃಷ್ಟಿಯಿಂದ ಈ ನಿರ್ಣಯವನ್ನು ಕೊಟ್ಟಿರಬಹುದು. ಆದರೆ, ಈಗ ಎಲೆಕ್ಟ್ರಿಸಿಟಿ ಬೋರ್ಡ್ ಆದ ಮೇಲೆ ಅದಕ್ಕೆ ಸ್ವಯಮಾಡಳಿತ ಕೊಟ್ಟಮೇಲೆ ಅವರು ದರಗಳನ್ನು ಹೆಚ್ಚಿಸುವ ಅಥವಾ ತಗ್ಗಿಸುವ ವಿಷಯದಲ್ಲಾಗಲಿ, ಆಡಳಿತ ಸಿಬ್ಬಂದಿಯ ನೇಮಕಗಳಲ್ಲಾಗಲಿ, ಯಾವ ಕೂಗುಗಳು ಬರುತ್ತಿವೆಯೆಂಬುದು ಎಲ್ಲರಿಗೂ ಗೊತ್ತಿದೆ. ಅವರಿಗೆ ಸ್ವಯಮಾಡಳಿತ ಕೊಟ್ಟಿರುವುದರಿಂದ, ಸರ್ಕಾರದವರೂ ಕೂಡ ತಾವು ಬೋರ್ಡಿನ ಆಂತರಿಕ ವಿಚಾರಗಳಲ್ಲಿ ಕೇಳುವುದು ಸರಿಯಲ್ಲ, ಸೌಜನ್ಯವಲ್ಲ ಎಂದು ಹೇಳುತ್ತಿದ್ದಾರೆ. ಹೀಗೆ ನಾವು ಒಂದೆರಡು Experiment ಮಾಡುತ್ತಿರುವುದರಲ್ಲಿ ಈರೀತಿ ಆದಮೇಲೆ, ಈಗ ಇನ್ನೊಂದಕ್ಕೆ ಸ್ವಯಮಾಡಳಿತ ಕೊಡುವುದು ಸೂಕ್ತವೇ ಎಂದು ಯೋಚನೆ ಮಾಡಬೇಕಾಗಿದೆ.

ಈ ಕಾರ್ಪೊರೇಷನ್ನಿಗೆ ಸ್ವಯಮಾಡಳಿತ ಕೊಟ್ಟು ಅವರು ಆಡಳಿತ ಸಿಬ್ಬಂದಿ ನೇಮಕಮಾಡಿಕೊಳ್ಳುವುದು, ರಿಸರ್ಚಿಗೆ ಬೇಕಾದ ಮತ್ತು ರೇಷ್ಮೆ ಕೈಗಾರಿಕೆಯನ್ನು ರೂಢಿಸಲು ಬೇಕಾದ ತಜ್ಞರನ್ನು ನೇಮಿಸಲು ಸ್ವಾತಂತ್ರ್ಯ ಹೊಂದಿರಬೇಕೆಂದು ಹೇಳಿದ್ದಾರೆ. ಈ ವಿಷಯ ಈಗಾಗಲೇ ಬಹಳಮಟ್ಟಿಗೆ ಚರ್ಚೆಯಾಗಿರುವುದರಿಂದ, ನಾನು ಕೇವಲ ಈರೀತಿ ಮಾಡುವುದರಿಂದಾಗುವ ಸಾಧಕ ಬಾಧಕಗಳನ್ನು ಮಾತ್ರ ಹೇಳುತ್ತೇನೆ. ಅಂದಮಾತ್ರಕ್ಕೇ, ಈ ಕೈಗಾರಿಕೆಯನ್ನೇ ನಂಬಿರುವ ವ್ಯವಸಾಯಗಾರರಿಗೆ, ನೂಲುವವರಿಗೆ ಮತ್ತು ನೆಯ್ಗೆಯವರಿಗೆ ಈಗ ಯಾವರೀತಿ ತೊಂದರೆಗಳಾಗುತ್ತಿವೆ, ಹೊರದೇಶದಿಂದ ಬರುವ ರೇಷ್ಮೆಯಿಂದಾಗಿ, ನಮ್ಮಲ್ಲಿನ ರೇಷ್ಮೆ ವ್ಯವಸಾಯಗಾರರಿಗೆ ಏನು ಧಕ್ಕೆಯುಂಟಾಗುತ್ತಿದೆ, ಮತ್ತು ಇಲ್ಲಿಯೇ ವ್ಯಾಪಾರಸ್ಥರು ವ್ಯವಸಾಯಗಾರರಿಗೆ ಮಾಡುವ ಮೋಸವನ್ನು ತಪ್ಪಿಸುವ ಸಲುವಾಗಿ ಸೊಸೈಟಿಗಳನ್ನು ಏರ್ಪಡಿಸಿ ಅನುಕೂಲಪಡಿಸುವ ವಿಷಯವನ್ನೇ ಆಗಲಿ, ನಾನು ಈ ಸಂದರ್ಭದಲ್ಲಿ ಹೇಳುವುದು ಅನುಚಿತವೆಂದು ಭಾವಿಸುತ್ತಿಲ್ಲ. ಮುಖ್ಯವಾಗಿ ಈ ನಿರ್ಣಯದ ಬಗ್ಗೆ ಮಾತನಾಡುವುದಾದರೆ ಇನ್ನೂ ಕೆಲವು ಕಾಲ ಸರ್ಕಾರದ ನೇತೃತ್ವದಲ್ಲಿ, ಹೆಚ್ಚಿನ ಅನುಭವವಿರತಕ್ಕಂಥ ಅಧಿಕಾರಿಗಳ ಆಡಳಿತದಲ್ಲಿ ಅನುಭವವುಳ್ಳ ವ್ಯವಸಾಯಗಾರರಿಂದಲೂ, ನೂಲುವವರಿಂದಲೂ ಹಾಗೂ ಈ ಕೈಗಾರಿಕೆಯಲ್ಲಿ ಆಸಕ್ತಿಹೊಂದಿರುವ ಖಾಸಗೀ ಮಹನೀಯರಿಂದಲೂ ಕೂಡಿ State level ನಲ್ಲಿ ಏರ್ಪಡಿಸಿರುವ ರೇಷ್ಮೆಯ ಅಭಿವೃದ್ಧಿ ಮಂಡಲಿ ಇರುವುದೇ ಸೂಕ್ತವೆನಿಸುತ್ತದೆ. ಬೇಕಾದರೆ, ಅದಕ್ಕೇ ಇನ್ನೂ ಕೆಲವು ಹೆಚ್ಚಿನ ಅನುಭವವುಳ್ಳ ತಜ್ಞರನ್ನು ಸೇರಿಸಿಕೊಳ್ಳಬಹುದು. ಅದನ್ನು ತಪ್ಪಿಸಿ ತನ್ನ ಕಾಲ ಮೇಲೆಯೇ ಈ ಕೈಗಾರಿಕೆ ನಿಂತುಕೊಳ್ಳಬೇಕೆಂದು ಹೇಳಿ ಲಾಭನಷ್ಟದ ದೃಷ್ಟಿಯಿಂದ ಆಡಳಿತನಡೆಸುವ ವ್ಯವಸ್ಥೆಮಾಡುವುದಕ್ಕೆ ನನ್ನ ಅನುಮತಿಯಿಲ್ಲ. ಈ ಕೈಗಾರಿಕೆಗೆ ಇನ್ನೂ ಕೆಲವುಕಾಲ ನಮ್ಮ ಸರ್ಕಾರದವರ ಮತ್ತು ಇಂಡಿಯಾ ಸರ್ಕಾರದವರ ಪೋಷಣೆ ಮತ್ತು ನೆರವು ಬೇಕಾಗಿದೆ.

ಶ್ರೀ ಟಿ. ಮರಿಯಪ್ಪ.—ಇಷ್ಟಾದರೂ ತಡೆದುಕೊಳ್ಳ ತಕ್ಕಶಕ್ತಿ ಅದಕ್ಕಿಲ್ಲ.

ಶ್ರೀ ಬಿ. ರಾಚಯ್ಯ.—ಈ ದೃಷ್ಟಿಯಿಂದ ನಾನು ಲಂಗೇಗೌಡರ ನಿರ್ಣಯವನ್ನು ವಿರೋಧಿಸಬೇಕಾಗಿದೆ ಅಷ್ಟೆ. ಇದು ನಿಜವಾಗಿಯೂ ಪಕ್ಷಾತೀತವಾದ ಪ್ರಶ್ನೆ. ನಾನು ಪಕ್ಷದ ದೃಷ್ಟಿಯಿಂದ ನಾನು ವಿರೋಧಿಸುತ್ತಿಲ್ಲ. ಆದ್ದರಿಂದ ನಾನು ಮನಃಪೂರ್ವಕವಾಗಿ ತಮ್ಮಲ್ಲಿ ಈ ವಿಷಯವನ್ನು ಮನವಿಮಾಡಿಕೊಳ್ಳುತ್ತಿದ್ದೇನೆ. ನಮಗೀಗಾಗಲೇ ಒಂದು ಸರ್ಕಾರಿ ಉದ್ಯಮವನ್ನು ಜಾಯಿಂಟ್ ಸ್ಟಾಕ್ ಕಂಪೆನಿಮಾಡಿ ಸ್ವಯಮಾಡಳಿತ ಕೊಟ್ಟದ್ದರ ಪರಿಣಾಮವೇನೆಂಬುದನ್ನು ಕಷ್ಟನಷ್ಟಗಳೇ ನೆಂಬುದನ್ನು ಕಂಡಿದ್ದೇವೆ. ಅಂಥದರಲ್ಲಿ, ಇಡೀ ಇಂಡಿಯಾ ದೇಶದಲ್ಲಿರುವ ರೇಷ್ಮೆ ವ್ಯವಸಾಯಗಾರರಲ್ಲಿ ಶೇಕಡ 80 ರಷ್ಟು ಮೈಸೂರು ದೇಶದಲ್ಲಿರುವವರಿರುವಾಗ, ಎರಡುಲಕ್ಷ ಸಂಸಾರಗಳು ಇದನ್ನೇ ಅವಲಂಬಿಸಿಕೊಂಡಿರುವವರು ಇಲ್ಲಿರುವಾಗ, ಇದಕ್ಕೆ ಸ್ವಯಮಾಡಳಿತಕೊಟ್ಟರೆ ಏನಾಗುತ್ತದೋ ಎಂಬ ಶಂಕೆಯಿದೆ.

**Mr. DEPUTY SPEAKER.**—The House now rises and meets again after half an hour.

---

*The House adjourned for Lunch at Three of the Clock and met again at Thirty Minutes past Three of the Clock.*

---

[SRI R. NAGAN GOWDA in the Chair].

ಶ್ರೀ ಬಿ. ರಾಚಯ್ಯ.—ಮಾನ್ಯ ಸಭಾಪತಿಗಳೇ, ನಾನು ಈ ರೇಷ್ಮೆ ಕೈಗಾರಿಕೆಯನ್ನು ಅವಲಂಬಿಸಿಕೊಂಡಿರತಕ್ಕ ಜನರ ಒಂದು ಹಿತದೃಷ್ಟಿಯಿಂದ ಈ ಕೈಗಾರಿಕೆಯ ಆಡಳಿತವನ್ನು ಒಂದು ಸ್ವಯಂ ಆಡಳಿತಮಂಡಲಿಗೆ ವಹಿಸಿಕೊಡತಕ್ಕಂಥಾದ್ದು ಅಷ್ಟು ಸೂಕ್ತವಾಗಿ ಕಾಣುವುದಿಲ್ಲ, ಎನ್ನುವ ವಿಷಯವನ್ನು ಹೇಳುತ್ತೇನೆ. ಇದಕ್ಕೆ ಮುಖ್ಯವಾದ ಎರಡು ಕಾರಣಗಳನ್ನು ಕೊಡುತ್ತೇನೆ. ಇಂಥ ಒಂದು ಕೈಗಾರಿಕೆ ಸರ್ಕಾರದ ಒಂದು ರಕ್ಷಣೆಯಿಂದ ಇನ್ನೂ ಹತ್ತಾರುವರ್ಷಗಳು ನಡೆಯಬೇಕಾಗಿದೆ. ಈ ಕೈಗಾರಿಕೆಯನ್ನು ಲಾಭ ಮತ್ತು ನಷ್ಟ ಈ ಒಂದು ದೃಷ್ಟಿಯಿಂದ ನಡೆಯುವುದಕ್ಕೆ ಬಿಡದೆ ಈ ಕೈಗಾರಿಕೆಗೆ ಆಗತಕ್ಕ ನಷ್ಟವನ್ನು ಸರ್ಕಾರ ಸಬ್‌ಸಿಡಿ ರೂಪದಲ್ಲಿ ವಹಿಸಿಕೊಳ್ಳುತ್ತಿದೆ. ಇಂಡಿಯಾ ಸರ್ಕಾರದವರೂ ಒಂದಲ್ಲ ಒಂದು ರೀತಿಯಲ್ಲಿ ಸಹಾಯ ದ್ರವ್ಯವನ್ನು ಈ ಕೈಗಾರಿಕೆಯನ್ನು ಅವಲಂಬಿಸಿಕೊಂಡಿರತಕ್ಕವರಿಗೆ ಕೊಡುತ್ತಿದ್ದಾರೆ.

ಮೂರನೆಯದಾಗಿ ಈ ಕೈಗಾರಿಕೆಗೆ ಸ್ವಯಮಾಡಳಿತ ಮಂಡಲಿಯನ್ನು ಮಾಡಿದ ಪಕ್ಷದಲ್ಲಿ ವರಮಾನ ತೆರಿಗೆ ಕೂಡ ಕೊಡಬೇಕಾಗಿ ಬರುತ್ತದೆ. ಹಾಗೆಯೇ ವೆಲ್ತ್ ಟ್ಯಾಕ್ಸ್ ಕೂಡ ಕೊಡಬೇಕಾಗಿ ಬರುತ್ತದೆ.

ಶ್ರೀ ಎಂ. ಲಿಂಗೇಗೌಡ (ಕನಕಪುರ).—ಕಾರ್ಪೋರೇಷನ್ ಮಾಡುವುದಕ್ಕೆ ಬದಲಾಗಿ ಅಟಾನಮಸ್ ಬೋರ್ಡ್ ಮಾಡಬೇಕು ಎಂದು ತಿದ್ದುಪಡಿ ತಂದಿದ್ದಾರೆ. I have accepted that amendment of Sri Mallaradhya.

ಶ್ರೀ ಬಿ. ರಾಚಯ್ಯ.—ತಿದ್ದುಪಡಿ ಆಮೇಲೆ ಬರುತ್ತದೆ. ಈ ಮಾನ್ಯ ಸಭೆಯ ಕಾಲವನ್ನು ಹೆಚ್ಚಿಗೆ ತೆಗೆದುಕೊಳ್ಳಬೇಕು ಎನ್ನುವ ಇಷ್ಟ ಇಲ್ಲದೆ ಇದ್ದರೂಕೂಡ ನಾನು ಬಂದಿರತಕ್ಕ ಕ್ಷೇತ್ರದಲ್ಲಿ ಈ ಕೈಗಾರಿಕೆಯನ್ನೇ ಜನಗಳು ಹೆಚ್ಚಿಗೆ ಅವಲಂಬಿಸಿಕೊಂಡಿರುವುದರಿಂದ ಅವರ ಹಿತದೃಷ್ಟಿಯಿಂದ ಸ್ವಲ್ಪ ಕಾಲವನ್ನು ತೆಗೆದುಕೊಂಡರೆ ನನ್ನನ್ನು ಕ್ಷಮಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಈ ಕೈಗಾರಿಕೆಗೋಸ್ಕರವಾಗಿ ಮೈಸೂರು ಜಿಲ್ಲೆಯಲ್ಲಿ ಸುಮಾರು 96 ಸಾವಿರ ಎಕರೆಗಳಲ್ಲಿ ಹಿಪ್ಪನೇರಳೆಬೆಳೆ ಆಗುತ್ತದೆ. ಈ ಹಿಪ್ಪನೇರಳೆ ಬೆಳೆಯಿಂದ 10 ಲಕ್ಷ ಜನ ಜೀವನವನ್ನು ಅವಲಂಬಿಸಿದ್ದಾರೆ. ಆದ್ದರಿಂದ ಈ ಹಿಪ್ಪನೇರಳೆ ಬೆಳೆಗೆ ಸರ್ಕಾರದ ಸಹಾಯ ಬೇಕು. ಇದು ಉತ್ತಮವಾಗಿ ನಡೆಯುವುದಕ್ಕೆ ಆಗುತ್ತಿಲ್ಲ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, 1952ನೆಯ ಇಸವಿಯಲ್ಲಿ ಸೀಡ್ ಕಂಟ್ರೋಲ್ ಆಕ್ಟನ್ನು ಹಿಂದಿನ ವಿಧಾನಸಭೆಯಲ್ಲಿ ಮಂಡಿಸಿ ಅದನ್ನು ಪಾಸ್ ಮಾಡಿದ್ದರೂ ಕೂಡ ಅದನ್ನು ಇನ್ನೂ ಜಾರಿಗೆ ಕೊಟ್ಟಿಲ್ಲ. ಇದಕ್ಕೆ ಕಾರಣ ಏನು ಎಂದು ನೋಡಿದ ಪಕ್ಷದಲ್ಲಿ ಮೈಸೂರು ಸಂಸ್ಥಾನದಲ್ಲಿ ರೇಷ್ಮೆ ಬೆಳೆಯನ್ನು ಅವಲಂಬಿಸಿಕೊಂಡಿರತಕ್ಕ ಜನರಿಗೆ ಎಷ್ಟು ಮೊಟ್ಟೆ ಬೇಕಾಗುತ್ತದೋ ಅದನ್ನು ಒದಗಿಸಲು ಅವರಿಗೆ ಸಾಧ್ಯವಾಗುವುದಿಲ್ಲ. ನಮ್ಮ ದೇಶದಲ್ಲಿ ಎಷ್ಟು ಸರ್ಕಾರಿ ಗ್ರೇನೇಜಸ್ ಇವೆ, ಎಷ್ಟು ಏಡೆಡ ಗ್ರೇನೇಜಸ್ ಇವೆ, ಅಲ್ಲಿ ಎಷ್ಟು ಮೊಟ್ಟೆ ತಯಾರಾಗುತ್ತಿದೆ, ಅವೆಲ್ಲವನ್ನೂ ಕಂಟ್ರೋಲ್ ಆಕ್ಟನ್ನು ಜಾರಿಗೆ ಕೊಟ್ಟ ಪಕ್ಷದಲ್ಲಿ ರೈತನಿಗೆ ಸಪ್ಲೈ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಇನ್ನು ಪ್ರೈವೇಟ್ ಗ್ರೇನೇಜಸ್‌ನಲ್ಲಿ ಟ್ರೈನಿಂಗ್ ಇಲ್ಲದೆ ಸಾಕಷ್ಟು ಪರಿಶ್ರಮ ಇಲ್ಲದೆ ಮಕ್ಕಾಮಕ್ಕಿ ಕೆಲಸಮಾಡಿಕೊಂಡು ಹೋಗುತ್ತಿದ್ದಾರೆ. ಅವರಿಗೆ ಒಂದು ಟ್ರೈನಿಂಗ್ ಕೊಡಬೇಕು. ಅವರಿಗೂ ಕೂಡ ಗ್ರೇನೇಜುಗಳನ್ನು ನಡೆಸಿಕೊಳ್ಳತಕ್ಕ ಅವಕಾಶ ಕೊಡಬೇಕು, ಎಂದು ಪ್ರೈವೇಟ್ ಗ್ರೇನೇಜಸ್ ನವರು ಮೂರು ಜಿಲ್ಲೆಗಳಿಂದ ಮನವಿ ಮಾಡಿಕೊಂಡ ಮೇಲೆ ಮಾಗೂರು, ಚನ್ನಪಟ್ಟಣ, ಮೈಸೂರು ಈ ಕಡೆಗಳಲ್ಲಿ ಟ್ರೈನಿಂಗ್ ಕೊಡಲು ಅವಕಾಶ ಮಾಡಿಕೊಟ್ಟರು. ಈಗಲೂ ಟ್ರೈನಿಂಗ್ ಆದಮೇಲೂ ಕೂಡ, ಬೆಳೆಯನ್ನ ಅವಲಂಬಿಸಿಕೊಂಡಿರತಕ್ಕ ರೈತರಿಗೆ ರೋಗರಹಿತ ಮೊಟ್ಟೆಯನ್ನು ಏನು ಒದಗಿಸುತ್ತಿದ್ದೇವೆ ಎಂದು ನೋಡಿದ ಪಕ್ಷದಲ್ಲಿ, ಅದು ಸ್ವಲ್ಪಮಟ್ಟಿಗೆ ಸುಧಾರಿಸಿದರೂ ಕೂಡ ನಾವು ನಿರೀಕ್ಷಿಸಿದ ಮಟ್ಟದಲ್ಲಿ ರೋಗರಹಿತ ಮೊಟ್ಟೆಯನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಚನ್ನಪಟ್ಟಣದಲ್ಲಿ ರಿಸರ್ಚ್ ಸ್ಟೇಷನ್ ಕಟ್ಟುವುದಕ್ಕೆ ಪ್ರಯತ್ನಮಾಡಿ ಅದುಕೂಡ ಪೂರ್ಣವಾಗಿಲ್ಲ. ಬಿಳಿಗಿರಿರಂಗನಬೆಟ್ಟದಲ್ಲಿ ರಿಸರ್ಚ್ ಸ್ಟೇಷನ್ ಕಟ್ಟಿಸಿ ಕೆಲಸಕಾರ್ಯಗಳು ನಡೆಯುತ್ತಿವೆ. ಅದೂ ಕೂಡ ಎಕ್ಸ್‌ಪ್ಯಾಂಡ್ ಆಗತಕ್ಕದ್ದು ಇದೆ. ಡಿಸೀಜ್ಡ್ ಫ್ರೀ ಮೊಟ್ಟೆಯನ್ನು ಸಪ್ಲೈ ಮಾಡುವ ಪರಿಸ್ಥಿತಿಯಲ್ಲೂಕೂಡ ಸರ್ಕಾರದ ಹಿಡಿತ ಬೇಕು. ರೋಗರಹಿತ ಮೊಟ್ಟೆಯು, ಎಲ್ಲಾ ಜನರಿಗೂ ಕೂಡ ಸಿಕ್ಕುವ ರೀತಿಯಲ್ಲಿ ವ್ಯವಸ್ಥೆಮಾಡಬೇಕಾದರೂ ಕೂಡ ಸರ್ಕಾರದ ಕಂಟ್ರೋಲ್ ಕೆಲವು ಕಾಲ ಇದ್ದೇ ಇರಬೇಕು. ಬೆಳೆಯತಕ್ಕ ರೈತರ ಕಷ್ಟ ಶ್ರೀಮಾನ್ ಲಿಂಗೇಗೌಡರಿಗೂ ಮತ್ತು ಶ್ರೀಮಾನ್ ವೆಂಕಟಪ್ಪನವರಿಗೂ ಮತ್ತು ಈ ಕೈಗಾರಿಕೆಯಲ್ಲಿ ಹೆಚ್ಚಿನ ಆಸಕ್ತಿ ಇರುವ ಮಾನ್ಯ ಸದಸ್ಯರಿಗೂ ಗೊತ್ತಿದೆ.

ನಾಲ್ಕನೆಯದಾಗಿ ಅನೇಕ ರೈತರಿಗೆ ಉತ್ತಮವಾದ ಮೊಟ್ಟೆ ಒದಗದೆ ಇರುವುದರಿಂದ ಬೆಳೆ ಕೆಟ್ಟುಹೋಯಿತು. ಹಾಗಾಗಿ ಅವರು ಸಾವಿರಾರು ರೂಪಾಯಿಗಳ ನಷ್ಟಮಾಡಿಕೊಂಡು ಇವೊತ್ತಿನದಿವಸ ಬಹಳ ಕಷ್ಟದಲ್ಲಿ ಪರಿತಪಿಸುತ್ತಾ ಇರುವುದನ್ನು ನಾವೆಲ್ಲರೂ ಕೂಡ ಪ್ರತಿನಿತ್ಯದ ಜೀವನದಲ್ಲಿ ನೋಡುತ್ತಿದ್ದೇವೆ. ಸರ್ಕಾರದವರೂ ಕೂಡ ಪ್ರೈವೇಟ್ ಗ್ರೇನೇಜಸ್ ಯಾವ ಯಾವ ರೈತರಿಗೆ ಮೊಟ್ಟೆಯನ್ನು ಕೊಡುತ್ತಿದ್ದಾರೆ, ಏಯ್ಡ್ ಗ್ರೇನೇಜಸ್‌ಗಳು ಎಷ್ಟು ಮೊಟ್ಟೆಯನ್ನು ಕೊಡುತ್ತಿದ್ದಾರೆ, ಸರ್ಕಾರಿ ಗ್ರೇನೇಜಸ್ ರೈತರಿಗೆ ಎಷ್ಟು ಮೊಟ್ಟೆ ಕೊಟ್ಟಿದ್ದಾರೆ, ಮೊಟ್ಟೆ ಕೊಟ್ಟ ರೈತರು ಸರಿಯಾದ ಬೆಳೆಯನ್ನು ತೆಗೆದುಕೊಂಡರೇ ಅಥವಾ ಬೆಳೆ ಕೆಟ್ಟುಹೋಯಿತೇ ಎನ್ನತಕ್ಕ ಒಂದು ಪಟ್ಟಿಯನ್ನು ತಯಾರು ಮಾಡಲು ಇರತಕ್ಕ ಸೂಪರ್‌ವೈಜರ್ ಸ್ಟ್ಯಾಫ್ ಬಹಳ ಕಡಮೆ ಇದೆ. ಅಂಥ ಒಂದು ಸೂಪರ್‌ವೈಜಿಂಗ್ ಸ್ಟ್ಯಾಫ್ ಇರಬೇಕಾದದ್ದು ಬಹಳ ಅಗತ್ಯ ಇದೆ. ಈ ದೃಷ್ಟಿಯಿಂದ ಇನ್ನೂ ಕೆಲವುಕಾಲ ರೇಷ್ಮೆ ಬೆಳೆಯತಕ್ಕವನ ದೃಷ್ಟಿಯಿಂದ ಕಂಟ್ರೋಲ್ ಬೇಕಾಗಿದೆ; ಮತ್ತು ಅವನಿಗೆ ಬೇಕಾಗಿರತಕ್ಕ ಗೊಬ್ಬರ ಮತ್ತು

(ಶ್ರೀ ಬಿ. ರಾಚಯ್ಯ)

ನೀರಾವರಿ ಬಾವಿಗಳನ್ನು ತೆಗೆಸುವುದಕ್ಕೋಸ್ಕರ ಇಂಡಿಯಾ ಸರ್ಕಾರದವರು ಮತ್ತು ಮೈಸೂರು ಸರ್ಕಾರದವರು ಕೊಡತಕ್ಕ ನೆರವು ಕೆಲವು ಕಾಲ ರೈತರಿಗೆ ದೊರೆಯಬೇಕಾಗುತ್ತದೆ. ಸ್ವಯಂಆಡಳಿತ ಕೊಡುವುದರಿಂದ ಅಷ್ಟರಮಟ್ಟಿಗೆ ಉತ್ತೇಜನ ದೊರಕಲಾರದು ಎನ್ನುವ ಶಂಕೆ ಈ ಸಂದರ್ಭದಲ್ಲಿ ನಮಗೆ ಇದೆ. ಇನ್ನು ಮೈಸೂರು, ಟೀ.-ನರಸೀಪುರ ಇತ್ಯಾದಿ ಕಡೆಗಳಲ್ಲಿ ಸಿಲ್ಕ್ ಫಿಲೇಚರ್ ಫ್ಯಾಕ್ಟರಿಗಳುಇವೆ. ಕನಕಪುರ, ಚನ್ನಪಟ್ಟಣ ಸ್ಪನ್ ಸಿಲ್ಕ್ ಫ್ಯಾಕ್ಟರಿಗಳಿವೆ, ನಾನು ಮೊದಲೇ ಹೇಳಿದಹಾಗೆ ಅವು ಬಹಳ ಹೀನ ಸ್ಥಿತಿಯಲ್ಲಿದ್ದು ಉತ್ತಮವಾದ ಸ್ಥಿತಿಯಲ್ಲಿ ನಡೆಯದೆ ಬಹಳನಷ್ಟವಾಗಿ ರೈತರಿಗೆ ಅದರಿಂದ ಯಾವವಿಧ ಲಾಭವೂ ಇಲ್ಲದೆ ಅವನ್ನು ಮುಚ್ಚತಕ್ಕ ಪರಿಸ್ಥಿತಿ ಬಂದಾಗ ಮಾನ್ಯ ಸಭೆಯಲ್ಲಿ ಅನೇಕರ ಒತ್ತಾಯದಿಂದ ಸರ್ಕಾರದವರು 18 ಲಕ್ಷ ರೂಪಾಯಿಗಳ ಒಂದು ಪರಿಹಾರ ಕೊಟ್ಟು ಜಾಯಿಂಟ್ ಸ್ಟಾಕ್ ಕಂಪೆನಿಗೆ ಅದನ್ನು ತೆಗೆದುಕೊಂಡು ಅವನ್ನು ಸ್ವಲ್ಪಮಟ್ಟಿಗೆ ಉತ್ತಮಪಡಿಸಿದ್ದಾರೆ. ಆದರೂ ಕೂಡ ಹತ್ತು ಎಳೆಯವರೆಗೆ ಎಲ್ಲಿಯವರೆಗೆ ಪ್ರಯತ್ನಮಾಡುವುದಿಲ್ಲವೋ ಅಲ್ಲಿಯವರೆಗೆ ಬೇಸಿನ್ನುಗಳು ಲಾಭದಾಯಕವಾಗಿ ನಡೆಯುವುದಕ್ಕೆ ಅವಕಾಶವಾಗುವುದಿಲ್ಲ. ಆ ದೃಷ್ಟಿಯಿಂದ ಅಂಥ ಬೇಸಿನ್ನುಗಳನ್ನು ಫ್ಯಾಕ್ಟರಿಯಲ್ಲಿ ಇಂಟ್ರಡೂಸ್ ಮಾಡಬೇಕು; ಮತ್ತು ಹೆಚ್ಚಿನ ರೀತಿಯಲ್ಲಿ ಲೇಬರ್ ಮತ್ತು ಮ್ಯಾನೇಜ್‌ಮೆಂಟ್‌ಗೆ ಇರತಕ್ಕ ಸಂಬಂಧಗಳನ್ನು ಸುಲಲಿತವಾಗಿ ಮತ್ತು ವಿಶ್ವಾಸ ರೀತಿಯಿಂದ ಬಗೆಹರಿಸಿ ಸರ್ಕಾರದವರು ಇನ್ನೂ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ ಕೊಡಬೇಕಾಗಿದೆ.

ಈ ದೃಷ್ಟಿಯಿಂದ, ಒಂದು ಸ್ವಯಂ ಆಡಳಿತವನ್ನು ಕೊಡುವುದರಿಂದ, ಸರ್ಕಾರಕ್ಕೆ ತನ್ನ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವುದಕ್ಕೆ ಅವಕಾಶ ಕೊಟ್ಟಹಾಗಾಗುತ್ತದೆ. ತಾವೇ ನಿದ್ರೆ ಮಾಡುತ್ತಿರುವವರಿಗೆ ಹಾಸಿಗೆ ಹಾಕಿಕೊಟ್ಟಹಾಗಾಗುತ್ತದೆ. ನಮ್ಮ ಶ್ರೀಮಾನ್ ಲಿಂಗೇಗೌಡರು ಹೇಳುವಂತೆ ಕಾರ್ಪೊರೇಷನ್ ಮಾಡುವುದರಿಂದಾಗಲಿ, ಹೆಚ್ಚು ಅನುಭವಶಾಲಿಗಳಾದ ಶ್ರೀ ಮಲ್ಲಾರಾಧ್ಯರ ಸೂಚನೆಯಂತೆ ಈ ಕೈಗಾರಿಕೆಯನ್ನು ಒಂದು ಸ್ವಯಂ ಆಡಳಿತ ಮಂಡಲಿಗೆ ವಹಿಸುವುದರಿಂದಾಗಲಿ ಅನುಕೂಲವಾಗುವುದಿಲ್ಲ. ಶ್ರೀಮಾನ್ ಗೋಪಾಲರವರು ಅವರ ರಿಪೋರ್ಟಿನಲ್ಲಿ ಭದ್ರಾವತಿ ಐರನ್ ವರ್ಕ್ಸ್‌ನ್ನು ಕಾರ್ಪೊರೇಷನ್ ಮಾಡುವುದರಿಂದ ನಷ್ಟವಾಗುತ್ತದೆಂದು ಒಂದು ಸೂಚನೆ ಕೊಟ್ಟಿದ್ದಾರೆ. ನಾನು ಆ ಸಂದರ್ಭ ಬಂದಾಗ ಈ ವಿಚಾರ ಮಾತನಾಡುತ್ತೇನೆ. ಗೋರ್‌ವಾಲಾರವರು ಏನೇನು ಹೇಳಿದ್ದಾರೋ ಅದೆಲ್ಲಾ ಅಪದ್ಧ ಎಂದು ಹೇಳುವವನು ನಾನಲ್ಲ. ಈ ಕೈಗಾರಿಕೆ ಒಂದು ಸ್ವಯಂ ಆಡಳಿತ ಮಂಡಲಿಯ ಕೆಳಗೆ ಇದ್ದರೆ ಸರ್ಕಾರ ಅದರ ದಿನಚರಿಯು ಕೆಲಸ ಕಾರ್ಯಗಳು ತೃಪ್ತಿಕರವಾಗಿ ನಡೆಯುತ್ತಿವೆಯೇ, ವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿವೆಯೇ ಎಂದು ನೋಡುವುದಕ್ಕಾಗುವುದಿಲ್ಲ. ಅದಕ್ಕೆ ತೊಂದರೆ ಬಂದರೆ ನಿವಾರಣೆ ಮಾಡುವುದಕ್ಕೆ ಕಷ್ಟವಾಗುತ್ತದೆ. ಸ್ವಯಂ ಆಡಳಿತ ಕೊಟ್ಟುಬಿಟ್ಟಿದ್ದೇವೆ, ಮಂಡಲಿಯವರೇ ನಡೆಸಿಕೊಳ್ಳಿ ಎಂದು ಹೇಳುವ ಸಂಭವವುಂಟು. ಲೇಬರಿಗೂ ಇದರಿಂದ ಅನುಕೂಲವಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಉದಾಹರಣೆಗೆ, ಎಲೆಕ್ಟ್ರಿಸಿಟಿ ಬೋರ್ಡ್ ಮಾಡಿದ್ದೇವೆ. ಅಲ್ಲಿನ ಉಮೇದುವಾರರಿಗೆ ಅನ್ಯಾಯವಾಗಿದೆ ಮತ್ತು ರಾತ್ರಿಕಾಲದಲ್ಲಿ ನೀರಾವರಿ ಕಾರ್ಯಕ್ಕೆ ವಿದ್ಯುಚ್ಛಕ್ತಿ ಕೊಡದೆ, ಹಗಲಿನಲ್ಲಿ ಕೊಡಿ ಎಂದು ಹೇಳಿದ್ದಕ್ಕೆ, ಅಗ್ರಿಮೆಂಟ್ ಆಗಿಬಿಟ್ಟಿದೆ, ಬೋರ್ಡಿನ ತೀರ್ಮಾನದಂತೆ ನಡೆಯಬೇಕೆಂದು ಉತ್ತರದಲ್ಲಿ ಹೇಳಿದರು. ಆ ರೀತಿ ಮಂಡಲಿ ರಚನೆಯಾಗದಿದ್ದರೆ, ಪ್ರತಿನಿಧಿಗಳು ದೇಶದ ಕಷ್ಟ ಹೀಗಿದೆ, ಸರಿಮಾಡಿ ಎಂದು ಹೇಳಬಹುದಾಗಿತ್ತು. ಈಗ ಬೋರ್ಡಿನ ಇಂಟರ್ನಲ್ ಆಡಳಿತದಲ್ಲಿ ಕೈ ಹಾಕುವುದಕ್ಕಾಗುವುದಿಲ್ಲ ಎಂದು ಸರ್ಕಾರದವರು ಹೇಳುತ್ತಾರೆ. ಈ ತರಹ ರೇಷ್ಮೆ ಕೈಗಾರಿಕೆಗೂ ಒಂದು ಇಂಡಿಪೆಂಡೆಂಟ್ ಬಾಡಿ ಮಾಡಿದರೆ, ಅದರ ಎಲ್ಲಾ ವಿಚಾರಗಳಲ್ಲಿಯೂ ಮತ್ತು ಆಡಳಿತದಲ್ಲಿಯೂ ನಿಮಗೆ ಕೈಹಾಕುವ ಅವಕಾಶ ಇಲ್ಲದೆ ಹೋಗುತ್ತದೆ. ನಿಮ್ಮ ಮನಸ್ಸಿನಲ್ಲಿ ಸರ್ಕಾರದವರು ತಮಗೆ ಬೇಕಾದವರನ್ನು ಈ ಕೈಗಾರಿಕಾ ಸಲಹಾ ಮಂಡಲಿಯಲ್ಲಿ ಇಟ್ಟುಕೊಂಡಿದ್ದಾರೆ, ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ ಎಂಬ ಭಾವನೆ ಇದ್ದಪಕ್ಷದಲ್ಲಿ ಈವಾಗ ಸರ್ಕಾರವನ್ನು ತಿದ್ದುವುದಕ್ಕೆ ಮತ್ತು ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಅವಕಾಶವಿದೆ. ಕಾರ್ಪೊರೇಷನ್ ಮಾಡುವುದರಿಂದ, ಇಂಥ ನ್ಯೂನತೆಗಳ ಬಗ್ಗೆ ಸರ್ಕಾರ ಏನೂ ಮಾಡಲಾಗುವುದಿಲ್ಲ. ಸ್ಪನ್ ಸಿಲ್ಕ್ ಕಾರ್ಖಾನೆಯ ಆಡಳಿತವನ್ನು ನೀವು ಯಾರಿಗೆ ವಹಿಸಿದಿರೋ, ಅದನ್ನು ನಡೆಸುವುದಕ್ಕೋಸ್ಕರ ಯಾರನ್ನು ನೇಮಕ ಮಾಡಿದಿರೋ, ಅವರೇ ಕೆಲವರನ್ನು ಸೇರಿಸಿಕೊಂಡು ಅವರೇ ಅದರ ಅಧೋಗತಿಗೆ ಕಾರಣರಾದರೆಂಬ ಮಾತು ಜನಜನಿತವಾಗಿದೆ. ಸರ್ಕಾರ ಈ ವಿಷಯದಲ್ಲಿ ಕೈಹಾಕಿ, ಅದರಲ್ಲಿ ಏನೇನು ನ್ಯೂನತೆಗಳಿವೆಯೋ ಅವುಗಳನ್ನು ಹೋಗಲಾಡಿಸಿ, ಉತ್ತಮ ರೀತಿಯಲ್ಲಿ ಸಬ್‌ಸಿಡಿ ಕೊಟ್ಟು, ಈ ಕೈಗಾರಿಕೆಯನ್ನು ನಡೆಸಬೇಕೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಂ. ಸಿ. ಲಿಂಗೇಗೌಡ.—ಭದ್ರಾವತಿ ಐರನ್ ವರ್ಕ್ಸ್‌ನ್ನು ಕಾರ್ಪೊರೇಷನ್ನಿಗೆ ಒಪ್ಪಿಸುವುದರಿಂದ ನಷ್ಟವಾಗುತ್ತದೆಂದು ಗೋರ್‌ವಾಲ ಸಾಹೇಬರು ಹೇಳಿದ್ದಾರೆಂದು ಹೇಳಿದಿರಿ. ಸಿಲ್ಕ್ ಇಂಡಸ್ಟ್ರಿ ವಿಷಯದಲ್ಲಿ ಗೋರ್‌ವಾಲರವರು ಏನು ಹೇಳಿದ್ದಾರೆ?

ಶ್ರೀ ಬಿ. ರಾಚಯ್ಯ.—ಸರ್ಕಾರದವರು ಈ ಸ್ಪನ್ ಸಿಲ್ಕ್ ಫ್ಯಾಕ್ಟರಿಗಳನ್ನು ವಹಿಸಿಕೊಳ್ಳುವುದಕ್ಕೆ ಮುಂಚೆ ಅವು ಅಧೋಗತಿಗೆ ಇಳಿದು ನಷ್ಟ ತೋರಿಸುತ್ತಿದ್ದುವು. ಅವಕ್ಕೆ ಪರಿಹಾರವಿಲ್ಲ, ನಷ್ಟದಲ್ಲಿ ಕೆಲಸ ಮಾಡುತ್ತಿವೆ ಎಂದು ನಾವೂ ನೀವೂ ಈ ಸಭೆಯಲ್ಲಿ ಕೂಗಿದಮೇಲೆ, ಸರ್ಕಾರ 18 ಲಕ್ಷ ರೂಪಾಯಿ ಪರಿಹಾರ ಕೊಟ್ಟು, ಸರ್ಕಾರದ ವಶಕ್ಕೆ ತೆಗೆದುಕೊಂಡು ಸುವ್ಯವಸ್ಥಿತ ರೀತಿಯಲ್ಲಿ ನಡೆಸುತ್ತಿದೆ; ಇನ್ನೂ ಹೆಚ್ಚಿನ ಸುವ್ಯವಸ್ಥಿತ ರೀತಿಯಲ್ಲಿ ನಡೆಯಲಿ ಎನ್ನತಕ್ಕಂಥ ಆಸೆ ಇದೆ. ಹಿಂದಿನ ಎಲ್ಲಾ ಬೇಸಿನ್ನುಗಳನ್ನೂ ರಿಪ್ಲೇಸ್ ಮಾಡಿ, ಹೊಸ ಬೇಸಿನ್ನುಗಳು ಬರುವವರಿಗೆ ಪ್ರೊಟೆಕ್ಷನ್ ಬೇಕು. ಇದಕ್ಕೆ ಸುಮಾರು ಹತ್ತು ವರ್ಷ ಹಿಡಿಯಬಹುದು. ಇದಕ್ಕೋಸ್ಕರ ಐದು ಲಕ್ಷ ರೂಪಾಯಿ ಸಬ್‌ಸಿಡಿಯನ್ನು ಫ್ಯಾಕ್ಟರಿಗೆ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಸೂಚನೆ ಮಾಡಲು ಇಷ್ಟಪಡುತ್ತೇನೆ. ತಮಗೆ ಈ ಕೈಗಾರಿಕೆಯ ಮೇಲೆ ಎಷ್ಟು ಆಸಕ್ತಿ ಇದೆಯೋ ಅಷ್ಟೇ ಆಸಕ್ತಿ ನನಗೂ ಇದೆ. ನೀವು ಹೇಳಿದಹಾಗೆ ಕಾರ್ಪೊರೇಷನ್ನೇ, ಬೋರ್ಡ್ ಮಾಡುವುದರಿಂದ, ಕೈಗಾರಿಕೆಗಳಿಗೆ ಬಹಳ ಅನ್ಯಾಯವಾಗುತ್ತದೆ. ರಿಜಿಸ್ಟ್ರೇಷನ್ ಫೀ ಕೊಡುವುದಕ್ಕೆ ಕೆಲವು

ಫ್ಯಾಕ್ಟರಿಗಳಿಗೆ ದುಡ್ಡು ಇಲ್ಲ. ಪ್ರಾವಿಡೆಂಟ್ ಫಂಡು, ಬೋನಸ್ಸು ಇವುಗಳನ್ನು ಕೊಡಬೇಕು. ಕೊಡಬೇಕಾದರೆ ಫ್ಯಾಕ್ಟರಿಗಳ ಲಾಭವೇನು, ನಷ್ಟವೇನು ನೋಡಬೇಕು. ಲೇಬರುಗಳ ದೃಷ್ಟಿಯಿಂದಲೂ ಕಾರ್ಪೊರೇಶನ್ ಮಾಡುವುದರಿಂದ ಅನುಕೂಲವೇ ಎಂದು ನೋಡಬೇಕು. ಈ ಕೈಗಾರಿಕೆಯನ್ನು ಸ್ವಯಂ ಆಡಳಿತದ ಬೋರ್ಡಿಗೆ ವಹಿಸುವುದರಿಂದ, ಅವರ ಸ್ಥಿತಿ ಉತ್ತಮವಾಗುವುದಿಲ್ಲ, ಏಕೆಂದರೆ ಬೋನಸ್ ವಗೈರೆಗಳನ್ನು ಕೈಗಾರಿಕೆ ಲಾಭದಾಯಕವಾಗಿ ಕೆಲಸ ಮಾಡಿದರೆ ಮಾತ್ರ ಕೊಡಬಹುದು. ಯಾವದೃಷ್ಟಿಯಿಂದಲೂ ಈ ಕೈಗಾರಿಕೆಯನ್ನು ಸ್ವಯಂ ಆಡಳಿತ ಮಂಡಲಿಗೆ ಒಪ್ಪಿಸುವುದರಿಂದ ಬೆಳೆಗಾರರಿಗಾಗಲಿ, ಆಡಳಿತ ವರ್ಗದವರಿಗಾಗಲಿ, ಯಾರಿಗೇ ಆಗಲಿ ಇದರಿಂದ ಹೆಚ್ಚಿನ ಉಪಯೋಗವಾಗುವುದಿಲ್ಲವೆನ್ನುವುದೇ ನನ್ನ ಖಚಿತವಾದ ಅಭಿಪ್ರಾಯ. ರೀಲರುಗಳು ಸುಮಾರು 25 ಸಾವಿರ ರೂಪಾಯಿಗಳವರೆಗೆ ಟರ್ನ್-ಓವರ್ ಇದ್ದರೆ, ಲೈಸೆನ್ಸ್ ತೆಗೆದುಕೊಳ್ಳಬೇಕಾಗುತ್ತದೆ. ಸಿಲ್ಕ್ ವೇಸ್ಟಿಗೆ ಪ್ರತಿಯೊಂದು ರೂಪಾಯಿಗೆ ಎರಡು ನಯೇಪೈಸೆ ಸೇಲ್ಸ್ ಟ್ಯಾಕ್ಸ್ ಹಾಕಿದ್ದಾರೆ. ಸಿಲ್ಕಿಗೆ ಮಾತ್ರ ರಿಯಾಯಿತಿ ಕೊಟ್ಟಿದ್ದಾರೆ. ಶ್ರೀಮಾನ್ ಮರಿಯಪ್ಪನವರಲ್ಲಿ ವೇಸ್ಟ್ ಸಿಲ್ಕಿಗೆ ಸೇಲ್ಸ್ ಟ್ಯಾಕ್ಸ್ ಹಾಕಿರುವುದರಿಂದ ಸಿಲ್ಕಿಗಿಂತಲೂ ಜಾಸ್ತಿ ತೆರಿಗೆ ಅದಕ್ಕೆ ಕೊಡಬೇಕಾಗಿದೆ ಎಂದು ಹೇಳಿಕೊಳ್ಳಬೇಕಾಗಿದೆ. ಅನೇಕ ಸಿಲ್ಕ್ ವೀವರುಗಳಿಗೆ ಇದು ಬೈಪ್ರಾಡಕ್ಟಾಗಿರುವುದರಿಂದ, ಅವರು ಟಾಕ್ಸ್ ಕೊಡಲಾರದೆ ಕೋರ್ಟಿಗೆ ಹೋಗುತ್ತಿದ್ದಾರೆ. ರೇಷ್ಮೆ ವ್ಯಾಪಾರದಲ್ಲಿ ಉದ್ಯುಕ್ತರಾದ ಜನಗಳಿಗೆ ರಕ್ಷಣೆ ಬೇಕಾಗಿರುವುದರಿಂದ ಸರ್ಕಾರ ಈ ಟ್ಯಾಕ್ಸನ್ನು ವಜಾ ಮಾಡಬೇಕು. ಈ ಬೈಪ್ರಾಡಕ್ಟಿನ ಮೇಲೆ ಇರತಕ್ಕಂಥ ತೆರಿಗೆಯನ್ನು ವಜಾಮಾಡದೆ, ರೇಷ್ಮೆ ಕೈಗಾರಿಕೆಯನ್ನು ಒಂದು ಸ್ವಯಂ ಆಡಳಿತದ ಬೋರ್ಡಿನ ವಶಕ್ಕೆ ಬಿಟ್ಟರೆ, ಆಗ ಆ ಬೋರ್ಡು ಈ ತೆರಿಗೆಯನ್ನೂ ಕೊಡಬೇಕಾಗುತ್ತದೆ. ಆ ದೃಷ್ಟಿಯಿಂದಲೂ ಕಾರ್ಪೊರೇಷನ್ ಬೇಕಾಗಿಲ್ಲ. ಇಂಡಿಯಾ ಸರ್ಕಾರದವರ ನೆರವು ಈ ಕೈಗಾರಿಕೆಗೆ ಇದೆ. ಅನೇಕ ರೀತಿಯಲ್ಲಿ ಅವರು ಸಬ್‌ಸಿಡಿಯನ್ನು ಕೊಡುತ್ತಾ ಇದ್ದಾರೆ; ಯೋಜನೆಗಳನ್ನು ಮಾಡಿಕೊಡುತ್ತಿದ್ದಾರೆ. ಅವರ ಸಹಾಯ ನಮಗೆ ಬೇಕಾಗಿದೆ. ಮಾನ್ಯ ಮರಿಯಪ್ಪನವರ ಕುಟುಂಬದವರು ಮತ್ತು ಐಶ್ವರ್ಯವಂತರು ಮೈಸೂರು ರೇಷ್ಮೆ ಸೀರೆಯನ್ನು ಉಟ್ಟುಕೊಳ್ಳಬಹುದು. ನಮ್ಮಂಥವರು ಮತ್ತು ರೇಷ್ಮೆ ಸೀರೆಗಳನ್ನು ಕಡಿಮೆ ಬೆಲೆಗೆ ತೆಗೆದುಕೊಳ್ಳಬೇಕೆಂಬ ಇಚ್ಛೆ ಇರತಕ್ಕಂಥ ಜನರೂ ಇದ್ದಾರೆ. ಈ ದೃಷ್ಟಿಯಿಂದ ಈ ಉದ್ಯಮವನ್ನು ಮಾಡತಕ್ಕ ಜನ ಹೊರಗಡೆಯಿಂದ ರೇಷ್ಮೆಯನ್ನು ತರಿಸಿಕೊಡಿ ಎಂದು ಒಂದುಕಡೆ ಕೇಳುತ್ತಿದ್ದಾರೆ. ಅಲ್ಲಿಂದ ನಮಗೆ ರೇಷ್ಮೆ ಹೆಚ್ಚಿಗೆ ಬರುತ್ತದೆ. ನಮ್ಮ ಮೈಸೂರು ಸಿಲ್ಕ್ ಮಾಡುವ ಜನರಿಗೆ ಅದರ ಬೆಲೆ ಸರಿಯಾಗಿ ತಿಳಿಯದಿರುವುದರಿಂದ ಯಾವ ವಿಧವಾದ ಲಾಭವನ್ನೂ ಪಡೆಯದೆ ನಷ್ಟಕ್ಕೀಡಾಗುತ್ತಿದ್ದಾರೆ. ಈಗಿರತಕ್ಕ ಫ್ಲಕ್ಚುಯೇಷನ್ಸ್ ಅನ್ನು ಕಡಿಮೆಮಾಡಬೇಕು. ಹೊರಗಿನ ರೇಷ್ಮೆ ಇಲ್ಲಿಗೆ ಬಾರದೇ ಇರುವ ಮಟ್ಟಿಗೆ ತಡೆಗಟ್ಟಬಾರದು. ಅಂತೂ ಸೆಂಟ್ರಲ್ ಸಿಲ್ಕ್ ಬೋರ್ಡಿನವರು, ಈ ಕೈಗಾರಿಕೆ ಬಗ್ಗೆ ಅವರ ರಕ್ಷಣೆಯನ್ನು ಇನ್ನೂ ಕೆಲವುಕಾಲ ಕೊಡಬೇಕು. ಅದು ಪುಷ್ಟಿದಾಯಕವಾಗಿ, ಸ್ವಂತ ಕಾಲಿನ ಮೇಲೆ ನಿಂತುಕೊಳ್ಳುವವರೆಗೂ ಈ ಕೈಗಾರಿಕೆಯಲ್ಲಿ ಸ್ವಯಂ ಆಡಳಿತ ಬೇಡ. ಅದು ಸರ್ಕಾರದ ಒಂದು ನೇತೃತ್ವದಲ್ಲಿ ಇರಲಿ ಎಂದು ಹೇಳುತ್ತೇನೆ. ಈ ನಿರ್ಣಯವನ್ನು ತಂದಿರುವ ಮಾನ್ಯ ಶ್ರೀ ಲಿಂಗೇಗೌಡರು ತಿದ್ದುಪಡಿಯನ್ನು ಒಪ್ಪಿಕೊಳ್ಳಿ ನನ್ನ ಮೂಲಠರಾವನ್ನು ಪ್ರೆಸ್ ಮಾಡುವುದಿಲ್ಲವೆಂದು ಹೇಳಿದರು. ಆದರೆ ತಿದ್ದುಪಡಿ ಅಷ್ಟು ಸಮಂಜಸವಾಗಿ ಕಾಣುತ್ತಿಲ್ಲ. ನಿರ್ಣಯವೇ ಸರಿಯಾಗಿಲ್ಲದೇ ಇರುವಾಗ ತಿದ್ದುಪಡಿ ನಿರ್ಣಯ ಎಲ್ಲಿ ನಿಲ್ಲುತ್ತದೆ ಈ ನಿರ್ಣಯವನ್ನು ಒಪ್ಪುವುದರಿಂದ, ಮತ್ತು ನಿರ್ಣಯದಮೇಲೆ ತಿದ್ದುಪಡಿ ಮಾಡಿರತಕ್ಕ ನಿರ್ಣಯವನ್ನು ಒಪ್ಪುವುದರಿಂದ ಈ ಕೈಗಾರಿಕೆಯಲ್ಲಿ ಹೆಚ್ಚಿನ ಪ್ರತಿಫಲ ದೊರಕುತ್ತದೆಯೇ ಅಥವಾ ಹೆಚ್ಚಿನ ಪ್ರೋತ್ಸಾಹವೇನಾದರೂ ದೊರಕುತ್ತದೆಯೇ ಎಂದು ನೋಡುವುದಾದರೆ, ಇನ್ನೂ ಹತ್ತು ವರ್ಷಗಳು ಬೇಕಾಗುತ್ತದೆಂದು ನಾನು ಹೇಳುತ್ತೇನೆ. ನಮ್ಮ ಕೈಲಿ ಏನೂ ಇಲ್ಲವೆಂದು ಶ್ರೀ ಲಿಂಗೇಗೌಡರು ಹೇಳಿದ ಪರಿಸ್ಥಿತಿ ಬರುತ್ತದೆ. ಆಗ ಆಡಳಿತ ಮಂಡಲಿಯವರು ಅಧಿಕಾರಿಗಳಲ್ಲಿ ಏನಾದರೂ ಲೋಪಗಳಿದ್ದರೆ ಅವಕ್ಕೆ ಸಲಹೆ ಕೊಡುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಅನನುಭವಿಗಳಾಗಬಾರದು. ನಮ್ಮಲ್ಲಿ ಸರಿಯಾದ ಪ್ರತಿನಿಧಿಗಳು ಇಲ್ಲ. ಆದ್ದರಿಂದ ನಮ್ಮ ಅಧಿಕಾರಿಗಳಪೈಕಿ ಉತ್ತಮರಾದಂತಹವರನ್ನು ಹೊರಗಡೆ, ಫಾರಿನ್ನಿಗೆ ಕಳುಹಿಸಿ ಅವರು ಅಲ್ಲಿ ಈ ಬಗ್ಗೆ ಹೆಚ್ಚಿನ ಅನುಭವವನ್ನು ಪಡೆದುಬಂದು ಈ ಕೈಗಾರಿಕೆಗೆ ಹೆಚ್ಚಿನ ಪ್ರೋತ್ಸಾಹವನ್ನು ನಮ್ಮ ದೇಶದಲ್ಲಿ ಎಲ್ಲರೂ ಕೊಡುವ ರೀತಿಯಲ್ಲಿ ಮಾಡಬೇಕು.

ಶ್ರೀ ಸಿ.ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನಹಳ್ಳಿ).—ಕೇಂದ್ರ ಸರ್ಕಾರ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಒಂದು ಅಟಾನಮಸ್ ಬಾಡಿ ಮಾಡಬೇಕೆಂದು ಹೇಳಿದ್ದಾರೆ. ಅದು ಒಂದು ತಪ್ಪು ಅಭಿಪ್ರಾಯವೇ ?

ಶ್ರೀ ಟಿ. ಮರಿಯಪ್ಪ.—ಅವರು ಬೋರ್ಡ್ ಒಂದೊಂದು ಐಟಂಗೆ ಬೇರೆ ಬೇರೆ ಮಾಡಿದರೇ ಹೊರತು ಮತ್ತೇನೂ ಇಲ್ಲ.

ಶ್ರೀ ಬಿ. ರಾಚಯ್ಯ.—ಕೇಂದ್ರ ಸರ್ಕಾರದವರು ಎಲ್ಲಾ ಮಸೂದೆಗಳನ್ನು ಒಟ್ಟುಗೂಡಿಸಿ ಒಂದು ಮಂಡಲಿಯನ್ನು ಮಾಡಲಿಲ್ಲ. ಒಂದುವೇಳೆ ಆ ರೀತಿ ಮಾಡಿದ್ದರೆ ನನ್ನ ಸ್ವಂತ ಅಭಿಪ್ರಾಯ ಇದರಲ್ಲಿ ಏನೆಂದರೆ ಈ ಮಂಡಲಿಗಳ ಪ್ರತಿನಿಧಿಗಳಾಗಲಿ, ಪ್ರತಿನಿಧಿಗಳಿಂದ ಆರಿಸಲ್ಪಟ್ಟಂತಹವರಾಗಲಿ ಸರ್ಕಾರಕ್ಕೆ ನೇರವಾಗಿ ಕೈಹಾಕಿದ್ದರೂ ಏನೂ ಪ್ರಯೋಜನವಾಗಲಿಲ್ಲ. ನಾನು ಅನೇಕ ಸೊಸೈಟಿಗಳನ್ನು ನೋಡಿದ್ದೇನೆ. ನಮ್ಮಿಂದ ಚುನಾಯಿಸಲ್ಪಟ್ಟ ನೀವೇ ಅನೇಕ ಸಂದರ್ಭಗಳಲ್ಲಿ ಹೇಳುತ್ತೀರಿ, ಸರ್ಕಾರದ ದುಡ್ಡು ವ್ಯಯವಾಗುವಾಗ, ಸಾರ್ವಜನಿಕರ ಹಣವನ್ನು ಅನೇಕ ಕೈಗಾರಿಕೆಗಳ ಮೇಲೆ ಹಾಕಿರುವಾಗ ಅದರ ಜವಾಬ್ದಾರಿ ನೋಡುವುದು ನಮ್ಮೆಲ್ಲರ ಕರ್ತವ್ಯವೆಂದು. ಆದ್ದರಿಂದ ಈ ಕೈಗಾರಿಕೆ ಲಾಭದಾಯಕವಾಗಿ ನಡೆಯುವುದಕ್ಕೆ ಸರ್ಕಾರ ನೋಡಿಕೊಳ್ಳಬೇಕು. ಸಾರ್ವಜನಿಕರ ದುಡ್ಡು ಇರುವುದರಿಂದ ಯಾರಲ್ಲಿ ನಂಬಿಕೆ ಇದೆಯೋ ಅಂತಹ ಅಧಿಕಾರಿಗಳನ್ನು ನೇಮಿಸಬೇಕು.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಅನೇಕರಿಗೆ ಈಗಾಗಲೇ ಚೆನ್ನಾಗಿ ತಿಂದು ಅರಗಿಸಿಕೊಳ್ಳುವುದಕೆ ಏನೂ ರಹದಾರಿ ಇಲ್ಲದೆ ಇರುತ್ತಾರೆ.

ಶ್ರೀ ಬಿ. ರಾಚಯ್ಯ.—ಇನ್ನು ನಮ್ಮ ಸ್ವಯಂ ಆಡಳಿತದ ಸಿಲ್ಕ್ ಫಿಲೇಚರ್ ಬಗ್ಗೆ ಒಂದು ಕಥೆಯನ್ನು ಹೇಳಿದರೆ ಬಹಳ ಕಾಲವಾಗುತ್ತದೆ. ಅದರ ಅನುಭವ ಬೇರೆ ರೀತಿಯಾಗಿದೆ. ಆ ಕಥೆಯನ್ನು ಇಲ್ಲಿ

(ಶ್ರೀ ಬಿ. ರಾಚಯ್ಯ)

ಹೇಳಿದರೆ ಏನೂ ಪ್ರಯೋಜನವಾಗುವುದಿಲ್ಲ. ಸಧ್ಯಕ್ಕೆ ಅವರು ಹಿಡಿದಿದ್ದೇ ಹಟ ಎಂದು ಹೇಳುವುದಕ್ಕೂ ಆಗುವುದಿಲ್ಲ. ಈಗ ಹೇಳುವುದು ಸಧ್ಯಕ್ಕೆ ಬರುವುದಿಲ್ಲ. ಒಪ್ಪಿಕೊಳ್ಳುವ ಸೌಜನ್ಯ ಅವರ ಮನಸ್ಸಿನಲ್ಲಿ ಪರಿಣಾಮವಾಗಿ ಬಂದಿಲ್ಲವೆಂದು ನಾನು ಹೇಳುತ್ತೇನೆ. ಈ ದೃಷ್ಟಿಯಿಂದ ಈ ಕೈಗಾರಿಕೆಯಲ್ಲಿ ಅವಲಂಬಿಸಿರತಕ್ಕವರ, ವ್ಯಾಪಾರ ಮಾಡತಕ್ಕವರ ಮತ್ತು ಎಕ್ಸ್‌ಪೋರ್ಟ್ ಮತ್ತು ಇಂಪೋರ್ಟ್ ಮಾಡತಕ್ಕವರ ದೃಷ್ಟಿಯಿಂದ ಸರ್ಕಾರ ಇದಕ್ಕೆ ಒಂದು ರಕ್ಷಣೆ ಕೊಡಲು ಇನ್ನೂ ಬಹಳ ಕಾಲ ಬೇಕಾಗಿದೆ. ಅವರಿಗೆ ಈಗಲೇ ಸ್ವಯಂ ಆಡಳಿತ ಕೊಡುವುದರಿಂದ, ಅಧಿಕಾರಿಗಳನ್ನು ಅವರೇ ನೇಮಿಸಿಕೊಳ್ಳತಕ್ಕದ್ದು, ಅಧಿಕಾರಿ ಮತ್ತು ಲೇಬರ್ ಮತ್ತು ಮ್ಯಾನೇಜ್‌ಮೆಂಟ್ ಇವರಿಗಿರುವ ಸಂಬಂಧ, ವ್ಯವಹಾರಗಳನ್ನು ಅವರೇ ಬಗೆಹರಿಸತಕ್ಕದ್ದು, ಅದಕ್ಕೆ ಬೇಕಾದ ಯೋಜನೆಗಳನ್ನು ಹಾಕಿಕೊಳ್ಳತಕ್ಕದ್ದು, ದುಡ್ಡನ್ನು ಒದಗಿಸತಕ್ಕದ್ದು, ಇವೆಲ್ಲವನ್ನೂ ಅವರೇ ನೋಡಿಕೊಳ್ಳುತ್ತಾರೆ ಎಂದು ಹೇಳಿದರೆ ಈಗ too minor ಎಂದು ಹೇಳುತ್ತೇನೆ. ದೊಡ್ಡ ಆಡಳಿತವನ್ನು ನಡೆಯಿಸಿ ಎಂದು ಅವರಿಗೆ ನಾವೇ ಕೊಡುವುದು ಸರಿಯಲ್ಲ. ಪ್ರಾಪ್ತ ವಯಸ್ಕರಾದಮೇಲೆ ಆ ರೀತಿ ಕೊಡಬೇಕಾಗಿತ್ತು. ಇದು ಸಕಾಲವಲ್ಲ, ಆದ್ದರಿಂದ ಈ ಕೈಗಾರಿಕೆ ಉತ್ತಮರೀತಿಯಲ್ಲಿ ಬೆಳೆದು ಒಂದು ಪರಿಸ್ಥಿತಿಗೆ ಬರುವವರೆಗೂ ಸರ್ಕಾರದವರ ರಕ್ಷಣೆಯಲ್ಲಿರಲಿ. ಇನ್ನು ಹತ್ತಾರು ವರ್ಷಗಳಾದ ಮೇಲೆ, ಸಾಕಾದಷ್ಟು ಈ ಕೈಗಾರಿಕೆ ಬೆಳೆದಿದೆ ಎಂದು ಗೊತ್ತಾದಮೇಲೆ ಆಗ ಬೋರ್ಡಿಗೆ ಇದರ ಆಡಳಿತವನ್ನು ಒಪ್ಪಿಸಬಹುದೆಂದು ನಾನು ಹೇಳುತ್ತೇನೆ. ನಾನು ಆಗ ಇಂತಹ ನಿರ್ಣಯಗಳಿಗೆ ಅನುಮೋದನೆ ಮಾಡುತ್ತೇನೆಯೇ ವಿನಾ ಈಗ ಸದ್ಯದ ಪರಿಸ್ಥಿತಿಯಲ್ಲಿ ಈ ನಿರ್ಣಯವನ್ನು ಒಪ್ಪುವುದಕ್ಕೆ ಸಿದ್ಧನಾಗಿಲ್ಲವೆಂದು ಹೇಳಿ ಈ ಕೈಗಾರಿಕೆಯಮೇಲೆ ತುಂಬ ಅಭಿಮಾನವಿಟ್ಟು ಮಾನ್ಯ ಸದಸ್ಯರು ತಮ್ಮ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಂ. ಲಿಂಗೇಗೌಡ.—ಆಡಳಿತ ಈಗಿರುವ ಹಾಗೆಯೇ ಇರಲಿ ಎಂದು ತಮ್ಮ ಅಭಿಪ್ರಾಯವಿದ್ದಂತೆ ಕಾಣುತ್ತದೆ. ಮಾನ್ಯ ಸದಸ್ಯರು ಏನಾದರೂ ಕನ್‌ಸ್ಟ್ರಕ್ಟಿವ್ ಸಜೆಷನ್‌ಗಳನ್ನು ಕೊಟ್ಟಿದ್ದರೆ, ಅದಕ್ಕೆ ನಮ್ಮ ಪಾಲಿಗೆ ತಲೆ ಬಗ್ಗಿಸಬೇಕಾಗಿತ್ತು. ಈಗಾಗಲೇ ಮೈಸೂರು ಸರ್ಕಾರದವರು ಸಿಲ್ಕ್ ಅಡ್ವೈಸರಿ ಕಮಿಟಿ ಎಂದು ಬೇರೆ ಮಾಡಿದ್ದಾರೆ.

ಶ್ರೀ ಜಿ. ವೆಂಕಟೇಗೌಡ.—ಆದರೆ ಅವರು ಈ ಬಗ್ಗೆ ಏನು ಸಜೆಷನ್ಸ್ ಮಾಡಿದ್ದಾರೆಂಬುದು ಗೊತ್ತಿಲ್ಲ.

ಶ್ರೀ ಟಿ. ಮರಿಯಪ್ಪ.—ಆ ಕಮಿಟಿಯವರು ಮೈಸೂರು ರೇಷ್ಮೆ ಕೈಗಾರಿಕೆಯ ವಿಷಯದಲ್ಲಿ ಆಗಾಗ್ಗೆ ಸಲಹೆಗಳನ್ನು ಕೊಡುತ್ತಿರುವುದರಿಂದ, ಆ ಸಲಹೆಗಳ ಪೈಕಿ ಕೆಲ ಮಟ್ಟಿಗೆ ಇವತ್ತಿನ ದಿವಸ ಕಾರ್ಯಗತವಾಗಿವೆ.

ಶ್ರೀ ಜೆ. ವೆಂಕಟಪ್ಪ (ಶಿಡ್ಲಘಟ್ಟ).—ಮೈಸೂರು ಸಿಲ್ಕ್ ಅಡ್ವೈಸರಿ ಕಮಿಟಿಗೆ ಸಂಬಂಧಪಟ್ಟ ಅಧಿಕಾರಿಗಳು ಆ ಕಮಿಟಿ ಚೇರಮನ್ನರ ಮರ್ಜಿಯಿಂದ ನಡೆಯಬೇಕು. ಮೀಟಿಂಗ್ ವರ್ಷಾನುಗಟ್ಟಲೆ ಮುಂದೆಮುಂದೆ ಹೋಗುತ್ತಿದೆ. ಆ ಕಮಿಟಿಗೆ ಸಂಪೂರ್ಣ ಪವರ್ಸ್ ಇದ್ದರೂ, ಯಾವ ಕೆಲಸವನ್ನು ಮಾಡಿದ್ದಾರೆ? ಅಲ್ಲಿ 15 ಜನ ಮೆಂಬರುಗಳು. ಆ ಕಮಿಟಿ ಈಗ್ಗೆ ಒಂದು ವರ್ಷದಿಂದ ಏನು ಕೆಲಸ ಮಾಡಿದೆಯೆಂಬುದನ್ನು ನೀವೇ ಹೇಳಿ.

ಶ್ರೀ ಬಿ. ರಾಚಯ್ಯ.—ಈ ಬಗ್ಗೆ ಮೂರು ದಿವಸಗಳಿಂದ ಚರ್ಚೆ ನಡೆಯುತ್ತಾ ಇರುವುದರಿಂದ ನಾನು ಡೀಟೇಲ್ಸ್ ಹೇಳುವುದಕ್ಕೆ ಹೋದರೆ ಜಾಸ್ತಿಯಾಗುತ್ತದೆ. ಶ್ರೀಮಾನ್ ವೆಂಕಟಪ್ಪನವರು ಹೇಳಿದ ಹಾಗೆ ಈ ಕಮಿಟಿ twice in a year ಮೀಟಿಂಗ್ ನಡೆಯಬೇಕು ಎಂದು ಇದೆ. ಅದನ್ನು ಎಷ್ಟು ಬೇಗ ಕರೆಯಬೇಕೋ ಅಷ್ಟು ಬೇಗ ಕರೆಯಬೇಕು. ಅದಕ್ಕಾಗಿ ಕಾನ್‌ಸ್ಟಿಟ್ಯೂಷನ್ನಿನಲ್ಲಿ ಒಂದು ಸೆಕ್ಷನ್ ಪ್ರೊವೈಡ್ ಮಾಡಿದ್ದಾರೆ, ವರ್ಷಕ್ಕೆ ನಾಲ್ಕು ಬಾರಿಯಾದರೂ ಮೀಟಿಂಗ್ ಸೇರಬೇಕೆಂದು. ಅದರಲ್ಲಿ ಒಂದು ಸಬ್ ಕಮಿಟಿ ಮಾಡಿ,—ಶ್ರೀಮಾನ್ ವೆಂಕಟಪ್ಪನವರು ರೇಷ್ಮೆ ಗ್ರೋಯರ್ಸ್ ಆಗಿದ್ದಾರೆ ಅವರು ಹೆಚ್ಚಿನ ಪರಿಶ್ರಮದವರಾಗಿದ್ದಾರೆ,—ಅಂತಹವರನ್ನು ಆ ಕಮಿಟಿಯಲ್ಲಿ ಸೇರಿಸಬೇಕೆಂದು ಇದೆ.

4 P. M.

ಹೀಗೆ ರೀಲರ್ಸ್ ವಿಚಾರದಲ್ಲಿ ಮತ್ತು ವ್ಯಾಪಾರ ಮಾಡತಕ್ಕ ವಿಚಾರದಲ್ಲಿ ಅಂಥ ಸಮಿತಿಯು ಸಲಹೆಗಳಂತೆ ಉತ್ತಮಪಡಿಸಲು ಅವಕಾಶವಿದೆ. ಸರ್ಕಾರದವರು ಹಾಗೆ ಇದನ್ನು ಉತ್ತಮಪಡಿಸಲಿಲ್ಲ ಎಂದು ಹೇಳಿ ಇದನ್ನು ಕಾರ್ಪೊರೇಷನ್ನಿಗೆ ಒಪ್ಪಿಸಿಬಿಡಿ ಎಂದು ಹೇಳುವುದು ಸರಿಯೆಂದು ಕಾಣುವುದಿಲ್ಲ.

ಶ್ರೀ ವೈ. ವೀರಪ್ಪ.—ಅಧ್ಯಕ್ಷರೇ, ಇದು ಒಂದು ಬಹಳ ಸಿಂಪಲ್ ರೆಸಲ್ಯೂಷನ್. ಈ ಹಿಂದೆ ಕೆಲವು ಗಂಟೆಗಳ ಹಿಂದೆ ಮುಖ್ಯ ಮಂತ್ರಿಗಳು ಈ ನಿರ್ಣಯದ ಮೇಲಿನ ಚರ್ಚೆಯನ್ನು ಹತ್ತು ನಿಮಿಷಗಳೊಳಗಾಗಿ ಮುಗಿಸಿ ಬೇರೆ ರೆಸಲ್ಯೂಷನ್‌ಗಳನ್ನು ಚರ್ಚೆಗೆ ತೆಗೆದುಕೊಳ್ಳೋಣವೆಂದು ತೀರ್ಮಾನ ಹೇಳಿದ್ದರು. ಈಗ ನೋಡುತ್ತಿರುವಂತೆ ಅವರು ಹೇಳಿದ್ದ ವೇಳೆ ಪೂರೈಸಿ ಒಂದು ಗಂಟೆಯ ಕಾಲವನ್ನು ಇನ್ನೂ ಜಾಸ್ತಿಯಾಗಿ ಈ ನಿರ್ಣಯಕ್ಕೆ ಕೊಟ್ಟಿದ್ದಾರೆ. ಹೀಗೇ ಈ ಚರ್ಚೆ ಮುಂದುವರಿಯುತ್ತಿದ್ದರೆ ಇದು ಕೊನೆಯಾಗುವುದು ಯಾವತ್ತಿಗೆ? ನಿರ್ಣಯಗಳ ಚರ್ಚೆ ಬಗ್ಗೆ ಸರ್ಕಾರದ ನೀತಿಯೇನು ಎಂಬ ವಿಚಾರದಲ್ಲಿ ಅಧ್ಯಕ್ಷರಿಂದ ಕ್ಲಾರಿಫಿಕೇಷನ್ ಬೇಕಾಗಿದೆ.

Mr. CHAIRMAN (Sri R. Nagan-Gowda).—Your party members were putting questions to him; and he was replying to them. There is no question f any clarification.

ಶ್ರೀ ಬಿ. ರಾಚಯ್ಯ.—ಈ ಠರಾವನ್ನು ತಂದಿರತಕ್ಕ ಸದಸ್ಯರು ಇದರಿಂದ ರೈತರಿಗೆ ಎಷ್ಟು ತೊಂದರೆ ಇದೆ ಎಂಬುದನ್ನು ತಿಳಿಸಿದ್ದಾರೆ.

ಶ್ರೀ ವೈ. ವೀರಪ್ಪ.—ಇದಕ್ಕೆ ಮೂರು ದಿವಸಗಳ ಕಾಲ ಬೇಕೇನು?

ಶ್ರೀ ಬಿ. ರಾಚಯ್ಯ.—ನನಗೆ ಉದ್ದೇಶ ಪೂರ್ವಕವಾಗಿ ಚರ್ಚೆಯನ್ನು ಲಂಬಿಸಬೇಕೆಂಬ ಇರಾದೆಯಿಲ್ಲ. ನಾನು ಬಂದಿರತಕ್ಕ ಕ್ಷೇತ್ರದಲ್ಲಿ ಈ ವೃತ್ತಿಯನ್ನು ಅವಲಂಬಿಸಿರತಕ್ಕ ಜನ ಲಕ್ಷೋಪಲಕ್ಷವಾಗಿದ್ದಾರೆ. ಇಂಥ ಒಂದು ಉದ್ಯಮವನ್ನು ಈ ದಿವಸ ಒಂದು ಕಾರ್ಪೊರೇಷನ್ನಿಗೆ ಬಿಟ್ಟುಕೊಡಿ ಎಂದು ಹೇಳುತ್ತಿರುವಾಗ ಇಂಥ ಒಂದು ಬಹು ಮುಖ್ಯವಿಚಾರದಲ್ಲಿ ನನ್ನ ಸಲಹೆಗಳನ್ನು ಸೂಚಿಸುವುದಕ್ಕೂ ನನಗೊಂದು ಸ್ವಾತಂತ್ರ್ಯವಿಲ್ಲವೆಂದು ಹೇಳಿದರೆ ಅದು ಎಂಥ ಮಾತು? ಅದಕ್ಕೆ ನಾನು ಏನು ಹೇಳಲಿ? ಸರ್ಕಾರದವರು ಇಲ್ಲಿಗೆ

ಒಂದು ವರ್ಷದಿಂದಲೂ ಏನೂ ಕೆಲಸಮಾಡಿಲ್ಲ, ಸರ್ಕಾರದವರು ಇದಕ್ಕೆ ಸಾಕಷ್ಟು ಗಮನಕೊಡುತ್ತಿಲ್ಲ ಅದಕ್ಕಾಗಿ ಈ ಉದ್ಯಮವನ್ನು ಈಗ ಒಂದು ಸ್ಟ್ಯಾಚೂಟರಿಬಾಡಿಗೆ ಬಿಟ್ಟುಕೊಡಬೇಕೆಂದು ಶ್ರೀ ಜೆ. ವೆಂಕಟಪ್ಪನವರು ಹೇಳಿದರು. ಆದರೆ ಅದನ್ನು ನಾನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಈಗಾಗಲೇ ಒಂದು ರಿಟ್ ಕೇಸು ಹೈಕೋರ್ಟಿನಲ್ಲಿದೆ. ಅದರ ವಿಚಾರ ಏನಾಗಿದೆಯೋ ಅದು ನನಗೆ ಗೊತ್ತಿಲ್ಲ. ಸ್ಪನ್‌ಸಿಲ್ಕ್ ಕಾರ್ಖಾನೆಗಳಲ್ಲಿ ಉತ್ತಮ ರೀತಿಯಲ್ಲಿ ಕೆಲಸ ನಡೆಸಲು ಅನುಭವವುಳ್ಳ ಛೇರ್ಮನ್ನರನ್ನು ನೇಮಕಮಾಡಬೇಕು. ರೇಷ್ಮೆ ಕೈಗಾರಿಕೆಯಲ್ಲಿ ತೊಡಗಿರತಕ್ಕ ಜನರ ಹಿತ ದೃಷ್ಟಿಯಿಂದ ಈ ಫ್ಯಾಕ್ಟರಿಗಳನ್ನು ಸರಿಯಾದ ರೀತಿಯಲ್ಲಿ ನಡೆಸುತ್ತಿಲ್ಲವೆಂಬ ಕಾರಣಕ್ಕಾಗಿ ಇದನ್ನು ಏಕಾಏಕಿ ಕಾರ್ಪೊರೇಷನ್ನಿಗೆ ಒಪ್ಪಿಸಬೇಕೆಂದು ಹೇಳುವುದು ಸರಿಯಾದದ್ದಲ್ಲ. ಸರ್ಕಾರದವರು ಇದಕ್ಕಾಗಿ ಒಂದು ಸಮಿತಿ ಮಾಡಬೇಕಾದ್ದಿಲ್ಲ. ಇರುವುದಕ್ಕೆ ಇನ್ನೂ ಹೆಚ್ಚಿನ ಪವರನ್ನುಕೊಟ್ಟು ಅದಕ್ಕೆ ಮುಖ್ಯ ಮಂತ್ರಿಗಳೇ ಅಧ್ಯಕ್ಷರಾಗಿರುವುದರಿಂದ ಇಂಥ ಒಂದು ಸಮಿತಿಯೇ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಹೇಳುವುದಾದರೆ ಇನ್ನು ಮತ್ತೆ ಯಾವ ಬೋರ್ಡ್ ನೇಮಕ ಮಾಡಿದರೆತಾನೆ ಅದರಿಂದೇನು ಪ್ರಯೋಜನವಾದೀತು? ಅಂಥ ಬೋರ್ಡ್‌ಮಾಡಿ ಅದಕ್ಕೆ ನನ್ನಂಥವನನ್ನೋ ಅಥವಾ ಶ್ರೀ ಶಿವಪ್ಪನಂಥವರನ್ನೋ ನೇಮಕ ಮಾಡಿದರೆ ಅದರಿಂದೇನು ಪ್ರಯೋಜನ? ಆದುದರಿಂದ ಈಗ ಸದ್ಯಕ್ಕೆ ಈ ಉದ್ಯಮವನ್ನು ಕಾರ್ಪೊರೇಷನ್ನಿಗೆ ಒಪ್ಪಿಸಲು ಸಾಧ್ಯವಿಲ್ಲ; ಇನ್ನೂ ಕೊಂಚಕಾಲ ಕಾದು ನೋಡೋಣ ಎಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

**Sri M. RAMAPPA** (Harihar).—Sir, I want to know from the Chair whether we have got a policy in allotting time for resolutions.

**Mr. CHAIRMAN.**—There are rules on this subject and we have been conducting the business of resolutions according to those rules. Since the resolution dealt with an important subject the mover of the resolution and also of the amendment and others wanted to have more time and it was granted. So far as the policy is concerned it is governed by the rules of the House.

**Sri C. K. RAJAIAH SETTY.**—The members of the ruling party have already said that this is not an important resolution and that a Board is not necessary to be formed. Government also have expressed the same opinion and so I do not see any point in carrying on the discussion any further.

**Sri G. VENKATAI GOWDA.**—The Chief Minister was pleased to say that after the speech of Sri Rachaiah the reply would be given and that thereafter we could take up the next resolution. We have got to adhere to that.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಇದಕ್ಕಿಂತಲೂ ಬಹಳ ಮುಖ್ಯವಾದಂಥ ವಿಚಾರಗಳಿಗೂ ಕೂಡ ಸರ್ಕಾರದವರಾಗಲಿ, ಅಧ್ಯಕ್ಷರಾಗಲಿ ಮೂರು ದಿವಸ ಚರ್ಚೆಮಾಡಲು ಅವಕಾಶವಿತ್ತಿರುವುದಿಲ್ಲ. ಹೀಗೆ ಈ ಒಂದು ಸಾಮಾನ್ಯ ವಿಚಾರದ ಚರ್ಚೆಯನ್ನು ಮೂರುದಿನ ಮುಂದುವರಿಸಿಕೊಂಡು ಬರುತ್ತಿರುವುದರಲ್ಲಿ ಏನೋ ಒಂದು ಕೃತ್ರಿಮ ಅಡಗಿದೆಯೆಂದು ಭಾವಿಸಬೇಕಾಗಿದೆ.

**Sri M. RAMAPPA.**—Let the Speaker say that we are bent upon taking the next resolution. Let us be frank about it.

**Mr. CHAIRMAN.**—There is no question about the next resolution when we are on this resolution. As soon as this resolution is completed the next resolution will be taken up.

**Sri M. RAMAPPA.**—How many days are going to be allotted for this resolution?

**Sri A. V. NARASIMHA REDDY** (Bangalore South).—So far as taking up resolutions on the floor of the House is concerned, we are governed by the Rules of Procedure, but as regards the number of resolutions to be covered during the allotted time for non-official business, that is a matter for the House to adjust. So far as fixing the time limit for a particular resolution is concerned, my friends may hold the view that a particular resolution is very important and another resolution is not so important and so the discussion should be cut down. It is a matter for argument and there can be arguments on both sides.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ).—Point of order. ಈ ನಿರ್ಣಯದಮೇಲೆ ಇನ್ನೂ ಚರ್ಚೆ ನಡೆಯಬೇಕೇ, ಅಥವಾ ನಡೆಯಬಾರದೆ ಎನ್ನತಕ್ಕ ಬಗ್ಗೆ ಇಲ್ಲಿ ಈಗ ಇದರ ಬಗ್ಗೆ ಮತ್ತೊಂದು ವಾಕ್‌ಯುದ್ಧ ಮಾಡಬೇಕಾದ ಅಗತ್ಯವಿಲ್ಲ. ಒಮ್ಮೆ ಈ ನಿರ್ಣಯದ ಮೇಲಿನ ಚರ್ಚೆ ಮೂರು ಗಂಟೆಗೆ ಮುಕ್ತಾಯವಾಗಬೇಕೆಂದು ತೀರ್ಮಾನ ಕೈಗೊಂಡಮೇಲೂ ಹೀಗೆ ಮುಂದುವರಿಸುತ್ತಿರುವುದು ಶೋಚನೀಯ. ಹಿಂದೆ ಈ ವಿಚಾರದಲ್ಲಿ ಈ ಸಭೆಯ ನಮ್ಮ ಪಕ್ಷದ ಲೀಡರ್ ಮತ್ತು ವಿರೋಧ ಪಕ್ಷದ ಲೀಡರ್ ಇಬ್ಬರೂ ಒಂದು ಒಪ್ಪಂದಕ್ಕೆ ಬಂದು ಮೂರುಗಂಟೆಗೆ ಈ ಚರ್ಚೆ ಮುಗಿಸುವುದಾಗಿ ಹೇಳಿದ್ದಾಗ್ಯೂ ಈಗ ಮತ್ತೆ ನಾಲ್ಕು ಗಂಟೆಗಳಾದರೂ ಇನ್ನೂ ಇದೇ ಚರ್ಚೆ ಮುಂದುವರಿಯುತ್ತಿರುವುದರಿಂದ ನಮಗೆ ಅಧ್ಯಕ್ಷರು ಈ ಹಿಂದೆ ಆದ ತೀರ್ಮಾನದ ಬಗ್ಗೆ ಒಂದು ರಕ್ಷಣೆಕೊಡಬೇಕೆಂಬುದಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಬಗ್ಗೆ ಅಧ್ಯಕ್ಷರೇನೂ ಒಂದು ರೂಲಿಂಗ್ ಕೊಡುವುದಕ್ಕೆ ಅವಕಾಶವೇ ಇಲ್ಲ. ಆದರೂ I will speak after the ruling from the Chair.

**Sri V. SRINIVAS SHETTY.**—There is no question of ruling. It has been brought to the notice of the Chair

**Sri A. V. NARASIMHA REDDY.**—I am not yielding. I am on my legs. Let me finish what I want to say.

If my friends wanted the next resolution to be reached, there was another procedure which they should have adopted. They should have moved for closure which they have not done. If the Leader of the House at any moment said that after the speech of Sri Rachaiah, the reply would be given by Government and then the next resolution could be taken up, under the rules that was wrong because under the rules the mover of the resolution has to give his reply before the Government gives its reply. So even if such a commitment has been made by the Leader of the House it is not correct. I would, therefore, request that Sri Naidu may be allowed to speak now and after his speech you may fix any procedure you like.

**Sri V. SRINIVAS SHETTY.**—It has been brought to the notice of the Chair that under the rules all speakers other than the mover of the resolution are entitled only to 15 minutes each, but we have been consistently finding that practically every speaker has taken more than 15 minutes.

**Sri T. MARIAPPA.**—Your own whip said that Sri Venkatappa should be given more time to have his full say.

**Sri V. SRINIVAS SHETTY.**—I said that every speaker has taken more than 15 minutes. We have been listening to this debate for the last two days. More than 20 members have given notice of the next resolution which in the eyes of some people may be very important and in the eyes of other people it may not be so important. We were very anxious to take up the next resolution. So I suggested that the next resolution may be taken up, but it appears that the Government or the party in power want to throttle that resolution. This is the allegation that I am making.

I made the allegation that the party did not want to discuss that resolution and the Chief Minister was pleased to say that after Mr. Rachiah finished his speech, the reply would be given and the debate closed and that we would have an opportunity to move another resolution. Now it is seen that Sri. Naidu wants to speak. We do not know whether there are some more members on the other side who are desirous of speaking on this resolution. It is quite clear that the Hon'ble Members on the other side and the Government do not want us to move the next resolution.

**Sri T. MARIAPPA.**—I am indeed very sorry. After all, we are in the hands of the House. When they took longer time, an hour or even 1¾ hours, we very patiently listened to them because they made out a case that it is a very important resolution and that light must be shed on all the points. Therefore, we did not want to check. In fact, the Chair was pleased to allow more time to certain members. There is only one member on this side who is anxious to speak. Sri Naidu may not take more than a few minutes; let him finish his speech Let us not make allegations and counter-allegations ; it is not correct.

**Mr. CHAIRMAN.**—We are unnecessarily taking so much time in discussing this question. Probably, the last speaker that was anxious to speak might have finished by now. Besides, according to the rules there is a provision for bringing in a closure motion at any time. Now I call Sri. Naidu to speak.

**Sri C. M. ARUMUGHAM.**—I had moved a closure motion under rule 299. Then the Speaker referred that matter to the Chief Minister. I was told that after the member finished his speech, the reply would be given. Now I find that discussion is still going on. Now I am moving a closure motion.

**Mr. CHAIRMAN.**—I have called upon Sri Naidu to speak. You could have done it as soon as Sri Rachiah sat down. So I do not think I can accept it. Sri Naidu will speak now.

Sri M. RAMAPPA.—Please fix up the time limit for the speaker. We should have an idea.

Mr. CHAIRMAN.—I will look to that.

†Sri V P. DEENADAYALU NAIDU.—I do not see what sin I have committed that all should have had their free say in the matter and when I am the last speaker the axe should fall on me restricting the time But I am not going to retrace the grounds that have already been mentioned by other members. A curious feature that I find now is, that when an opposition member sends up a resolution, none of them feel that they have got something to say or perhaps it is exhausted and when some light could be thrown by other members, they (opposition) should not have the patience.

Sri J. B. MALLARADHYA (Nanjangud).—Let him not feel that there is bankruptcy of time on this side. I was the only one who had taken some time; I can speak for 4 hours on this particular subject. Let him not say that all that we wanted to see is that the debate is finished. It is not fair. I am one of those who welcome light to be thrown.

Mr. CHAIRMAN.—Sri Naidu can speak on the subject now.

Sri V. P. DEENADAYALU NAIDU.—If the Hon'ble Speaker who has been kind enough to allow some time to the previous speakers, should suddenly pounce on me with a time restriction, with regret I say I have nothing more to say.

Mr. CHAIRMAN.—I have not said anything about time limit. I said I will look to that. You go ahead.

Sri V. P. DEENADAYALU NAIDU.—I rise only to speak on one aspect, that is with regard to the Board whether it is necessary or not. I will confine myself to that one aspect. I would like to say that the latest position which I find does not warrant anything to support Sri Linge Gowda. I know the good intentions with which he has placed the resolution. At the same time I want to ask him, is this the appropriate time to bring this resolution? The silk industry and the filatures about which we are discussing for the last so many days have undergone various changes from time to time. We had the brightest aspect; then we had perhaps a little change. Now we find what is happening in Channapatna. Perhaps Government have not moved on very happily. When in the best of times a suggestion like this has not come and when we were in a very prosperous condition and could have thought of some experimentation having made it more efficient perhaps at that time we thought it was not necessary to think of these Boards but now I would like to pose this question. Are we correct in having a Board or even for that matter accepting Sri Mallaradhya's amendment an autonomous Board? If we had only discussed the budgets of the Electricity Board for two days and then taken up the non-official resolution, perhaps we would have covered half the ground. Whether everything goes well or goes according to the expectation of the members is something which we cannot so lightly measure at this stage. In fact, what I am just thinking of and thinking aloud is this. Sri Linge Gowda knows too well that the Board is not a solution for it and why I say this is for this reason. We are in the age of Boards; Finance Board, Industrial Boards and several other Boards are all boards which have been created to make a beginning in the new field, but here we have to make a slight distinction and make a very clear distinction. The trade, the experience of which we can boast of, are we going slowly to disturb and torpedo the whole thing without any regard for the previous experience that we have and particularly in Mysore? In fact, Mysore has got a history of its own in this respect. Some time ago, Sir, we had a seminar and probably Sri Mallaradhya knows what the recommendations of that seminar were; most of them deserve to be implemented. And those recommendations were made by the experts who had concentrated their thought as to how best we could improve and develop this industry. Suffice it to say, Sir, that the expert knowledge which was brought upon in that Seminar for the development of the State, I must

(SRI V. P. DEENADAYALU NAIDU) straightaway say, goes counter to the resolution. It would not be profitable, it would not be possible for a Board or an autonomous institution to take up and cope with an industry of this type. Sir, it may be that even Mr. Gorwala must have made a recommendation on this matter about certain experience of non-official people and so on, but I will tell you, let us not embark too much on that recommendation because we would be landing ourselves in a very speculative ground. It is time for us to investigate why is it that we have slackened. I think, if that is the purpose of Sri Lingegowda, I welcome it. Let us see where we have failed in our duty. It is said that America is the second largest consumer, Japan is also a producer as well as a consumer, China has also marched ahead. But there is one thing which I would like to read out to you, that is, they have made their humble beginnings in those spheres. The development has come to the west, *i.e.*, India. Its development has taken roots in India The point is, in Mysore they have not made much headway in this direction. Why is it that we have slackened during the last few years? Therefore it is necessary that our Hon'ble Minister should make a reference while replying to this long drawn out debate as to why we have slackened in some direction and why the trade has suffered to certain extent as some members have made out, and whether it is not possible with the assistance of the Centre that we may make certain headway. As Sri Linge Gowda puts it, is it the way of having a Board? My emphatic answer is: 'No' Sir, and I justify by saying that the various recommendations that have been made at the time of the seminar and in the technical aspects, it is for us to go through as often as possible with the assistance of the State Government. I will tell you, Sir, it has been brought to our notice and everybody knows too well, about the unemployment question that has been raised by the Channapatna Filatures being closed down. Is it not a fact that if it was purely a Government concern, would it be possible to close it down, is my question. Certainly, it can never be done. Today, we hold 10 per cent share; and there was so much to be done on the other side. Sometimes Government also feel helpless. Similar instances of occurrences could possibly happen if Government cannot have the overall supervision and control of the situation. In fact, as an experimental measure, we see the working of the Electricity Board. There is one thing which everybody feels and more strongly than Sri Lingegowda with regard to the staff who run that board, and how people are absorbed and recruited for it. With greatest disregard sometimes of the Public Service Commission Rules, the people are recruited to that Board. It may be stated that these autonomous institutions are not doing their duty properly. I am talking about the Electricity Board with regard to its recruitment policy. I wish if this had been taken up first, we would have covered half the ground to say that this Board is not necessary. Therefore, Sir, it is unnecessary to create a board of this type. Here we are thinking of an industry where the Centre has got its full say. It is not as though we could create a Board and do as we like ignoring for a moment what the Government of India has got to say in this matter. These are all matters in which we must have an all-India policy. Therefore, Sir, viewing in all its perspective, Government control is more required when the trade has suffered a sort of a cloud, the trade instead of flourishing has deteriorated; we do not see the same amount of exploitation that we had expected of this trade which has not prospered to that extent and there is no need to have a board. If things had gone on in the normal course, if trade had flourished and if we had made such a headway that in addition to all this, without prejudice to all this employment and various other factors, that we could have experimented this as one of the adjuncts, certainly, we could have thought of it. I for one feel that this proposition is most dangerous. We are thinking of bringing about a Board irrespective of whether the Centre

agrees with the proposal or not. I think, it is beyond the competence, and perhaps will not be in tune if we pass a resolution without having respect or regard for taking away 3 days, time of the House, Therefore it would be right for us to draw the attention of the Government to see how best they can give fillip to this trade, improve it and develop it and how best we can do with the help of expert knowledge and not by resorting to a resolution whereby we can create a Board. And even if it be an autonomous Board, I think, it will be nothing but a proved failure. Therefore I once again draw the attention of the Hon'ble Minister to the various recommendations made by the Seminar and I strongly feel that that most of the recommendations if implemented bring certain amount of liaison between the State and the Centre. That is what I have found in this resolution. The resolution makes a reference for merely setting up a Board and they feel that an autonomous body will do everything without the Government or the Government of India. Therefore my respectful submission is that this resolution will not, in any way, give encouragement to or help the development of the industry we are discussing today.

4-30 P.M.

†ಶ್ರೀ ಎಂ. ಲಿಂಗೇಗೌಡ.—ನನ್ನ ನಿರ್ಣಯಕ್ಕೆ ಮೂರು ದಿವಸಗಳ ಕಾಲಾವಕಾಶ ಕೊಟ್ಟು ಸದಸ್ಯರು ಸಹಕರಿಸಿ ಮೊದಲಿನಿಂದ ಕೊನೆಯವರೆಗೂ ಪರವಾಗಿ ಮತ್ತು ವಿರೋಧವಾಗಿ ಮಾತನಾಡಿರುವವರಿಗೆ ವಂದನೆಗಳನ್ನು ಅರ್ಪಿಸುತ್ತೇನೆ. ಒಂದೂವರೆ ಗಂಟೆ ಕಾಲ ಉತ್ತರ ಕೊಡುವುದಕ್ಕೆ ತೆಗೆದುಕೊಳ್ಳಬಹುದು. ಅದು ಕಷ್ಟವಿಲ್ಲ.

ಶ್ರೀ ಬಿ. ಕೆ. ನಾಗೂರ್ (ಬಿಜಾಪುರ್).—ಸರ್ಕಾರದ ಉತ್ತರ ಬೇಕು.

ಶ್ರೀ ಎಂ. ಲಿಂಗೇಗೌಡ.—ಮೂರು ದಿವಸಗಳು ಇಷ್ಟು ಪ್ರಾಶಸ್ತ್ಯ ಕೊಟ್ಟು ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವಾಗ ಸರ್ಕಾರದ ಅಭಿಪ್ರಾಯ ಏನು ಎಂದು ತಿಳಿದುಕೊಳ್ಳುವುದಕ್ಕೆ ನನಗೂ ಆಸಕ್ತಿ ಇದೆ. ನಾನು ಹೆಚ್ಚಿಗೆ ಈ ವಿಷಯದಲ್ಲಿ ಮಾತನಾಡುವುದಕ್ಕೆ ಅವಕಾಶವಿಲ್ಲ. ಆಕಡೆ ಮಾತನಾಡಿರತಕ್ಕ ಸದಸ್ಯರ ಪೈಕಿ ಎಲ್ಲರೂ ಕೂಡ ರೇಷ್ಮೆ ವ್ಯವಸಾಯ ಮತ್ತು ಕೈಗಾರಿಕೆಯ ವಿಷಯದಲ್ಲಿ ಮೊದಲಿನಿಂದ ಕೊನೆಯವರೆಗೂ ಮಾತನಾಡಿದ್ದಾರೆ. ಅವರ ಆರ್ಗ್ಯುಮೆಂಟ್ಸ್ ಏನಿದೆ ಎಂದರೆ ಆಡಳಿತ ಸರಿಯಾಗಿಲ್ಲ, ದಕ್ಷತೆಯಿಂದ ಆಡಳಿತ ನಡೆಯುತ್ತಿಲ್ಲ, ನಷ್ಟವಾಗುತ್ತಿದೆ, ಒಟ್ಟಿಗೆ ನಮ್ಮ ಸರ್ಕಾರದವರು ಕೊಟ್ಟಿರುವ ಹಣವಾಗಲೀ ಇಂಡಿಯಾ ಸರ್ಕಾರದವರು ಕೊಟ್ಟಿರುವ ಹಣವಾಗಲೀ ಸರಿಯಾಗಿ ವಿನಿಯೋಗವಾಗುತ್ತಾ ಇಲ್ಲ, ಇದಕ್ಕೆ ನಿಗಾ ತೆಗೆದುಕೊಳ್ಳುತ್ತಾ ಇಲ್ಲ ಎಂದು ಹೇಳಿದರು. ಅದಕ್ಕೋಸ್ಕರವೇ ಕಾರ್ಪೋರೇಷನ್ ಆಗಬೇಕು ಎಂದು ನಿರ್ಣಯ ಕಳುಹಿಸಿದ್ದೇನೆ.

ಶ್ರೀ ಬಿ. ರಾಚಯ್ಯ.—ಸರ್ಕಾರದವರು ತೆಗೆದುಕೊಂಡಮೇಲೆ ಸ್ವಲ್ಪ ಮಟ್ಟಿಗೆ ಉತ್ತಮವಾಗಿದೆ ಎಂದು ನಾನು ಹೇಳಿದೆ.

ಶ್ರೀ ಎಂ. ಲಿಂಗೇಗೌಡ.—ಸರ್ಕಾರದವರು ತೆಗೆದುಕೊಂಡಮೇಲೆ ಅವರು ಉತ್ತಮ ಪಡಿಸುವುದಕ್ಕೆ ಏನೂ ಮಾಡಿಲ್ಲ. ಸರ್ಕಾರದವರು ಹಣವನ್ನು ಫ್ಯಾಕ್ಟರಿಗಳಲ್ಲಿ ಮಾತ್ರ ಹಾಕಿದ್ದಾರೆ. ಸತ್ಯಾಂಶ ಇಷ್ಟೆ: ಸಂಸ್ಥಾನದ ಹಣ ಜನಗಳ ಹಣ. ಸರ್ಕಾರದವರು 18 ಲಕ್ಷ ರೂಪಾಯಿಗಳನ್ನು ಫ್ಯಾಕ್ಟರಿಗಳ ಮೇಲೆ ಇನ್ವೆಸ್ಟ್ ಮಾಡಿ ಉತ್ತಮಪಡಿಸುವುದಕ್ಕೆ ಏನೂ ಮಾಡಲಿಲ್ಲವೆಂದು ಸಂಕಟಪಡುತ್ತೇನೆಯೇ ವಿನಾ ಸರ್ಕಾರದವರು ಅವನ್ನು ತೆಗೆದುಕೊಂಡಿರುವುದಕ್ಕೆ ಸಂತೋಷಪಡುತ್ತೇನೆ. ಏತಕ್ಕೆಂದರೆ ಪ್ರೈವೇಟ್ ಕಂಪೆನಿಗಳು ಮತ್ತು ಪ್ರೈವೇಟ್ ಫ್ಯಾಕ್ಟರಿಗಳನ್ನು ನಡೆಸತಕ್ಕವರು ಅವನು ಮುಳುಗಿಸುವುದಕ್ಕೆ ಏರ್ಪಾಡು ಮಾಡಿದರು, ಆದ್ದರಿಂದ ಮುಳುಗಿತು. ಅದರಲ್ಲಿ ಲಾಭ ಬಂದಿಲ್ಲ ಎಂದು ಯಾರೂ ಹೇಳುವುದಿಲ್ಲ. ಯುದ್ಧ ಕಾಲದಲ್ಲಿ ಒಳ್ಳೆಯ ಲಾಭ ಬಂತು. ಶ್ರೀ ಕೆ. ಆರ್. ಶ್ರೀನಿವಾಸಯ್ಯಂಗಾರ್ ಅವರು ಸ್ಪನ್ ಸಿಲ್ಕ್ ಮಿಲ್ಸ್ ನಡೆಸುತ್ತಾ ಇರುವಾಗ ಏಳು ಲಕ್ಷ ಸೂಪರ್ ಟ್ಯಾಕ್ಸ್ ಇಂಡಿಯಾ ಸರ್ಕಾರಕ್ಕೆ ಕೊಟ್ಟಿದ್ದಾರೆ. ಏಳು ಲಕ್ಷ ಹಿಂದೆ ಸೂಪರ್ ಟ್ಯಾಕ್ಸ್ ಕೊಟ್ಟಿರುವಾಗ ಏತಕ್ಕೆ ಮುಚ್ಚುವುದಕ್ಕೆ ಏರ್ಪಾಟು ಮಾಡಿದರು ? ಸರ್ಕಾರದವರು ಇದರಲ್ಲಿ ಇಂಟರೆಸ್ಟ್ ತೆಗೆದುಕೊಳ್ಳದೆ ಇರುವುದರಿಂದ ಅದನ್ನು ಮುಚ್ಚಿದರು.

ಶ್ರೀ ಟಿ. ಮರಿಯಪ್ಪ.—ಶ್ರೀನಿವಾಸ ಐಯ್ಯಂಗಾರ್ ಅವರು ಯುದ್ಧ ಮುಗಿದು ಹೋದಮೇಲೂ ಇದ್ದರು. ಹಿಂದೆ ಏನಿತ್ತು ಎಂಬುದು ನನಗೆ ಗೊತ್ತಿದೆ.

ಶ್ರೀ ಎಂ. ಲಿಂಗೇಗೌಡ.—ಯುದ್ಧ ಮುಗಿದು ಹೋದಮೇಲೆ ಏನಾಯಿತು ಎಂಬುದು ನನಗೆ ಗೊತ್ತಿದೆ. ಮೂರು ಲಕ್ಷ ರೂಪಾಯಿ ಕೊಟ್ಟರೂ ತೆಗೆದುಕೊಳ್ಳದೆ ಇರತಕ್ಕ ಮೂರು ಸಾವಿರ ಸ್ಪಿಂಡಲ್ಸ್‌ಗೆ ಏಳು ಲಕ್ಷ ಕೊಟ್ಟು ಏತಕ್ಕೆ ಹಳೇ ಮಿಲ್ಲನ್ನು ತೆಗೆದುಕೊಂಡರು ? ಅದರಿಂದ ನಮಗೆ ನಷ್ಟ ಆಗುವುದಕ್ಕೆ ಶುರು ಆಯಿತು. ತಪ್ಪು ಎಲ್ಲಿದೆ ಎಂಬುದನ್ನು ಯೋಚನೆ ಮಾಡಿ. ಜುಡಿಷಿಯಲ್ ಆಫೀಸರನ್ನು ಬೇಕಾದರೆ ಎನ್‌ಕ್ವೈರಿ ಮಾಡಲು ಹಾಕಿ. ನಷ್ಟ ಆಗುವುದಕ್ಕೆ ಕಾರಣ ಇದೆ. ಸರ್ಕಾರದವರು ಹಣ ಹಾಕಿ ಅದನ್ನು ತೆಗೆದುಕೊಂಡರು. ಬಹಳ ಸಂತೋಷ. ಆದರೆ ಅದನ್ನು ಉತ್ತಮಪಡಿಸುವುದಕ್ಕೆ ಏನೂ ಏರ್ಪಾಟು ಮಾಡುತ್ತಾ ಇಲ್ಲವಲ್ಲ. ಸೆರಿಕಲ್ಚರ್ ಡೈರೆಕ್ಟರಿದ್ದಾರೆ, ಅವರು ಮೊಟ್ಟೆ ತಯಾರುಮಾಡುವುದರಿಂದ ಹಿಡಿದು ಗೂಡನ್ನು ನೇಯ್ಗೆ ಮಾಡುವವರೆಗೂ ಎಲ್ಲಾ ಪ್ರೋಸೆಸನ್ನೂ ನೋಡುವುದಕ್ಕಾಗುವುದಿಲ್ಲ. ನಾನು ಆಗಲೇ ಹೇಳಿದ್ದೇನೆ 80 ಪರ್ಸೆಂಟ್ ಕಕೂನ್ ರೀಲಿಂಗಿಗೆ ಬಹಳ ಕಷ್ಟ ಇದೆ. ಕಕೂನ್ಸ್ ಇಂಪ್ರೂವ್ ಮಾಡುವುದಕ್ಕೆ ಏನೇನು ಪ್ರಯತ್ನ ಮಾಡಬೇಕೋ ಅದನ್ನು ಮಾಡಬೇಕು. ಏತಕ್ಕೆ ಇಂಪ್ರೂವ್ ಮಾಡಿಲ್ಲ ಎಂದು ಡೈರೆಕ್ಟರವರನ್ನು ಕೇಳಿದ್ದೀರಾ ? ಪ್ರೈವೇಟಾಗಿ ಮೊಟ್ಟೆ ತಯಾರುಮಾಡುವುದಕ್ಕೆ ಗ್ರೇನೇಜ್

(ಶ್ರೀ ಎಂ. ಲಿಂಗೇಗೌಡ)

ಸ್ಯಾಂಕ್ಷನ್ ಮಾಡಿ ಎಂದರೆ ಮಾಡಲಿಲ್ಲ. ಏತಕ್ಕೆ ಮಾಡಲಿಲ್ಲ ? ಅವರು ಚೆನ್ನಾಗಿ ಮಾಡಿಬಿಟ್ಟು ಪಾಪ್ಯುಲರ್ ಆಗಿ ಹೋದರೆ ಗೌರ್ನಮೆಂಟ್ ಫ್ಯಾಕ್ಟರಿಯಲ್ಲಿ ಏತಕ್ಕೆ ಮಾಡುವುದಿಲ್ಲ ಎಂದು ತಮಗೆ ಆಕ್ಷೇಪಣೆ ಬರಬಹುದು ಎಂದು ಬೇರೆಯವರಿಗೆ ಅವಕಾಶ ಕೊಡಲಿಲ್ಲ. ಪ್ರೈವೇಟಾಗಿ ಮಾಡಲು ಏತಕ್ಕೆ ಅವಕಾಶ ಕೊಡಲಿಲ್ಲ ? ಅದರಿಂದ ಏನು ಕಷ್ಟವಾಗುತ್ತಿತ್ತು ?

ಶ್ರೀ ಟಿ. ಮರಿಯಪ್ಪ.—ಯಾವುದಕ್ಕೆ ಪರ್ಮಿಷನ್ ಕೊಟ್ಟಿಲ್ಲ ?

ಶ್ರೀ ಎಂ. ಲಿಂಗೇಗೌಡ.—ಮೊಟ್ಟೆ ಮಾಡುವುದರಲ್ಲಿ ಟ್ರೈನಿಂಗ್ ಆಗಿ ಶ್ರೀ ನರಸಿಂಹ ಶೆಟ್ಟಿಯವರು ಬಂದರೂ ಅವರಿಗೆ ಪರ್ಮಿಷನ್ ಕೊಟ್ಟಿಲ್ಲ. ಪ್ರೈವೇಟಾಗಿ ಮಾಡಲಿಕ್ಕೆ ಅವಕಾಶ ಕೊಟ್ಟರೆ ಅವರು ಚೆನ್ನಾಗಿ ಮಾಡಿ ಪಾಪ್ಯುಲರ್ ಆದರೆ ಗೌರ್ನಮೆಂಟಿಗೆ ಅವಮಾನವಾಗುತ್ತದೆ ಎಂದು ಮಾಡಲಿಲ್ಲವೇ ? ಇದು ಯಾವ ನ್ಯಾಯ ? ಪ್ರೈವೇಟಾಗಿ ಮಾಡುವ ಸನ್ನಿವೇಶ ಬರುತ್ತದೆ. ಇವೊತ್ತಿನ ದಿವಸ ಸರ್ಕಾರದವರು ಮಾಡುತ್ತಿದ್ದಾರೆ. ಅವರಿಗೆ ಯಾವಾಗ ಹೆಚ್ಚಿಗೆ ಮಾಡುವುದಕ್ಕೆ ಅವಕಾಶವಾಗುವದಿಲ್ಲವೋ ಆಗ ಡಿಮ್ಯಾಂಡ್ ಜಾಸ್ತಿ ಇರುತ್ತದೆ. ಡಿಮ್ಯಾಂಡ್ ಜಾಸ್ತಿ ಇರುವಾಗ ಬ್ಲಾಕ್ ಮಾರ್ಕೆಟ್ ಇದ್ದೇ ಇರುತ್ತದೆ. ಆದ್ದರಿಂದ ಹೆಚ್ಚಿಗೆ ರೋಗರಹಿತ ಮೊಟ್ಟೆಗಳನ್ನು ತಯಾರುಮಾಡುವುದಕ್ಕೆ ಅವಕಾಶ ಕೊಡಬೇಕು. ಖಾಸಗಿ ಜನ ಜಪಾನಿಗೆ ಹೋಗಿ ಬಂದು ಈ ಕೈಗಾರಿಕೆಯನ್ನು ಉತ್ತಮಪಡಿಸುವುದಕ್ಕೆ ಅವಕಾಶ ಕೊಡಿ ಎಂದರೆ ಅವರಿಗೆ ಅವಕಾಶ ಕೊಡಿದಿದ್ದರೆ ಇನ್ನು ಯಾರಿಗೆ ಅವಕಾಶ ಕೊಡುತ್ತೀರಿ ?

ಶ್ರೀ ಡಿ. ಅಬ್ದುಲ್ ರಷೀದ್ (ಕೋಲಾರ್).—ಪ್ರೈವೇಟ್ ಗ್ರೈನೇಜ್‌ಗೆ ಕೊಟ್ಟರೆ ಅವರಿಗೆ ರಿಸರ್ಚ್ ಮಾಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಕೊಟ್ಟಿಲ್ಲ.

ಶ್ರೀ ಎಂ. ಲಿಂಗೇಗೌಡ.—ಟ್ರೈನಿಂಗ್ ತೆಗೆದುಕೊಂಡು ಬಂದಿರುವುದರಿಂದ ಟ್ರೈನಿಂಗ್ ಬೇಡ ಎಂದು ಹೇಳಲಿಲ್ಲವೇ ? ಅವರು ಹಳ್ಳಿಯಲ್ಲಿ ರಿಸರ್ಚ್ ಮಾಡುವುದರಿಂದ ಗ್ರೇನೇಜ್ ಕೊಡುವುದು ಅನಾವಶ್ಯಕ ಎಂದು ಮಾಡಿದಿರಾ ! ಗೂಡು ವಗೈರೆ ಸಿಟಿಗೆ ತೆಗೆದುಕೊಂಡು ಬರುವುದಕ್ಕೆ ಪರ್ಮಿಷನ್ ಯಾತಕ್ಕೆ ಕೊಟ್ಟಿಲ್ಲ ? ಅವರು ಗ್ರೈನೇಜ್ ಬೇಡ ಎಂದು ಹೇಳಿದ್ದಾರೆಯೇ ? ಕೊಡದೆ ಇರುವುದಕ್ಕೆ ಕಾರಣ ಏನು ? ಮನಃ ಪೂರ್ವಕವಾಗಿ ಹೇಳಿ.

Sri T. MARIAPPA.—We will have your question examined also.

ಶ್ರೀ ಎಂ. ಲಿಂಗೇಗೌಡ.—ಇಂಥಾ ಸನ್ನಿವೇಶ ಇರುವಾಗ ಏತಕ್ಕೋಸ್ಕರ ಈ ನಿರ್ಣಯವನ್ನು ಕಳುಹಿಸಿದ್ದೇನೆ ? ಹತ್ತು ಲಕ್ಷ ಜನಗಳಿಗೆ ಜೀವನ ಕೊಡುವುದನ್ನು ಹಾಳುಮಾಡುವುದಕ್ಕೆ ಕಳುಹಿಸಿದ್ದೇನೆಯೇ ? ಆ ದೃಷ್ಟಿಯಿಂದ ತಿಳಿದುಕೊಳ್ಳಬಾರದು. ಸರ್ಕಾರದ ಉದ್ದೇಶವನ್ನು ಟಾರ್ಪೆಡೋ ಮಾಡುವುದಕ್ಕೋಸ್ಕರ ಈ ನಿರ್ಣಯ ಬಂತು ಎಂದು ಹೇಳಿದರು ; ಟಾರ್ಪೆಡೋ ಮಾಡುವುದಕ್ಕಲ್ಲ. ಸರ್ಕಾರದ ಉದ್ದೇಶವನ್ನು ಟಾರ್ಪೆಡೋ ಮಾಡುವುದಕ್ಕೆ ಹೋದರೆ ಹತ್ತು ಲಕ್ಷ ಜನ ಬಡವರ ಹೊಟ್ಟೆಮೇಲೆ ಹೊಡೆದ ಹಾಗಾಗುತ್ತದೆ. ಆ ಉದ್ದೇಶ ನನಗಿಲ್ಲ. ನಾಯ್ಡುರವರಾದರೂ ಸಿಲ್ಕ್ ಬಟ್ಟೆ ಮಾತ್ರ ಹಾಕುವ ಅನುಭವವುಳ್ಳವರು. ನಾನು ಸ್ವತಃ ಗೂಡು ತಯಾರುಮಾಡುವವನು, ಕಸಬುಮಾಡುವವನು ನಾನು. ಇದರ ಕಷ್ಟವೆಲ್ಲಾ ನನಗೆ ಗೊತ್ತಿದೆ. ಆದ್ದರಿಂದ ನಾನು ಟಾರ್ಪೆಡೋ ಮಾಡುವುದಕ್ಕೆ ಎಂದೂ ಹೋಗುವುದಿಲ್ಲ. ಈಗ ಆಗಿಲ್ಲವೆಂದು ಕೆಲವರು ಹೇಳಿದರು. ಆದರೆ ವಿಷಯ ನಾನು ಹೇಳುತ್ತೇನೆ. ಈಗ ಫ್ಯಾಕ್ಟರಿ ನಷ್ಟದಲ್ಲಿ ಕೆಲಸಮಾಡುತ್ತಿರುವುದು ನಿಜ. ಲಾಭದಲ್ಲಿ ಕೆಲಸಮಾಡುತ್ತಿದ್ದಂಥಾದ್ದೂ ಈಗ ನಷ್ಟದಲ್ಲಿದೆ. ಏಕೆ ? ಸರ್ಕಾರದವರು ಅದರ ಬಗ್ಗೆ ಸರಿಯಾಗಿ ಗಮನಕೊಡದಿರುವುದರಿಂದ ಅದೇ ಶಿಡ್ಲಘಟ್ಟದಲ್ಲಿರುವ ಕಿಸಾನ್ ಫ್ಯಾಕ್ಟರಿ ಲಾಭದಲ್ಲಿ ಕೆಲಸ ಮಾಡುತ್ತಿರುವುದಕ್ಕೂ, ಸರ್ಕಾರಿ ಫ್ಯಾಕ್ಟರಿ ನಷ್ಟದಲ್ಲಿ ಕೆಲಸ ಮಾಡುತ್ತಿರುವುದಕ್ಕೂ ಕಾರಣವೇನು ? ಸಿಬ್ಬಂದಿ ಜಾಸ್ತಿ. ಇದು ನಿಜವಾದ ಪರಿಸ್ಥಿತಿ ! ಇದನ್ನು ತಪ್ಪಿಸುವುದಕ್ಕೆ ಮಾರ್ಗಮಾಡಿ, ಲಾಭದಲ್ಲಿ ಕೆಲಸ ಮಾಡದೆ ಇದ್ದರೂ ಅಲ್ಲಿಗೆ ಸರಿಮಾಡಿಕೊಂಡು ಹೋಗುವುದಕ್ಕಾದರೂ ಆಗುತ್ತದೆ. ತಾವು ಕೊಡುವ ಕೂಲಿ ಎಷ್ಟು ? ನಾಲ್ಕಾಣೆ, ಆರಾಣೆ (ಡಿ.ಎ ಕೊಡುವುದನ್ನು ಬಿಟ್ಟುಬಿಡಿ). ಮ್ಯಾಸ್ಕರ್ನಾಸ್ ಕಮಿಟಿಯೆಂದು ಮಾಡಿದ್ದಿರಿ. ಅವರು ಕೊಟ್ಟ ಶಿಫಾರಸನ್ನಾದರೂ ತಾವು ಒಪ್ಪಿಕೊಂಡಿರಾ ? ಏಕೆ ? ರೀಲರುಗಳಿಗೆ ಎಷ್ಟು ಕಷ್ಟವಿದೆಯೆಂಬುದು ತಮಗೆ ಗೊತ್ತೆ ? ಅಸ್ತಮ, ಕ್ಷಯ ಬರುತ್ತದೆ. ಹೆಂಗಸರಿಗೆ ಇನ್ನೊಂದು ತೆರದ ರೋಗವೂ ಬರುತ್ತದೆ. ಅಥವಾ ಇನ್ಷೂರೆನ್ಸ್ ಕಮಿಟಿಯವರ ಸಲಹೆಯಂತಾದರೂ ಏಕೆ ಮಾಡಕೂಡದು ? ಇವನ್ನೆಲ್ಲಾ ನೋಡುತ್ತಾ ಸುಮ್ಮನೆ ನಾವು ಕುಳಿತುಕೊಳ್ಳುವುದಕ್ಕಾಗುತ್ತದೆಯೇ ? ಆದ್ದರಿಂದಲೇ ಏನಾದರೂ ಒಂದು ರೀತಿ ಮಾಡಿ ಎಂದು ಹೇಳುತ್ತೇವೆ. ಕಾರ್ಪೊರೇಷನ್ ಮಾಡಿದಾಕ್ಷಣ ನಮಗೇನಾಗುತ್ತದೆ ? ನಾನು ಇನ್ನೂ ಒಂದು ಹೇಳುತ್ತೇನೆ. ಶ್ರೀಮಾನ್ ಜೆ. ಬಿ. ಮಲ್ಲಾರಾಧ್ಯರೂ ಹೇಳಿದರು, ಆ ಬಗ್ಗೆ ತಾವು ಒಂದು amendment ಕಳುಹಿಸುತ್ತೇನೆ ಎಂದು. ಏನೆಂದರೆ Statutory Body ಯಾದರೆ ಸ್ವಲ್ಪ ಕಷ್ಟ. ಆಟಾನಮಸ್ ಬಾಡಿಯಾಗಿ ಮಾಡುವುದಾದರೆ ಒಪ್ಪಿಕೊಳ್ಳೋಣ ಎಂದು ಸರ್ಕಾರದವರು ಎನ್ನುವುದಾದರೆ, Executive order ನಿಂದಲಾದರೂ ಮಾಡಬಹುದು. ಅದರಲ್ಲಿ ಸರ್ಕಾರದ ಪ್ರತಿನಿಧಿ ಸಹ ಇರಲಿ ಮತ್ತು ಕಸಬು ತಿಳಿದ ತಮ್ಮ ಕಾಂಗ್ರೆಸ್ ಸದಸ್ಯರುಗಳನ್ನು ಬೇಕಾದರೆ ಹಾಕಿಕೊಳ್ಳಿ.

ಶ್ರೀ ಟಿ. ಮರಿಯಪ್ಪ.—ಕಾಂಗ್ರೆಸ್ ಸದಸ್ಯರೇ ಇರಬೇಕೆಂದೇನೂ ಇಲ್ಲ !

ಶ್ರೀ ಎಂ. ಲಿಂಗೇಗೌಡ.—ನೀವು ಮಾಡುವುದನ್ನು ನೋಡಿಯೇ ನಾನು ಹೇಳುತ್ತಿದ್ದೇನೆ, ಅಷ್ಟೆ.

ಶ್ರೀ ಟಿ. ಮರಿಯಪ್ಪ.—ಈಗ Industrial Development Board ಮಾಡಿದ್ದೇವೆ. ಅದಕ್ಕೆ ಮಲ್ಲಾರಾಧ್ಯರನ್ನು ಹಾಕಿದ್ದೇವಲ್ಲಾ, ಅವರು ಕಾಂಗ್ರೆಸ್ಸಿನವರೇ ?

ಶ್ರೀ ಎಂ. ಲಿಂಗೇಗೌಡ.—ನಿಮ್ಮಲ್ಲಿ ಯಾವಾಗ weakness ಉಂಟಾಗುತ್ತದೆ, ಆಗ ನಮ್ಮನ್ನೂ ಸ್ವಲ್ಪ ಕಟ್ಟಿಕೊಂಡು ಹೋಗುತ್ತೀರಿ, ಅಷ್ಟೆ. ಅದ್ದರಿಂದ ತಾವು ಒಂದು ಆಟಾನಮಸ್ ಬಾಡಿಯನ್ನು executive order ನಿಂದ ಮಾಡುವುದಾದರೆ ನಮ್ಮದೇನೂ ಅಭ್ಯಂತರವಿಲ್ಲ. ಸರ್ಕಾರಿ ಆಫೀಸರುಗಳನ್ನು ಅದರಲ್ಲಿ ಹಾಕಿಕೊಳ್ಳಿ. ಒಂದಿಷ್ಟು ಕಮಿಟಿ ಮೆಂಬರುಗಳನ್ನೂ ಸೇರಿಸಿಕೊಳ್ಳಿ. ಒಟ್ಟಿನಲ್ಲಿ ಈ ಕೈಗಾರಿಕೆ ನಷ್ಟದಲ್ಲಿ ಇರದಹಾಗೆ ಮಾಡುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡಿ. ತಮಗೆ ಒಂದು

ವಿಚಾರ ಹೇಳುತ್ತೇನೆ. ಈಗಲೂ ತಾವು ತಿಪ್ಪೆರುದ್ರಯ್ಯನವರನ್ನು ಚನ್ನಪಟ್ಟಣ ಸಿಲ್ಕ್ ಫ್ಯಾಕ್ಟರಿಗೆ ಹಾಕಿ ಅವರಿಗೆ ಮೂರು ಲಕ್ಷ ರೂಪಾಯಿ ಬಂಡವಾಳವನ್ನು ಕೊಡಿ, ಸಾಕು. ಎರಡು ವರ್ಷ ಅವರಿಗೆ ಯಾವ interference ಕೊಡದೆ ಕೆಲಸ ಮಾಡುವುದಕ್ಕೆ ಬಿಡಿ. ತಮಗೆ ಅವರು ಏಳು ಲಕ್ಷವಲ್ಲ, ಇನ್ನೂ ಮೂರು ಲಕ್ಷ ಕೊಡುತ್ತಾರೆ. 23 ಲಕ್ಷ ಪೌಂಡು ಸಿಲ್ಕ್ ನಮ್ಮಲ್ಲಿ ಈಗ ತಯಾರಾಗುತ್ತಿದೆ. ಇದರಲ್ಲಿ ಶೇಕಡ 40 ರಷ್ಟು Waste Silk ಆಗಿರುತ್ತದೆ. ಈ ಹತ್ತು-ಹನ್ನೆರಡು ಲಕ್ಷ ಪೌಂಡುಗಳನ್ನೂ ನಾವು ಇಲ್ಲಿಯೇ ಉಪಯೋಗಮಾಡಿಕೊಳ್ಳಬಹುದು. ನಮ್ಮ ಸ್ಪನ್ ಸಿಲ್ಕ್ ಫ್ಯಾಕ್ಟರಿ ಇದ್ದರೆ ಇದಕ್ಕೆ ಕೆಟ್ಟಹೆಸರು ಏಕೆ ಬಂತು ಎಂಬುದನ್ನು ಶ್ರೀಮಾನ್ ವೆಂಕಟಪ್ಪನವರು ಹೇಳಿದ್ದಾರೆ. ವರ್ತಕರು ಒಮ್ಮೆ ಮೋಸ ಮಾಡಿ ಗೆಣಸನ್ನು ಸೇರಿಸಿ ಹೊರಗೆ ರಫ್ತುಮಾಡಿದ್ದರಿಂದ ಹೊರದೇಶದವರು ಇಂಡಿಯಾ ದೇಶದ Waste Silkನ್ನು Reject ಮಾಡುತ್ತಿದ್ದಾರೆ ಎಂದು ಹೇಳಿದರು. ಇದು ಸತ್ಯವಾದ ಮಾತು.

ಶ್ರೀ ಟಿ. ಮರಿಯಪ್ಪ.—ಅವರು export ಮಾಡುವುದಕ್ಕೆ ಮಾತ್ರ ಹಾಗೆ ಮಾಡಲಿಲ್ಲ. ಸ್ಪನ್ ಸಿಲ್ಕ್ ಫ್ಯಾಕ್ಟರಿ ಕೊಂಡುಕೊಳ್ಳುವುದಕ್ಕೂ ಹೀಗೆಯೇ ಮಾಡಿದರು. ಕಸ, ಕಡ್ಡಿ ಕೂದಲು ಎಲ್ಲವನ್ನೂ ಸೇರಿಸಿ ಕೊಟ್ಟರು.

ಶ್ರೀ ಎಂ. ಲಿಂಗೇಗೌಡ.—ಹೌದು, ಅನೀತಿವಂತರಿಗೆ ತಾಯಿಯೇನು, ಮತ್ತೊಬ್ಬರೇನು! ನಮ್ಮ ಸಿಲ್ಕ್ ಫಿಲೇಚರುಗಳು ಡಾಲರುಗಳನ್ನು ಸಂಪಾದನೆ ಮಾಡುವಂಥವುಗಳಾಗಿರುವುದರಿಂದ, ಒಳ್ಳೆಯ ರೇಷ್ಮೆಯನ್ನು ಉಪಯೋಗಿಸಿ ಒಳ್ಳೆಯ ತೆರದ ಜಾರ್ಜೆಟ್ಟನ್ನು ತಯಾರಿಸಿ. ತಾವು ಯಾವ ಉದ್ದೇಶದಿಂದ ಗೌರ್ನಮೆಂಟ್ ವೀವಿಂಗ್ ಫ್ಯಾಕ್ಟರಿಯನ್ನು ಮೈಸೂರಿನಲ್ಲಿ ತೆರೆದಿರಿ? ಅಗ್ಗ ಇಷ್ಟು fine ಆದ ರೇಷ್ಮೆಯನ್ನು ಸಹ ತಾವು produce ಮಾಡುತ್ತಿರಲಿಲ್ಲ. ಅಂಥ ಕಾಲದಲ್ಲೇ ಪ್ರಪಂಚದಲ್ಲೇ ಅತ್ಯುತ್ತಮವಾದ ಜಾರ್ಜೆಟ್ ಎಂದು ಹೆಸರು ಪಡೆದಿತ್ತು. ಈಗ ತಾವು quality ಕಡಮೆಮಾಡುತ್ತಾ ಬಂದಿರಿ. ಕಚ್ಚಾ ರೇಷ್ಮೆಯನ್ನು ಸ್ಟಾಕ್ ಮಾಡಿಕೊಂಡು qua-lity ಯನ್ನು ಹಾಳುಮಾಡಿದಿರಿ. ಇದನ್ನೇಕೆ ಉತ್ತಮಪಡಿಸಬಾರದು? ಏನಾದರೂ ಪ್ರಯತ್ನಮಾಡಿದ್ದೀರಾ? ಆದ್ದರಿಂದಲೇ ನಾನಿಷ್ಟು ಹೇಳುತ್ತಿರುವುದು. ನಮ್ಮ ಸಂಕಟ ಇದು. ಈಗ ದೇಶದಲ್ಲಿನ ಫ್ಯಾಕ್ಟರಿಗಳು ಎಲ್ಲ ಕಡೆಯಲ್ಲೂ ನಿಂತಿವೆ. ಕುದೇರುವಿನ ಫ್ಯಾಕ್ಟರಿ ಇನ್ನೂ ಷುರುವೇ ಆಗಿಲ್ಲ. ಏಕೆ ನಿಂತಿದೆ? ನೋಡಿದ್ದೀರಾ? ಉತ್ತಮವಾದ ಗೂಡುಗಳನ್ನೆಲ್ಲಾ ಕೈ-ಚರಕದವರು ಕೊಂಡುಕೊಳ್ಳುತ್ತಾರೆ. ಸರ್ಕಾರದವರು ಕೊಂಡುಕೊಳ್ಳುವುದೆಲ್ಲಾ ಕಚ್ಚಾಗೂಡು. ಬಹಳ ಉತ್ತಮವಾದ ಗೂಡುಗಳು ಅಲ್ಲಿ ಸಿಕ್ಕುತ್ತವೆ. ಆದರೆ ಅದನ್ನು ನೋಡುವವರು ಯಾರು? ಆದ್ದರಿಂದ ನಾನು ಹೇಳಿದಂತೆ ಒಂದು ಅಟಾನಮಸ್ ಬಾಡಿ ಮಾಡುವುದಕ್ಕೆ ದಯಮಾಡಿ ಸರ್ಕಾರದವರು ಒಪ್ಪಿಕೊಳ್ಳಬೇಕು. ಸುಮ್ಮನೆ opposition ಅವರಿಂದ ಬಂದಿದೆಯೆಂದು ಹೇಳಿ, ಮೂರುದಿವಸವಲ್ಲ, ಇನ್ನೂ ಮೂರುದಿವಸ ಯಾರೇ ಮಾತನಾಡಿದರೂ ನಾವು ಒಪ್ಪಿಕೊಳ್ಳುವುದಿಲ್ಲ ಎಂಬ ದೃಷ್ಟಿಯಿಂದ ಮಾತನಾಡಬಾರದು. ಕೆಲವು ಕಷ್ಟಗಳಿವೆಯೆಂದು ನೀವು ಹೇಳುವುದರಲ್ಲೂ ಸತ್ಯಾಂಶವಿದೆಯೆಂಬದನ್ನು ನಾನೂ ಒಪ್ಪುತ್ತೇನೆ. ಆದರೂ, ಏನೇ ಕಷ್ಟವಿದ್ದರೂ ಅದನ್ನು ಎದುರಿಸಬೇಕಾದದ್ದು ನ್ಯಾಯವಾದ ನೀತಿ. ತಾವು ಜೈಲಿಗೆ ಹೋದವರಾಗಿದ್ದೀರಿ. ಲಾಠಿ ಏಟು ಕೂಡ ತಿಂದಿದ್ದೀರಿ. ಅದೆಲ್ಲಾ ಎದುರಿಸಿದವರಿಗೆ ಇದೇನೂ ಕಷ್ಟ ಅಲ್ಲ. ಪೋರ್ಟ್‌ಫೋಲಿಯೋ ಹಂಚುವುದರಲ್ಲಾದರೂ ಈ ಕೈಗಾರಿಕೆಯನ್ನು ಸ್ವಲ್ಪಮಟ್ಟಿಗೆ ತಿಳಿದಿರುವವರಿಗಾದರೂ ಕೊಡಕೊಡದೇ? ಜವಾಬು ಕೊಡುವುದಕ್ಕೇನೋ ಎಲ್ಲಕ್ಕೂ ಮರಿಯಪ್ಪನವರು ತಲೆಗೆ ಕಟ್ಟಿಕೊಂಡು ಇಲ್ಲಿ ಕುಳಿತುಕೊಳ್ಳುತ್ತಾರೆ. ಏಕೆಂದರೆ ಹಿಂದೆ ಇದ್ದವರಾಗಿ ಅವರಿಗೆ ವಿಷಯಗಳು ಗೊತ್ತಿವೆ. ತಾವು ಈಗಾಗಲೇ ಏನು ಹತ್ಯಾರ ಸಿದ್ಧಮಾಡಿಕೊಂಡಿದ್ದೀರಿ ಎಂಬುದು ನನಗೆ ಗೊತ್ತು. ಏನಿದ್ದರೂ ಈ ಕೈಗಾರಿಕೆಯನ್ನು ಉದ್ಧಾರ ಮಾಡುತ್ತೀರೆಂಬ ದೃಷ್ಟಿಯಿಂದಲೇ ಉತ್ತರ ಹೇಳುತ್ತಿರಿ. ಈಗ ಒಂದು ತಿಂಗಳಿನಲ್ಲಿಯೇ ಸರಿಯಾಗಿ ಎಲ್ಲವನ್ನೂ ಮಾಡುತ್ತೇವೆಂದು promise ಮಾಡಿದರೂ ನೀವು ಮಾಡುವುದಿಲ್ಲ. ಒಂದು ವರ್ಷವಾದರೂ ವಿಧಾನ ಮಾಡುತ್ತೀರಿ. ಏಕೆಂದರೆ ವಿರೋಧಪಕ್ಷದವರು ತಂದಿದ್ದಾರೆ ಎಂದು ನೀವೇನೂ ನಿಮಗೆ ಶಕ್ತಿಯಿಲ್ಲವೆಂದು ಹೇಳುವುದಿಲ್ಲ ಗೊತ್ತು. ನಮ್ಮಿಂದ ಬಂದಿದೆಯೆಂಬುದು ಮುಖ್ಯವಾಗಿ ನಿಮ್ಮ ಮನಸ್ಸಿನಲ್ಲಿರುತ್ತದೆ. ಕೊನೆಗೆ ಒಂದು ವರ್ಷದ ಮೇಲೆ ಮಾಡಬೇಕಾದರೂ ನಿಮ್ಮವರಿಂದ ಇದೇ ಒಂದು ತೆರದು ಮಾಡೋಣ ಎಂಬ ಉದ್ದೇಶವಿದ್ದರೂ ಇರಬಹುದು.

ಶ್ರೀ ಟಿ. ಮರಿಯಪ್ಪ.—ಹಾಗೆ ಇಲ್ಲವೇ ಇಲ್ಲ.

ಶ್ರೀ ಎಂ. ಲಿಂಗೇಗೌಡ.—ರಚನಾತ್ಮಕ ಸಲಹೆಯೆಂದರೆ, ಶ್ರೀಮಾನ್. ರಾಚಯ್ಯನವರು ಏನು ತಾನೆ ಕೊಟ್ಟರು? ಈಗ ಸರ್ಕಾರದವರು ಹೇಗೆ ನಡೆಸುತ್ತಿದ್ದಾರೋ ಹಾಗೆಯೇ ನಡೆಸಲಿ ಎಂದರು.

ಶ್ರೀ ಬಿ. ರಾಚಯ್ಯ.—ಹಾಗೆಯೇ ನಡೆಸಲಿ ಎಂದು ನಾನು ಹೇಳಲಿಲ್ಲ.

ಶ್ರೀ ಎಂ. ಲಿಂಗೇಗೌಡ.—ಎಂದರೆ ಆಡಳಿತ ಈಗ ಕೆಟ್ಟಿದೆ ಎಂದ ಹಾಗಾಗಲಿಲ್ಲವೆ? ಅಲ್ಲಿಗೆ ಇದನ್ನು ಉತ್ತಮಪಡಿಸಬೇಕಾದದ್ದು ಅವಶ್ಯಕ.

ಈಗ ಶ್ರೀಮಾನ್ ಬೋರಯ್ಯನವರು ಒಂದು ಸಲಹೆ ಕೊಟ್ಟರು. ಈ ಫ್ಯಾಕ್ಟರಿಗಳು ಎಷ್ಟಿವೆಯೋ ಅವುಗಳನ್ನೆಲ್ಲಾ ಒಟ್ಟುಗೂಡಿಸಿ, ಒಂದು ಮೇನೇಜ್‌ಮೆಂಟಿನಲ್ಲಿಟ್ಟು, ಖರ್ಚು ಕಡಿಮೆಮಾಡಿ, ಬೋರ್ಡ್ ಬೇಡ, ಎಂದು ಹೇಳಿದರು. ಅದು ಒಂದು constructive suggestion ಎಂದು ನನಗೆ ಕಾಣುತ್ತದೆ. ಹಾಗೆ ಮಾಡುವುದರಿಂದ ಓವರ್ ಹೆಡ್ ಚಾರ್ಜಸ್, ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್ ಬಹಳಮಟ್ಟಿಗೆ ಕಡಿಮೆಯಾಗುತ್ತದೆ. ರೇಷ್ಮೆ ಗೂಡುಗಳನ್ನು ಕೇಳುವವರೇ ಇಲ್ಲ. ರೇಷ್ಮೆ ಕೈಗಾರಿಕೆಯಲ್ಲಿ ತೊಡಗಿರುವವರಿಗೆ ಲಾಸ್ ಆಗುತ್ತಿದೆ. ಗೂಡು ತೆಗೆಯುವುದಕ್ಕೆ, ಸಂಬಳ ವಗೈರೆಗೆ ವೆಚ್ಚ ಜಾಸ್ತಿಯಾಗುತ್ತದೆ. ಕಕೂನುಗಳ ಖರೀದಿ ಏರಿಹೋಗಿದೆ. ನಮ್ಮ ಕಾಲದಲ್ಲಿ ರೆಂಡೆಟ 18 ಪೌಂಡು ಇದ್ದದ್ದು ಈಗಿನ ಕಾಲದಲ್ಲಿ 20-25 ಪೌಂಡು ಆಗುತ್ತಿದೆ. ಪೌಂಡಿಗೆ ಎರಡು ರೂಪಾಯಿನಂತೆ ಲೆಕ್ಕ ಹಾಕಿದರೆ, ಎಂಟು ರೂಪಾಯಿ ಜಾಸ್ತಿಯಾಯಿತು. ಅದನ್ನು ಕಡಿಮೆಮಾಡುವುದಕ್ಕೆ Checks and Counter-Checks ಏನಿದೆ? ಈ ಕಾರಣದಿಂದ ಇದನ್ನೆಲ್ಲಾ ನೋಡಿಕೊಳ್ಳುವುದಕ್ಕೆ ಸರ್ಕಾರದವರಿಗೆ ಆಗುತ್ತದೆಯೇ? ಹಾಗಿದ್ದರೆ ಏಕೆ ಸರಿಪಡಿಸಲಿಲ್ಲ? ಸರ್ಕಾರಕ್ಕೂ ನಷ್ಟವಾಗುತ್ತಿದೆ, ಫ್ಯಾಕ್ಟರಿಯವರಿಗೂ ನಷ್ಟವಾಗುತ್ತಿದೆ, ರೈತರಿಗೂ ನಷ್ಟವಾಗುತ್ತಿದೆ. ಇದನ್ನು ವೆಲ್‌ಫೇರ್ ಇಂಡಸ್ಟ್ರಿ ಎಂದು ಹೇಳುತ್ತೀರಿ.

(ಶ್ರೀ ಎಂ. ಲಿಂಗೇಗೌಡ)

ಆದ್ದರಿಂದ ಅದರಿಂದ ರೈತನಿಗೆ ಉಪಯೋಗವಾಗಬೇಕು, ಫ್ಯಾಕ್ಟರಿ ಲಾಭ ಸಂಪಾದನೆಮಾಡಬೇಕೆಂಬ ದೃಷ್ಟಿಯಿಂದ ಮಾಡಿದರೆ ನಷ್ಟವಾಗುವುದಿಲ್ಲ. ಬೇಕಾದಷ್ಟು ಜನರ ಜೀವನ ಈ ಕೈಗಾರಿಕೆಯಿಂದ ಸಾಗುತ್ತಿದೆ. ಈ ಕಾರಣದಿಂದ ನಾನು ಸರ್ಕಾರದಲ್ಲಿ ಹೇಳುತ್ತೇನೆ. ದಯಮಾಡಿ ಈ ನಿರ್ಣಯವನ್ನು ಒಪ್ಪಿಕೊಂಡು ಬಿಡಿ. ಈ ಕೈಗಾರಿಕೆಯನ್ನು ಸರಿಪಡಿಸುವುದಕ್ಕೆ ನಾಳೆಯೇ ಈ ಬೋರ್ಡನ್ನು ಷುರುಮಾಡಬೇಕು. ಫ್ಯಾಕ್ಟರಿಯಲ್ಲಿರುವ ನಿಮ್ಮ ಡಿಪಾರ್ಟ್‌ಮೆಂಟ್ ಅಧಿಕಾರಿಗಳು ಈ ಕೈಗಾರಿಕೆಯಲ್ಲಿ ಏನೂ ಇಂಟರೆಸ್ಟ್ ತೆಗೆದುಕೊಳ್ಳುತ್ತಿಲ್ಲ. ವೈಯಕ್ತಿಕವಾಗಿ ನಾನು ಯಾರ ವಿಷಯದಲ್ಲಿಯೂ ಮಾತನಾಡುತ್ತಿಲ್ಲ. ಅವರಿಗೆ ಸಂಬಳ ಖಾಯಮ್ಮಾಗಿ ಬರುತ್ತದೆ. ಅವರಮೇಲೆ ಇವರನ್ನು ಹಾಕುವುದರಲ್ಲಿ ಬೆಳಗ್ಗಿನಿಂದ ಸಾಯಂಕಾಲದವರೆಗೂ ಕಾಲ ಕಳೆಯುತ್ತಾರೆ. ಪೊಲಿಟಿಕಲ್ ಇನ್‌ಫ್ಲುಯನ್ಸ್ ಫಿಲೇಚರ್ ಡಿಪಾರ್ಟ್‌ಮೆಂಟಿನಲ್ಲಿ ಜಾಸ್ತಿಯಾಗಿದೆ. ಡಿಪಾರ್ಟ್‌ಮೆಂಟ್ ಕೆಲಸಕ್ಕಿಂತ ಜಾಸ್ತಿ ಅವರ ಸ್ವಂತ ಕೆಲಸಮಾಡಿಕೊಳ್ಳುವುದರಲ್ಲಿ ಹೆಚ್ಚಿಗೆ ಕಾಲ ಕಳೆಯುತ್ತಾರೆ. ಅವರು ಮನಸ್ಸು ಮಾಡಿದರೆ ಕೆಲಸಮಾಡಬಹುದು. ಕುದುರೆ ಜೂಜಿಗೆ, ರೇಸಿಗೆ, ಒಳ್ಳೆಯ ಬ್ರೀಡಿನಿಂದ ಕುದುರೆಯನ್ನು ತೆಗೆದುಕೊಳ್ಳುತ್ತಾರೆ. ಕುದುರೆ ಜೂಜಿಗೆ ಹೇಸರುಗತ್ತೆ ತೆಗೆದುಕೊಂಡು ಹೋಗುವುದನ್ನು ನಾನು ನೋಡಿಲ್ಲ. ಯಾವ ಯಾವ ಕಾಲದಲ್ಲಿ ಏನು ಮಾಡಬೇಕು, ಹೇಗೆ ಮಾಡಬೇಕೆನ್ನುವುದನ್ನು ತಾವು ನೋಡುತ್ತಿರಬೇಕು. ಆದರೆ ಸದಾಕಾಲದಲ್ಲಿಯೂ ಇಂಡಸ್ಟ್ರಿಯನ್ನು ವಾಚ್ ಮಾಡುವುದಕ್ಕೆ ಸರ್ಕಾರಕ್ಕೆ ಆಗುವುದಿಲ್ಲ. ನಾನು ಮೊದಲೇ ಹೇಳಿದಹಾಗೆ ತಾವು ಪಾಲಿಸಿ ಮೇಕರ್ಸ್. ತಮ್ಮಿಂದ ಈ ಇಂಡಸ್ಟ್ರಿ ಉಳಿಸುವುದಕ್ಕಾಗುವುದಿಲ್ಲ. ಈ ಕಾರಣದಿಂದ ಈ ರೇಷ್ಮೆ ಕೈಗಾರಿಕೆಯ ಅಭಿವೃದ್ಧಿಗೆ ಒಂದು ಅಟಾನಮಸ್ ಬೋರ್ಡ್ ಮಾಡಿ. ಸರ್ಕಾರದವರೇ ಅದಕ್ಕೆ ಒಬ್ಬ ಚೇರ್ಮನ್ನರನ್ನು ನೇಮಿಸಲಿ. ಬೋರ್ಡಿಗೆ ಕೆಲವು ಮೆಂಬರುಗಳನ್ನು ತೆಗೆದುಕೊಂಡು ಅವರ ಸಲಹೆಗಳನ್ನು ಕೇಳಿ. ಅವರು ಹೇಳಿದ್ದನ್ನೆಲ್ಲಾ ಒಪ್ಪಿಕೊಳ್ಳಬೇಕಾಗಿಲ್ಲ. ಅವರು ಹೇಳಿದ್ದು ನ್ಯಾಯವಾಗಿದ್ದರೆ ಒಪ್ಪಿಕೊಳ್ಳಿ. ಈ ಇಂಡಸ್ಟ್ರಿಯನ್ನು ಉಳಿಸಿಕೊಳ್ಳುವುದಕ್ಕೆ ಈ ಏರ್ಪಾಡನ್ನು ಮಾಡಬೇಕೆಂದು ಕೇಳಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಟಿ. ಮರಿಯಪ್ಪ.—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ತಂದಿರತಕ್ಕಂಥ ನಿರ್ಣಯದ ವಿಷಯದಲ್ಲಿ ಬಹಳ ವಿಪುಲವಾದಂಥ ಚರ್ಚೆಯಾಗಿದೆ. ಸುದೈವದಿಂದ ನಮ್ಮ ಸ್ನೇಹಿತರು ನನ್ನ ಕಣ್ಣು ತೆರೆಸಿದ್ದಾರೆಂದು ಹೇಳುತ್ತೇನೆ. ಈ ರೇಷ್ಮೆ ಕೈಗಾರಿಕೆಯನ್ನು ಯಾರು ನಂಬಿಕೊಂಡಿದ್ದಾರೋ ಅವರ ಸುದೈವ ಎಂದು ಹೇಳಲೇಬೇಕು. ಸ್ವಾಮಿ, ನನ್ನ ಅನುಭವದಲ್ಲಿ, ಈ ವಿಷಯವನ್ನು ಇಷ್ಟು ದೀರ್ಘವಾಗಿ ಮತ್ತು ರಚನಾತ್ಮಕವಾಗಿ ಚರ್ಚೆ ಮಾಡಿರುವುದು ಇದೇ ಮೊದಲನೆಯ ಸಾರಿ ಎಂದು ಹೇಳಬಲ್ಲೆ. ನಾನು ಪ್ರಜಾಪ್ರತಿನಿಧಿ ಸಭೆಯಲ್ಲಿಯೂ ಇದ್ದೆ, ನ್ಯಾಯವಿಧಾಯಕ ಸಭೆಯಲ್ಲಿಯೂ ಮೆಂಬರಾಗಿ ಇದ್ದೆ; ಹೊಸ ರಾಷ್ಟ್ರವಾದಮೇಲೂ ಇದ್ದೇನೆ. ಯಾವುದಾದರೂ ಒಂದು ಕೈಗಾರಿಕೆಯನ್ನು ತೆಗೆದುಕೊಂಡು, ಒಂದು ಕೊನೆಯಿಂದ ಇನ್ನೊಂದು ಕೊನೆಯವರೆಗೆ ಅದರಲ್ಲಿರತಕ್ಕಂಥ ಅಂಶಗಳನ್ನು ತುಲನಾತ್ಮಕವಾದ ರೀತಿಯಲ್ಲಿ ಚರ್ಚೆಮಾಡಿದ್ದು ಇದೇ ಮೊದಲೆಂದು ಹೇಳಿದರೆ ಆಶ್ಚರ್ಯವಾಗಬಹುದು. ಸರ್ಕಾರಕ್ಕಂತೂ ಇದು ಕಣ್ಣು ತೆರೆಸಿದಹಾಗಿದೆ. ಈ ಚರ್ಚೆಯಲ್ಲಿ ಸಾಧಕ ಬಾಧಕಗಳೆರಡನ್ನೂ ಚರ್ಚೆಮಾಡಿದ್ದಾರೆ. ಮೈಸೂರಿನಲ್ಲಿ ನಿಜವಾಗಿ ಬಹುಜನರ ಜೀವನಾಧಾರಕ್ಕೇ ಈ ಕೈಗಾರಿಕೆ ಕಾರಣವಾಗಿದೆ. ಅನೇಕ ವರ್ಷಗಳಿಂದ ನಡೆದುಕೊಂಡ ಬಂದಂಥ ಈ ಕೈಗಾರಿಕೆಯನ್ನು ಇನ್ನೂ ಚೆನ್ನಾಗಿ ಉಳಿಸಿಕೊಳ್ಳಬೇಕು, ಉತ್ತಮಪಡಿಸಬೇಕು ಮತ್ತು ಅದು ಇಂಟರ್‌ನ್ಯಾಷನಲ್ ಮಟ್ಟಕ್ಕಾದರೂ ಬರಬೇಕು ಎನ್ನುವುದು ಚರ್ಚೆಯಲ್ಲಿ ಚೆನ್ನಾಗಿ ವ್ಯಕ್ತವಾಗಿದೆ. ಈ ನಿರ್ಣಯ ಏನೋ ಚರ್ಚೆಗೆ ಬಂದಿದೆ, ಚರ್ಚೆಮಾಡೋಣ ಎನ್ನುವ ದೃಷ್ಟಿಯಿಂದ ಚರ್ಚೆ ನಡೆಯಲಿಲ್ಲ. ಈ ವಿಷಯವನ್ನು ಪರಿಷ್ಕಾರವಾಗಿ ತಿಳಿದುಕೊಂಡು, ಅದರಲ್ಲಿ ಅನುಭವಪಡೆದಿರತಕ್ಕಂಥ ಮಾನ್ಯ ಮಿತ್ರರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ ಅದಕ್ಕೋಸ್ಕರ ನಾನಂತೂ ಅವರಿಗೆ ವೈಯಕ್ತಿಕವಾಗಿ ತುಂಬ ಕೃತಜ್ಞನಾಗಿದ್ದೇನೆ.

ಈ ಕೈಗಾರಿಕೆ ತುಂಬ ಪ್ರಾಮುಖ್ಯವಾದುದು. ಆದರೆ ನಮ್ಮ ಎದುರುಗಡೆ ಇರತಕ್ಕಂಥ ಸದಸ್ಯರು ಹೇಳಿದ ಹಾಗೆ ಈ ಕೈಗಾರಿಕೆಯಲ್ಲಿ ಎಲ್ಲಾ ಕೆಟ್ಟುಹೋಗಿದೆ, ಅಲಕ್ಷ್ಯವಾಗಿ ಬಿಟ್ಟಿದೆ ಎನ್ನುವುದನ್ನು ನಾನಂತೂ ಒಪ್ಪಿಕೊಳ್ಳುವುದಿಲ್ಲ. ಒಂದು ಪ್ರಶ್ನೆ ಹಾಕುತ್ತೇನೆ. ಕೆಟ್ಟುಹೋಗಿದ್ದರೆ ಒಂದು ಗುರ್ತು ಕಾಣುತ್ತದೆ; ಶ್ರೀ ಮಲ್ಲಾರಾಧ್ಯರಿಗೆ ಗೊತ್ತಿರುವಹಾಗೆ ಬೆಳೆಯ ವಿಸ್ತೀರ್ಣದಲ್ಲಿ ಕಡಿಮೆಯಾಗಿ, ಹಿಂದೆ ಮೈಸೂರಿನಲ್ಲಿ ಜನಜೀವನ ಮಾಡುವುದಕ್ಕೆ ಸಾಧ್ಯವಾಗದೆ ಹೋಗಿತ್ತು. ಹಾಗೆ ವಿಸ್ತೀರ್ಣದಲ್ಲಿ ಕುಗ್ಗಿಹೋಗಿದೆಯೇ? ಈ ಸಾರಿ ಕುಗ್ಗಿಹೋಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಈ ಬೆಳೆ 1,07,105 ಎಕರೆ ಇದ್ದದ್ದು ಈಗ 1,60,000 ಎಕರೆಗೆ ಏರಿರುವುದರಿಂದ, ಕೈಗಾರಿಕೆ ಇಷ್ಟು ಕುಗ್ಗಿಹೋಗಿಲ್ಲ. ಈ ಕೈಗಾರಿಕೆಯ ಕಡೆ ಸರ್ಕಾರ ಗಮನಕೊಟ್ಟಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಕೆಟ್ಟುಹೋಗಿದ್ದರೆ, ಬೆಳೆ ವಿಸ್ತೀರ್ಣವಾಗುವುದಿಲ್ಲ. ನಿಮ್ಮ ನಿರೀಕ್ಷಣೆ ಏನಿತ್ತೋ, ಆ ನಿರೀಕ್ಷಣೆಯ ಮಟ್ಟದಲ್ಲಿ ಇರದಿರಬಹುದು. ಅದನ್ನು ಒಪ್ಪಿಕೊಳ್ಳುತ್ತೇನೆ; ಇಷ್ಟು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ.

ಕೆಲವು ವರ್ಷಗಳಕಾಲ ಈ ಕೈಗಾರಿಕೆ ನನ್ನ ವಶದಲ್ಲಿತ್ತು. ಆಗಿದ್ದ ಕೆಲವು ಮಾನ್ಯ ಸದಸ್ಯರ ಮತ್ತು ಈ ಕೈಗಾರಿಕೆಯಲ್ಲಿ ಬಹಳ ಸಂಪರ್ಕ ಇಟ್ಟುಕೊಂಡಿರುವ ಮಾನ್ಯ ಸ್ನೇಹಿತರ ಒಂದು ಸೆಮಿನಾರಿನಲ್ಲಿ, ಈ ಕೈಗಾರಿಕೆಗೆ ಸಂಬಂಧಪಟ್ಟ ಎಲ್ಲಾ ಸಮಸ್ಯೆಗಳನ್ನೂ ಚರ್ಚೆಮಾಡಿ, ಕೇಂದ್ರದವರ ಮೇಲೆ ಈ ಕೈಗಾರಿಕೆಯ ವಿಷಯದಲ್ಲಿ ಒತ್ತಾಯ ಹಾಕಿದ್ದೇವೆ. ಇನ್ನುಮೇಲೆ ಈ ಕೈಗಾರಿಕೆ ಉಳಿದುಕೊಳ್ಳಬೇಕಾದರೆ, ಇಂಡಿಯಾ ಸರ್ಕಾರದವರು ಒಂದು ನೀತಿಯನ್ನನುಸರಿಸಬೇಕು, ಇದಕ್ಕೆ ಪ್ರೋತ್ಸಾಹ ಕೊಡಬೇಕು ಮತ್ತು ಸ್ಟೆಬಿಲೈಸೇಷನ್ ಆಫ್ ಪ್ರೈಸಸ್ ಇಲ್ಲದಿದ್ದರೆ ಈ ಕೈಗಾರಿಕೆಗೆ ಒಳ್ಳೆಯ ಭವಿಷ್ಯವಿಲ್ಲವೆಂದು ಕೇಂದ್ರ ಸರ್ಕಾರಕ್ಕೆ ಹೇಳಿ ತೋರಿಸಿದವರಲ್ಲಿ ಮೈಸೂರಿನವರೇ ಮೊದಲನೆವರು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಆ ಸೆಮಿನಾರಿನಲ್ಲಿ ಎಲ್ಲಾ ಅಂಕಿಅಂಶಗಳನ್ನೂ ಚರ್ಚೆಮಾಡಲಾಯಿತು. ಒಳ್ಳೆಯ ಎಕ್ಸ್‌ಪರ್ಟುಗಳು ಇದರಲ್ಲಿ ಇದ್ದರು. ಇದರಲ್ಲಿ ವಿಪರೀತವಾದಂಥ ಪರಿಶ್ರಮ, ಅನುಭವ ಮತ್ತು ದಕ್ಷತೆ ಇದ್ದಂಥ ಶ್ರೀ ನವರತ್ನ ರಾಮರಾಯರೂ ಇದ್ದರು, ಶ್ರೀ ಎಂ. ಎ. ಶ್ರೀನಿವಾಸನ್ ಅವರೂ ಇದ್ದರು; ಅವರೇ ಪೋರ್ಟ್‌ಫೋಲಿಯೋ ಮಿನಿಸ್ಟರಾ

ಗಿದ್ದರು. ನಮ್ಮ ಸುಬ್ರಾಮಶೆಟ್ಟರೂ ಇದ್ದರು. ಆ ಮೇಲೆ ಶಂಷುದ್ದೀನ್ ಖಾನರೂ ಇದ್ದರು. ಮಲ್‌ಬರಿ ಬೆಳೆಯುವವರೂ ಇದ್ದರು. ಹೀಗೆ ಎಲ್ಲರೂ ಇದ್ದರು. 1951 ನೆಯಇಸವಿಯಲ್ಲಿ ಮೈಸೂರು ಸೆಮಿನಾರ್ ಆಗಿ ಸಿಲ್ಕ್ ಇಂಡಸ್ಟ್ರಿ ವಿಷಯವನ್ನು ಚರ್ಚೆ ಮಾಡಿದರು. ಭೂಮಿಯಲ್ಲಿ ಸಾರವಿದೆಯೋ ಇಲ್ಲವೇ, ಎಷ್ಟು ಬೆಳೆ ಬೆಳೆಯುವುದಕ್ಕೆ ಸಾಧ್ಯವೆನ್ನುವುದರಿಂದ ಹಿಡಿದು, ಬಟ್ಟೆ ಮಾಡಿ ಮಾರುವವರೆಗೆ ಏನೇನು ಸಮಸ್ಯೆಗಳಿವೆಯೋ, ಅವುಗಳಲ್ಲಿ ಒಂದಕ್ಕೊಂದಕ್ಕೂ ಹೊಂದಾಣಿಕೆ ಇದೆ. ಈ ಸಮಸ್ಯೆಗಳನ್ನು ಪ್ರಾಯಶಃ ಬಿಡಿಸಿ, ಇತ್ತೀಚೆಗೆ ಬಂದಿರತಕ್ಕಂಥ ಅನುಭವವನ್ನು ಈ ಸೆಮಿನಾರ್ ರಿಪೋರ್ಟಿಗೆ ತುಂಬಿದ್ದರೆ ಚೆನ್ನಾಗಿತ್ತು. ಅದು ಬಿಟ್ಟು ಈಗ ಕೈಗಾರಿಕೆಯಲ್ಲಿ ಎಲ್ಲಾ ಕೆಟ್ಟು ಹೋಗಿದೆ ಎಂದು ಹೇಳಿದರೆ ಒಪ್ಪಲು ಸಾಧ್ಯವಿಲ್ಲ. ಇಷ್ಟು ರಚನಾತ್ಮಕವಾದ ಸಲಹೆಯ ಜೊತೆಗೆ ಹೀಗೆ ಹೇಳಿದ್ದು, ಸಾರಿಗೆ ಉಪ್ಪು ಸ್ವಲ್ಪ ಜಾಸ್ತಿ ಹಾಕಿದ ಹಾಗಾಯಿತು. ಫಸ್ಟ್‌ಕ್ಲಾಸ್ ಸಲಹೆ ಕೊಟ್ಟು ಬಿಟ್ಟು, ಸ್ವಲ್ಪ ಜಾಸ್ತಿ ಉಪ್ಪು ಹಾಕಿಬಿಟ್ಟರೆ, ಹೇಗೆ ಸಾರು ಊಟಮಾಡುವುದಕ್ಕಾಗುತ್ತಿರಲಿಲ್ಲವೋ, ಎಲ್ಲಾ ಕೆಟ್ಟು ಹೋಗಿದೆ ಎಂದು ಹೇಳಿದ್ದು ಹಾಗಾಯಿತು.

5 P.M.

ಈ ಕೈಗಾರಿಕೆಯಲ್ಲಿ ಏಕರೇಜ್ ಒಂದುಲಕ್ಷ 60 ಸಾವಿರಕ್ಕೆ ಏರಿದೆ. ಸಿಲ್ಕ್ ತಯಾರಾಗುವುದು ಕಡಿಮೆ ಆಗಿದೆಯೋ ಎಂದರೆ ಇದರ ಉತ್ಪತ್ತಿ 25.2 ಲಕ್ಷ ಪೌಂಡಿಗೆ ಏರಿದೆ. ಇಲಾಖೆಯವರ ಮತ್ತು ಸರ್ಕಾರದವರ ಪ್ರೋತ್ಸಾಹ ನಿಕಟವಾಗಿಲ್ಲದಿದ್ದರೆ ಅಷ್ಟು ಏರುತ್ತಿರಲಿಲ್ಲ. ಅವರು ಇಂಟರ್ ನ್ಯಾಷನಲ್ ಸ್ಟಾಂಡರ್ಡಿಗೆ ಬರುತ್ತಿರಲಿಲ್ಲ. ಶ್ರೀಮಾನ್ ರಷೀದ್ ಅವರು ಹೇಳಿದಹಾಗೆ ಅದರಲ್ಲಿ evenness ಬರುತ್ತಿರಲಿಲ್ಲ. ಒಂದೊಂದು ಗೂಡು 600-900 ಮೀಟರ್ಸ್ ಬರುತ್ತಿರಲಿಲ್ಲ. ಎಷ್ಟು ರಿಸರ್ಚ್ ಆಗಬೇಕೋ ಅಷ್ಟು ಆಗಲಿಲ್ಲ, ರಿಸರ್ಚ್ ಸ್ಟೇಷನ್ ಕಟ್ಟಡ ಮಾಡಲಿಲ್ಲವೆಂದು ಹೇಳಿದ ಟೀಕೆಗಳನ್ನು ನಾನು ಮಾನ್ಯ ಮಾಡುತ್ತೇನೆ. ಅನೇಕರು ರಚನಾತ್ಮಕವಾದ ಟೀಕೆಗಳನ್ನು ಮಾಡುತ್ತಾ ಮಧ್ಯೆ ಮಧ್ಯೆ ಉಪ್ಪು ಸೇರಿಸುವುದರಿಂದ ಯಾವರೀತಿ ನೀರು ಕುಡಿಯಬೇಕಾಗಿದೆಯೋ ಆರೀತಿ ಈ ಕೈಗಾರಿಕೆ ಅಭಿವೃದ್ಧಿಯಾಗುವುದಕ್ಕೆ ಮಧ್ಯೆ ಮಧ್ಯೆ ಏನೇನೋ ಅಡಚಣೆ ಬರುವುದರಿಂದ ಇನ್ನೂ ಅಭಿವೃದ್ಧಿಯಾಗಲಿಕ್ಕಿಲ್ಲ. ಶ್ರೀ ಲಿಂಗೇಗೌಡರು ಹೇಳಿದರ , ನಾವು ತಂದಿದ್ದಂದು ನಿರಾಕರಿಸುವಂತೆ ಮಾಡಬೇಡಿ ಎಂದು. ನಾನು ಹೇಳುವುದಿಷ್ಟೆ. ಈ ಕೈಗಾರಿಕೆ ನಮ್ಮ ಇಲಾಖೆಯಲ್ಲಿಯೇ ಇದೆಯೆಂದು ತಾವು ಹೇಳಬೇಡಿ. ಏಕೆಂದರೆ ಇಬ್ಬರು ಎಂದರೆ ಎರಡು ಇಲಾಖೆಯವರು ಜೊತೆಯಲ್ಲಿ ಕುಳಿತುಕೊಂಡು ಎಲ್ಲವನ್ನೂ ತೀರ್ಮಾನ ಮಾಡುತ್ತಿದ್ದೇವೆ. ಇತರ ಪ್ರಾಂತದವರಿಗೆ ಇದರ ಮನೋಫಲ ಸಿಕ್ಕುವುದಕ್ಕೆ ಬದಲಾಗಿ, we must hold the field. ಎಲ್ಲಾ ಸಂಸ್ಥಾನಗಳಲ್ಲಿ ಈ ಬಗ್ಗೆ ಬಹಳ ತೀವ್ರವಾದ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಒರಿಸ್ಸಾ, ಅಸ್ಸಾಂ, ಮಧ್ಯ ಪ್ರದೇಶಗಳಲ್ಲಿ ಈ ಕೈಗಾರಿಕೆ ಈಗ ಬಹಳ ಚೆನ್ನಾಗಿ ನಡೆಯುತ್ತಿದೆ. We must not only continue to maintain but we must also lead.

**Sri J. B. MALLARADHYA.**—That is why I referred to Kashmir.

**ಶ್ರೀ ಟಿ. ಮರಿಯಪ್ಪ.**—ಕಾಶ್ಮೀರದ ವಿಷಯವೇ ಬೇರೆ. ಅಲ್ಲಿನ ಹವಾಗುಣ ಚೆನ್ನಾಗಿದೆ. 87 ಸಾವಿರ ಜನಸಂಖ್ಯೆ ಈ ಬಗ್ಗೆ ಒಳ್ಳೆಯ ಅನುಭವ ಹೊಂದಿದ್ದಾರೆ. ಅಲ್ಲಿ ಒಂದು ಟ್ರೆಡಿಷನ್ ಇದೆ. ಆ ಒಂದು ಸನ್ನಿವೇಶವನ್ನೇ ತೆಗೆದುಕೊಳ್ಳಕೂಡದು. ಅವರ ಒಂದು ಅನುಭವವನ್ನು ನಾವು ಉಪಯೋಗಿಸಿಕೊಂಡು ತೀವ್ರತೆಯಿಂದ ಮುಂದುವರಿಯಬೇಕೆಂದು ನಾನು ಹೇಳುತ್ತೇನೆ. ಇನ್ನು ಶ್ರೀಮಾನ್ ಲಿಂಗೇಗೌಡರು ತಂದಿರುವ ನಿರ್ಣಯವನ್ನು ನೋಡೋಣ. ಶ್ರೀಮಾನ್ ಲಿಂಗೇಗೌಡರ ಆಶೆ ಎಷ್ಟೇ ಆಗಿದ್ದರೂ ನಿರ್ಣಯದಮೇಲೆ ಓಟು ತೆಗೆದುಕೊಳ್ಳಬೇಕು. ನಿರ್ಣಯದಮೇಲೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕು. ಈ ನಿರ್ಣಯ ಏನು ಹೇಳುತ್ತದೆಂದರೆ, "This Assembly is of the opinion that suitable steps be taken immediately to form a Corporation of Silk industries in the State comprising of all filature factories, spun silk factory and Government weaving factory." ಈ ಬಗ್ಗೆ ಶ್ರೀ ಮಲ್ಲಾರಾಧ್ಯರು ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಅದು ಈರೀತಿ ಇದೆ. "In line (2) for the word "Corporation" substitute the word "Autonomous Board"" ಇವೆರಡನ್ನೂ ನಾನು ತೂಕಮಾಡಿ ನೋಡಿದ್ದೇನೆ. ಶ್ರೀ ಮಲ್ಲಾರಾಧ್ಯ ಅವರು ಹಿಂದೆ ಡೈರೆಕ್ಟರ್ ಆಗಿದ್ದಾಗ ಈ ಕೈಗಾರಿಕೆ ಹೇಗೆ ನಡೆಸಬೇಕು ಮ್ಯಾನೇಜ್‌ಮೆಂಟ್ ಹೇಗೆ ಇರಬೇಕು, ಎಷ್ಟರಮಟ್ಟಿಗೆ ಅಟಾನಮಿ ಇರಬೇಕು, ಎಷ್ಟರಮಟ್ಟಿಗೆ ಸರ್ಕಾರದ ಪಾಲಿಸಿ ಇರಬೇಕು ಎಂಬುದನ್ನೆಲ್ಲಾ ತಿಳಿದುಕೊಂಡಿದ್ದಾರೆ. ಈ ಫಿಲೇಚರ್ಸ್ ವಿಚಾರದಲ್ಲಿ ಅವರು ಯುದ್ಧ ಕಾಲದಲ್ಲಿ ಬೇಕಾದಷ್ಟು ಅಭಿವೃದ್ಧಿ ಮಾಡಿದ್ದಾರೆ. ಯುದ್ಧಕಾಲದಲ್ಲಿದ್ದ ವಾತಾವರಣ ಯುದ್ಧ ಕಳೆದ ಮೇಲೂ ಇತ್ತೆಂದು ತಾವ್ಯಾರೂ ಹೇಳುವುದಕ್ಕಾಗುವುದಿಲ್ಲ. ಫಿಲೇಚರ್ಸ್ ಬಿಲ್ಡ್ ಅಪ್ ಮಾಡಲಿಲ್ಲವೆಂದು ಹೇಳಕೂಡದು, ಯುದ್ಧ ಕಳೆದಮೇಲೆ ಫಾರಿನ್ ಇಂಪೋರ್ಟ್ಸ್ ಜಾಸ್ತಿ ಬಂದಮೇಲೆ ನಮ್ಮ ಸಿಲ್ಕ್ ಫಿಲೇಚರ್ಸ್ ಪೈಪೋಟಿ ಮಾಡುವುದಕ್ಕಾಗಿಲ್ಲ. ನಮ್ಮ ಜನರೆಲ್ಲಾ 30 ಸಾವಿರ 35 ಸಾವಿರ ರೂಪಾಯಿ ನಷ್ಟಕ್ಕೆ ಸಿಲ್ಕನ್ನು ಮಾರಿದ್ದಾರೆ. ಸೆಂಟ್ರಲ್ ಸಿಲ್ಕ್ ಬೋರ್ಡ್ ಸ್ಥಾಪನೆಯಾದಮೇಲೆ, ಇಂಪೋರ್ಟ್ಸ್‌ನ್ನು ಸೆಂಟ್ರಲೈಜ್ ಮಾಡಿ ಪ್ರೈಡ್ ಫ್ಲಕ್ಚುಯೇಷನ್ ಸಿಲ್ಕ್ ಫಿಲೇಚರ್‌ನಲ್ಲಿರಬಾರದು ಎನ್ನುವುದನ್ನು ಗಮನಕ್ಕೆ ತೆಗೆದುಕೊಂಡು ಈ ಸಿಲ್ಕ್ ಫಿಲೇಚರನ್ನು ಅಭಿವೃದ್ಧಿ ಮಾಡಿದ್ದೇವೆ. ಸರ್ಕಾರದವರೂ ಸಹ ಅದಕ್ಕಾಗಿ ಬಹಳ ಪ್ರಯತ್ನ ಮಾಡಿದ್ದಾರೆ. ಅದನ್ನು ತಾವೆಲ್ಲರೂ ಒಪ್ಪಬೇಕು. ಖಾಸಗೀ ಕೈಗಾರಿಕೆಯವರ ಕೈಲಿ ಹಿಂದೆ ಈ ಫಿಲೇಚರ್ ಇತ್ತು. ಅದು ಒಂದು ಜಾಯಿಂಟ್ ಸ್ಟಾಕ್ ಕಂಪೆನಿಯೇ ಆಗಿತ್ತು. ಕಂಪೆನಿ 'ಲಾ'ಗಳಿಗೂ, ಇತರ ಇನ್‌ಕಾರ್ಪೊರೇಟೆಡ್ ಬಾಡಿ 'ಲಾ' ಗಳಿಗೂ ಅಷ್ಟಾಗಿ ವ್ಯತ್ಯಾಸವಿಲ್ಲ. ಆ ಕಾರ್ಪೊರೇಷನ್‌ಗಳನ್ನೂ ಕೂಡ ಈಗಿರತಕ್ಕ ವ್ಯಕ್ತಿಗಳಿಂದಲೇ ನಡೆಸಬೇಕು. ಎಷ್ಟೋಕಡೆಗಳಲ್ಲಿ 'ಕಂಟ್ರಿ' ಚರಕಗಳು ಐದು ಸಾವಿರದವರೆಗೆ ಇರುವಕಡೆ ಸುಮಾರು 18 ಲಕ್ಷ 80 ಸಾವಿರ ರೂಪಾಯಿಗಳು ನಷ್ಟವಾದರೂ ಪರವಾಯಿಲ್ಲವೆಂದು ಸರ್ಕಾರದವರು ಧೈರ್ಯಮಾಡಿ ಅವಕ್ಕೆ ಬದಲು ಬೇಸಿನ್ನುಗಳನ್ನು ಕೊಂಡು ಕೊಟ್ಟಿದ್ದಾರೆ. ಈ ಇಲಾಖೆಯಲ್ಲಿರತಕ್ಕ

(ಶ್ರೀ ಟಿ. ಮರಿಯಪ್ಪ)

ನ್ಯೂನತೆಗಳನ್ನು ತಪ್ಪಿಸಬೇಕು. ಡಿ-ಮಾರಲೈಜ್ ಆಗಿದ್ದರೆ ಅದನ್ನು ರೆಸ್ಟೋರ್ ಮಾಡಬೇಕು. ಕಾರ್ಪೊರೇಷನ್ ಮಾಡಿದರೆ ಎಲ್ಲವೂ ಸರಿಹೋಗುತ್ತದೆ ಎಂಬ ಪ್ರಶ್ನೆ ನಮ್ಮ ಮುಂದಿದೆ. ನಮಗೇನೂ ದೇವತೆಗಳು ಸಿಕ್ಕುವುದಿಲ್ಲ. ಹಾಗಿದ್ದರೆ ಏಕೆ ಕಾರ್ಪೊರೇಷನ್ ಮಾಡಬೇಕು? ಈಗಿರುವವರೂ ಸಹ ಮನುಷ್ಯ ಮಾತ್ರದವರು. ಕಾರ್ಪೊರೇಷನ್ ರಚನೆ ಮಾಡುವುದರಿಂದ ಈಗಾಗತಕ್ಕ ನಷ್ಟವನ್ನು ಸಹಿಸುವುದು ಕಷ್ಟ. ಯಾವುದಾದರೂ ಒಂದು ಕಾರ್ಪೊರೇಷನ್ ರಚಿಸಿ, ಅದು ಬಂಡವಾಳ ಹಾಕಿ, ಮುಂದೆ ಏನಾದರೂ ನಷ್ಟಕ್ಕೀಡಾಗಿ ಕೆಟ್ಟುಹೋದರೆ, ನಮಗೆ ಆಮೇಲೆ ಅದರಿಂದ ಮೂರುಕಾಸೂ ಕೂಡ ಸಿಕ್ಕುವುದಿಲ್ಲ. ಆಗ ಕಾರ್ಪೊರೇಷನ್ನಿನವರು ಲಿಕ್ವಿಡೇಷನ್ನಿಗೆ ಹೋಗಬೇಕಾಗುತ್ತದೆ.

**Sri J. B. MALLARADHYA.**—The mover himself has accepted my amendment.

ಶ್ರೀ ಎಂ. ಲಿಂಗೇಗೌಡ.—ಅವರ ತಿದ್ದುಪಡಿಗೆ ನಾನು ಒಪ್ಪಿಕೊಂಡಿದ್ದೇನೆ ಅದರಮೇಲೆ ಮಾತನಾಡಬೇಕು. ದಯವಿಟ್ಟು ತಾವು ಕಾರ್ಪೊರೇಷನ್ ಎಂಬ ಪದವನ್ನುಮಾತ್ರ ಬಿಟ್ಟು ಈಗಿರತಕ್ಕ ತಿದ್ದುಪಡಿಯನ್ನು ಒಪ್ಪಿಕೊಂಡಮೇಲೆ ಅದನ್ನು ಮಾತನಾಡಬಹುದು.

ಶ್ರೀ ಟಿ. ಮರಿಯಪ್ಪ.—ಆ ವಿಷಯವನ್ನು ಬಿಟ್ಟರೆ, ಅಟಾನಮಸ್ ಬೋರ್ಡ್ ಫಾರ್ ಫಿಲೇಚರ್, ಸ್ಪನ್ ಸಿಲ್ಕ್ ಫ್ಯಾಕ್ಟರಿ, ಗೌರ್ನ್‌ಮೆಂಟ್ ವೀವಿಂಗ್ ಫ್ಯಾಕ್ಟರಿ ಈ ಮೂರನ್ನೂ ಸೇರಿಸಿ ಒಂದು ಬೋರ್ಡ್ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ನಾವು ಮೊದಲು ಯೋಚನೆ ಮಾಡಬೇಕು.

**Sri J. B. MALLARADHYA.**—I want the Boa:d to cover the entire range of the industry from the mulberry tree down to the disposal of the finished product. I do not want the departmental officers to be eliminated but I want all to come under one unified control.

ಶ್ರೀ ಟಿ. ಮರಿಯಪ್ಪ.—ಇದನ್ನು ಉತ್ತಮಗೊಳಿಸತಕ್ಕ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬ ವಿಚಾರದಲ್ಲಿ ಅವರೇನನ್ನೂ ಹೇಳಿಲ್ಲ. ಈ ಫಿಲೇಚರ್ ರೇಷ್ಮೆಯ ಕೈಗಾರಿಕೆಯಲ್ಲಿರತಕ್ಕ ಕುಂದು ಕೊರತೆಗಳೇನು, ಸಾಧಕ ಬಾಧಕಗಳೇನು; ಇದನ್ನು ಹೇಗೆ ಸ್ಟೆಪ್ ಅಪ್ ಮಾಡಬೇಕು; ಇದಕ್ಕೆ ಏನು ಹಣ ಸಹಾಯ ಒದಗಿಸಬೇಕು ಇದರಲ್ಲಿ ಯಾರ್‍ಯಾರ ಮಾತ ವರ್ಜಿ ಎಷ್ಟೆಷ್ಟರಮಟ್ಟಿಗಿರಬೇಕು ಎನ್ನತಕ್ಕ ಬಗ್ಗೆ ಈ ನಾನಾ ವಿಚಾರಗಳನ್ನು ಮೈಸೂರ್ ಫಿಲೇಚರ್‌ನವರೊಂದಿಗೆ ನಾವು ಡಿಸ್ಕಸ್ ಮಾಡಿದ್ದೇವೆ. ಇಷ್ಟೆಲ್ಲವನ್ನೂ ನಾವು ಮಾಡಿದ್ದರೂ ಕೂಡ ತಾವೇನೂ ಈ ವಿಚಾರದಲ್ಲಿ ಪ್ರಯತ್ನವನ್ನೇ ಮಾಡಿಲ್ಲ ಎಂದರೆ ಇನ್ನೇನು ಹೇಳಲಿ? ಆದರೆ ಈಗ ಸೂಚಕರು ಹೇಳಿರತಕ್ಕ ರೀತಿಯಲ್ಲಿ ನಾವು ಒಂದೊಂದು ಬಾಬಿಗೂ ಹೀಗೆ ಒಂದೊಂದು ಬೋರ್ಡನ್ನು ನೇಮಿಸುತ್ತ ಹೋದರೆ ಆಗ ಇದೆಲ್ಲವೂ ಸರಿಹೋಗುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲನೆಮಾಡದೆ ಮಾತನಾಡಿದರೇನು ಪ್ರಯೋಜನ? ಈಗ ಆ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಮತ್ತು ಚಿನ್ನದಗಣಿ ಇಂಥ ಉದ್ಯಮಗಳ ಬಗ್ಗೆ ಅಲ್ಲಿಯ ಕೆಲಸಕಾರ್ಯಗಳು ಚುರುಕಾಗಿ ಬೇಗ ಬೇಗ ನಡೆಯುವಂತೆ ಮಾಡತಕ್ಕ ಬಗ್ಗೆ ಒಂದು ಹೆಚ್ಚಿನ ಅಧಿಕಾರವಿರತಕ್ಕ ಬೋರ್ಡನ್ನು ಮಾಡಲಾಗಿದೆ. ಆದರೆ ಆ ಉದ್ಯಮಗಳಂತೆ ಈ ಸಿಲ್ಕ್ ಫಿಲೇಚರ್ ಉದ್ಯಮ. ಇದೊಂದು ದೊಡ್ಡ ಕೈಗಾರಿಕೆ. ಪರದೇಶದ ಪೈಪೋಟಿಯನ್ನು ನಿಲ್ಲಿಸುವಷ್ಟರಮಟ್ಟಿಗೆ ಇದರ ಉತ್ಪತ್ತಿಯನ್ನು ಇಲ್ಲ ಜಾಸ್ತಿಮಾಡಿ ಇದರ ಕ್ವಾಲಿಟಿಯನ್ನೂ ಉತ್ತಮಗೊಳಿಸತಕ್ಕ ಬಗ್ಗೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು, ಈ ಬಾಬಿನಲ್ಲಿ ಒಂದು ಹೆಚ್ಚಿನ ಶಿಕ್ಷಣವನ್ನು ಜನರಿಗೆ ಒದಗಿಸಿಕೊಡಬೇಕು, ಇದನ್ನು ಉತ್ತಮಗೊಳಿಸಿ ದೇಶಕ್ಕೂ, ಸರ್ಕಾರಕ್ಕೂ ಅನುಕೂಲವಾಗತಕ್ಕ ರೀತಿಯಲ್ಲಿ ಕೆಲಸ ನಡೆಯುವಂತೆ ಮಾಡಬೇಕೆಂಬ ಮನಸ್ಸು ನಮಗೂ ಸಹ ಪೂರಾ ಇದೆ. ಈ ಉದ್ಯಮದಲ್ಲಿ ಈ ದಿವಸ ಲಕ್ಷಾಂತರ ಜನರು ನಿರತರಾಗಿದ್ದಾರೆ. ನಮ್ಮಲ್ಲಿ ಅನೇಕರು ಲಕ್ಷಾಂತರ ರೂಪಾಯಿಗಳಗಟ್ಟಲೆ ಈ ಸ್ಪನ್ ಸಿಲ್ಕ್ ವ್ಯಾಪಾರ ಮಾಡತಕ್ಕವರೂ ಇದ್ದಾರೆ. ಅವರಿಗೆ ಈ ಬಾಬಿನಲ್ಲಿ ಪರಿಶ್ರಮ ವಿರುವಂತೆ ನನಗೂ ಸಹ ಇದರಲ್ಲಿ ಸ್ವಲ್ಪ ಪರಿಶ್ರಮವಿದೆ. ಆದರೆ ನಮ್ಮ ಭಾರತದೇಶ ಪಾರ್ಟಿಷನ್ ಆದಮೇಲೆ ವೆಸ್ಟ್ ಪಾಕೀಸ್ಥಾನದ ಗಿರಾಕಿಯನ್ನು ನಾವು ಕಳೆದುಕೊಂಡಿದ್ದೇವೆ. ಯಾವಾಗ ಅತ್ತಕಡೆಯ ವ್ಯಾಪಾರ ನಿಂತುಹೋಯಿತೋ ಆಗ ನಾವು ಬೊಂಬಾಯಿಯಲ್ಲಿ ಒಂದು ಯೂನಿಟ್‌ನ್ನು ತೆರೆಯಬೇಕಾಯಿತು. ಆದರೆ ಅದೇನೂ ಅಷ್ಟು ಅಭಿವೃದ್ಧಿಗೆ ಬಂದಹಾಗೆ ಕಾಣುತ್ತಿಲ್ಲ. ಅಲ್ಲಿರತಕ್ಕ ಬಂಡವಾಳವನ್ನು ಮೂರುಲಕ್ಷಕ್ಕೆ ಅಂದಾಜ ಹಾಕಿದ್ದರು. ಆದರೆ ಈಗ ಅದು 30 ಸಾವಿರ ಕೂಡ ಆಗುವುದಿಲ್ಲ. ಅಲ್ಲಿ ನಮ್ಮವರೊಬ್ಬರು ಪ್ರತಿನಿಧಿಗಳಿದ್ದಾಕ್ಷಣಕ್ಕೆ ಏನಾಯಿತು? ಅದರಲ್ಲಿ ನಮ್ಮ ಷೇರ್ ಕ್ಯಾಪಿಟಲ್ ಇರತಕ್ಕದ್ದೆಲ್ಲ ಹತ್ತು ಪರ್ಸೆಂಟ್ ಮಾತ್ರ. ನಮಗೆ ಅಲ್ಲಿರತಕ್ಕ ಇತರ ಡೈರೆಕ್ಟರುಗಳ ಬೆಂಬಲ ಸಾಲದು. ಈ ಸ್ಪನ್ ಸಿಲ್ಕ್ ಕೈಗಾರಿಕೆಯಲ್ಲಿ ಹೀಗೆಲ್ಲಾ ನಾನಾ ರೀತಿಯಾಗಿ ತೊಡರುಗಳಿವೆ. ಅವುಗಳನ್ನು ಸಾಧ್ಯವಾದಮಟ್ಟಿಗೂ ಸಾಧಿಸಿಕೊಂಡು ಹೋಗಲು ಅನೇಕ ಪ್ರಯತ್ನಗಳನ್ನು ಹೀಗೆ ನಾವು ಮಾಡಿದ್ದರೂ ಕೂಡ ಸ್ಪನ್ ಸಿಲ್ಕ್ ವಿಚಾರದಲ್ಲಿ ಸರ್ಕಾರದವರೇನೂ ಮಾಡಿಲ್ಲ ಎಂದು ಹೇಳತಕ್ಕದ್ದು ಬಹಳ ಅನ್ಯಾಯ. ತಾವು ಟೀಕೆ ಮಾಡುವಾಗ ಈ ವಿಷಯಗಳನ್ನೆಲ್ಲ ಗಣನೆಗೆ ತಗೆದುಕೊಳ್ಳದೆ ಮಾತನಾಡುವುದು ಸರಿಯಲ್ಲ. ನಾವು ಈ ನಾನಾ ವಿಷಯಗಳಿಗೆಲ್ಲ ಗಮನ ಕೊಟ್ಟು ಇದನ್ನು ಹೇಗೆ ಉತ್ತಮಪಡಿಸಬಹುದೆಂಬ ಆಲೋಚನೆಯಲ್ಲಿರುವಾಗಲೇ ಈ ವ್ಯವಹಾರ ಹೈಕೋರ್ಟಿನ ಮುಂದೆ ಯಾವಾಗ ಹೋಯಿತು ಆಗ ಅಲ್ಲಿಂದ ಮುಂದಕ್ಕೆ ನಮಗೇನು ಮಾಡುವುದಕ್ಕೂ ಸಾಧ್ಯವಾಗಲಿಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಈ ಲೀಜನ್ನು ಆ ಮೈಸೂರು ಬ್ಯಾಂಕಿನವರಿಗೇ ತಾವು ಎಕ್ಸ್‌ಟೆಂಡ್ ಮಾಡಿ ಕೊಡಬಹುದಾಗಿತ್ತು. ಆದರೆ ಹಾಗೆ ಮಾಡದೆ ಯಾರೋ ಒಬ್ಬ ಪಾರ್ಟಿ ಇಂಟ್ರಸ್ಟಿನಿಂದ ಅದೊಂದು ಪಾಲಿಟಿಕ್ಸನ್ನೇ ಮಾಡಿದ್ದರಿಂದ ಹೀಗೆಲ್ಲಾ ಆಯಿತು. ಆ ಲೀಜನ್ನೇ ತಾವು ಮುಂದುವರಿಸಿದ್ದರೆ ಸುಮಾರು 1,500 ಜನ ಕೂಲಿಗಾರರಿಗೆ ಈ ದಿವಸ ಒಂದು ಜೀವನೋಪಾಯ ನಡೆಸಿಕೊಂಡು ಹೋಗುವುದಕ್ಕಾದರೂ ಒಂದು ಅನುಕೂಲವಾಗುತ್ತಿರಲಿಲ್ಲವೇ?

ಶ್ರೀ ಟಿ. ಮರಿಯಪ್ಪ.—ನಿಜ. ಆ ಪಾಲಿಟಿಕ್ಸನ್ನು ತಂದು ಹಾಕತಕ್ಕವರೇ ಈರೀತಿ ಹೇಳುತ್ತಿದ್ದರೆ ನಾನೇನನ್ನು ಏನು ಹೇಳಲಿ? ಆ ರೀತಿ ಆದದ್ದು ಅದೊಂದು ದೊಡ್ಡ ದುರದೃಷ್ಟ! ಅದರಲ್ಲೂ ಪಾಲಿಟಿಕ್ಸ್ ಹೊರಗಡೆಯವರಿಂದ ಬಂದದ್ದು ಇನ್ನೂ ಹೆಚ್ಚಿನ ದುರದೃಷ್ಟ! ಆದರೆ ಇದರ ಏಳಿಗೆಗಾಗಿ ನಾವೇನೋ ಕಾಯಾ, ವಾಚಾ, ಮನಸಾ ಪ್ರಯತ್ನಗಳನ್ನು ಮಾಡುತ್ತಿರುವಾಗ, ಈ ಕೈಗಾರಿಕೆಯ ಅಭಿವೃದ್ಧಿಗಾಗಿ ನಾವು ಶ್ರಮಿಸುತ್ತಿರುವಾಗ ಅನೇಕರಿಂದ ನಿಷ್ಠೂರಗಳನ್ನು ಹೊತ್ತುಕೊಂಡಿದ್ದೇವೆ. ಆದರೆ ಯಾವಾಗ ಆ ಒಂದು ವಿಚಾರ ಹೈಕೋರ್ಟಿನಮುಂದೆ ಹೋಯಿತೋ ಆಗ ನಾವು ಏನು ಮಾಡುವುದಕ್ಕೂ ಸಾಧ್ಯವಾಗಲಿಲ್ಲ. ನಾವೀಗಲೂ ಸಹ ಇದನ್ನು ಇನ್ನೂ ರೀ-ಆರ್ಗನೈಜ್‌ಮಾಡಿ ಉತ್ತಮ ವ್ಯವಸ್ಥೆಗೆ ತರಬೇಕೆಂಬ ಆಲೋಚನೆಯಲ್ಲೇ ಇದ್ದೇವೆ. ಆದರೆ ಈಗ ನಮ್ಮಲ್ಲಿರತಕ್ಕ ಸ್ಪನ್ ಸಿಲ್ಕ್ ಮಿಲ್ ಯಾವರೀತಿಯಲ್ಲಿ ನಡೆಸಲಾಗುತ್ತಿದೆಯೋ ಅದೇ ರೀತಿಯಲ್ಲಿ ಮುಂದುವರಿಸುವುದಾದರೆ ಮುಂದೆ ಏನು ಅಭಿವೃದ್ಧಿ ಮಾಡುವುದಕ್ಕೂ ಸಾಧ್ಯವಿಲ್ಲ. ಆ ಮೆಷೀನ್‌ಗಳೆಲ್ಲ ಬಹಳ ಹಳೆಯವು. ಅನೇಕ ಭಾಗಗಳನ್ನು ರೀ-ಫ್ಯಾಬ್ರಿಕೇಟ್ ಮಾಡಬೇಕಾಗಿರುತ್ತದೆ. ಆ ಯಂತ್ರದಲ್ಲಿ ತುಂಬಾ ಧೂಳು ತುಂಬಿಕೊಂಡಿದೆ. ಆ ಕಾರ್ಖಾನೆಯೊಳಕ್ಕೆ ಹೋಗುವುದಕ್ಕೂ ಕೂಡ ಸಾಧ್ಯವಿಲ್ಲ. ಆ ಮೇಷಿನ್‌ಗಳನ್ನೆಲ್ಲಾ ಈಗ ರೀ-ಪ್ಲೇಸ್ ಮಾಡಲೇಬೇಕಾಗಿದೆ.

Sri J. B. MALLARADHYA.—What were your officers doing to allow the machinery to go into that condition?

Sri T. MARIAPPA.—Not only officers but everybody concerned is responsible.

ಹೀಗೆ ಇದೇನು ಒಂದೆರಡು ವರ್ಷಗಳ ವಿಚಾರವಲ್ಲ. ಕಳೆದ 10-12 ವರ್ಷಗಳಿಂದಲೂ ಅದು ಸರಿಯಾಗಿ ಕೆಲಸವನ್ನೇ ಮಾಡುತ್ತಿರಲಿಲ್ಲ. ಹಾಗಾಗುವುದಕ್ಕೆ ಕಾರಣವೇನೆಂದು ಕೇಳಿದ್ದಕ್ಕೆ ಅವರು ಲೇಬರ್ ಟ್ರಬಲ್ ಇತ್ಯಾದಿ ನಾನಾ ಕಾರಣಗಳನ್ನು ಹೇಳುತ್ತಾರೆ. ಆದುದರಿಂದ ಈ ಸ್ಪನ್ ಸಿಲ್ಕ್ ಉದ್ಯಮ ಹೀನಸ್ಥಿತಿಗೆ ಬರಲು ಎಲ್ಲ ಹೊಣೆಗಾರಿಕೆಯನ್ನು ಸರ್ಕಾರದವರ ಮೇಲೆ ಹಾಕಬೇಡಿ ಎಂದು ಕೇಳಿಕೊಳ್ಳುತ್ತೇನೆ. ಆದರೆ ಈ ಸ್ಪನ್ ಸಿಲ್ಕ್ ಉದ್ಯಮ ನಮ್ಮ ದೇಶಕ್ಕೆ ಬಹಳ ಅತ್ಯಗತ್ಯವಾಗಿ ಬೇಕಾದುದು. ವೇಸ್ಟ್‌ಸಿಲ್ಕನ್ನು ಉಪಯೋಗಮಾಡಿಕೊಳ್ಳಲು ಇದರ ಅಗತ್ಯ ತುಂಬ ಇದೆ. ಆದರೆ ಈಗ ನಮ್ಮ ಕಾರ್ಖಾನೆಯನ್ನು ರಿಹ್ಯಾಬಿಲಿಟೇಟ್ ಮಾಡಬೇಕು. ಈ ವೇಸ್ಟ್ ಸಿಲ್ಕನ್ನು ಉಪಯೋಗಮಾಡಿಕೊಳ್ಳತಕ್ಕ ವಿಚಾರದಲ್ಲಿ ಒಂದು ಚರ್ಚೆ ನಡೆಯಿತು......

ಶ್ರೀ ಎಂ. ಲಿಂಗೇಗೌಡ.—ಈ ವೇಸ್ಟ್ ಸಿಲ್ಕನ್ನು ಈ ಹಿಂದೆ ಯಾರಿಗೆ ಕೊಡಬೇಕೆಂದು ಲೀಜ್ ಮಾಡಿಕೊಳ್ಳಲಾಗಿತ್ತೋ ಅವರಿಗೇ ಅದನ್ನು ಮುಂದುವರಿಸಬೇಕೆಂಬ ತೀರ್ಮಾನವಾಗಿದ್ದರೂ ಅದನ್ನು ನೆಗೊಷಿಯೇಟ್ ಮಾಡತಕ್ಕ ಕಾಲದಲ್ಲಿ ಅವರಿಗೂ ಇಲಾಖೆಯವರಿಗೂ ಒಂದು ಮನಸ್ತಾಪವಿದ್ದುದರಿಂದ ಅದನ್ನು ಲಿಕ್ವಿಡೇಟ್ ಮಾಡಬೇಕಾಗಿ ಬಂತಲ್ಲವೇ?

ಶ್ರೀ ಟಿ. ಮರಿಯಪ್ಪ.—ಅದು ಹಾಗಾಗಲಿಲ್ಲ. ನಾನು ಆ ವಿಚಾರವನ್ನೇ ಈಗ ಹೇಳುವುದರಲ್ಲಿದ್ದೆ. ನಾವು ಆ ಚರ್ಚೆಯನ್ನು ನಡೆಸುತ್ತಿರುವಾಗಲೇ ಸ್ಥಳೀಯ ಸದಸ್ಯರೊಬ್ಬರು ಹೈಕೋರ್ಟಿಗೊಂದು ಲಿಕ್ವಿಡೇಷನ್‌ಗೆ ಅರ್ಜಿಯನ್ನು ಹಾಕಿದರು. ತಾವು ಆ ಹಿಂದೆ ಯಾರಿಗೆ ಲೀಜ್ ಮಾಡಿಕೊಡಲಾಗಿತ್ತೋ ಅವರ ಆ ಲೀಜ್ ಕಂಡೀಷನ್‌ಗಳನ್ನು ತಾವು ಬೇಕಾಗಿದ್ದರೆ ಓದಿ ನೋಡಿ. ಅದರಲ್ಲಿ ಅವರಿಗೆ ಎಷ್ಟು ವರ್ಷಗಳ ತನಕ ಲೀಜ್ ಮಾಡಿಕೊಡಲಾಗುವುದೋ ಅಷ್ಟು ವರ್ಷಗಳ ದುಡ್ಡನ್ನು ಮೊದಲೇ ಕೊಟ್ಟುಬಿಡಬೇಕೆಂದು ಮತ್ತು ಆ ಯಂತ್ರೋಪಕರಣಗಳನ್ನು ರೀ-ಹ್ಯಾಬಿಲೇಟ್ ಮಾಡಬೇಕೆಂದೂ ಕಂಡೀಷನ್ ಮಾಡಿಕೊಂಡಿದ್ದೆವು.

ಶ್ರೀ ಜೆ. ವೆಂಕಟಪ್ಪ.—ಮೂರುಲಕ್ಷ ರೂಪಾಯಿಗಳಿಗೆ ಬೇರೆಯವರು ಲೀಜ್ ಮಾಡಿಕೊಳ್ಳಲು ಮುಂದೆ ಬಂದಿದ್ದಾಗ್ಯೂ ತಾವೇಕೆ ಅವರಿಗೆ ಅವಕಾಶ ಕೊಡಲಿಲ್ಲ?

ಶ್ರೀ ಟಿ. ಮರಿಯಪ್ಪ.—ಬರಿ ಸರಸ್ವತಿ ಪ್ರಸನ್ನದಿಂದೇನು ಪ್ರಯೋಜನ? ಆದರೆ ಬರು ಬರುತ್ತ ಎಲ್ಲರೂ ಕೆಟ್ಟವರೆ ಆಗುತ್ತಿದ್ದರೆ ಆಗ ನಾವೂ ಸಹ ಕೆಟ್ಟವರೇ. ದೇಶದಲ್ಲಿರತಕ್ಕವರೆಲ್ಲಾ ಕೆಟ್ಟವರೇ ಆದರೆ ಆಗ ನಾವೂ ಕೆಟ್ಟವರೆಂತಲೇ ಅದರ ಅರ್ಥ. ಆದರೆ ಇತ್ತೀಚೆಗೆ ಈ ವೇಸ್ಟ್ ಸಿಲ್ಕನ್ನು ಕೊಂಡುಕೊಳ್ಳತಕ್ಕವರೂ ಕಡಮೆಯಾದರು. ಕಾರಣ ಅದಕ್ಕೆ ಸರಬರಾಯಿ ಆಗತಕ್ಕ ಗೂಡುಗಳೇನಿವೆ ಅವುಗಳ ಕ್ವಾಲಿಟಿ 'ಎ' ಗ್ರೇಡ್ ಇಲ್ಲದಿದ್ದರೆ ಹೋಗಲಿ, ಅವು 'ಡಿ' ಗ್ರೇಡ್ ಕೂಡ ಮುಟ್ಟುವಹಾಗಿಲ್ಲ. ಈ ಹಿಂದೆ ಒಂದೇ ಒಂದು ನಮ್ಮ ಸ್ಪನ್ ಸಿಲ್ಕ್ ಫ್ಯಾಕ್ಟರಿ ಏಳು-ಎಂಟು ಲಕ್ಷ ಪೌಂಡಗಳಷ್ಟು ವೇಸ್ಟ್ ಸಿಲ್ಕನ್ನು ಖರ್ಚು ಮಾಡುತ್ತಿತ್ತು. ಹಿಂದೆ ನಾನೇ ಒಂದಾವರ್ತಿ ಈ ಧಾರಣೆ ವಿಚಾರದಲ್ಲಿ 1-12-0 ಇದ್ದುದನ್ನು 2-0-0 ರೂಪಾಯಿಗೆ ಏರಿಸಿದಾಗ ಅದರಿಂದ ಕೊಳ್ಳತಕ್ಕವರಿಗೆ ಬಹಳ ಕಷ್ಟವಾಗುತ್ತದೆ ಮತ್ತು ಗಿರಾಕಿಗಳನ್ನು ತರುವುದಕ್ಕೆ ತೊಂದರೆಯಾಗುತ್ತೆಂದು ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀ ಕರ್ಮಾರ್‌ಕರ್ ಅವರೊಂದಿಗೆ ಫೈಟ್‌ಔಟ್ ಕೂಡ ಮಾಡಿದ್ದೇನೆ. ಇಷ್ಟೆಲ್ಲಾ ಮಾಡಿದ್ದರೂ ಸರ್ಕಾರದವರು ಈ ಸ್ಪನ್ ಸಿಲ್ಕ್ ಕೈಗಾರಿಕೆ ಬಗ್ಗೆ ಏನೂ ಪ್ರಯತ್ನ ಮಾಡಿಲ್ಲವೆಂದು ಸದಸ್ಯರುಗಳು ಮಾಡಿರತಕ್ಕ ಆರೋಪಣೆಗಳು ನಿರಾಧಾರವಾದವುಗಳು.

ಗವರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿಗೆ ಅತ್ಯುತ್ತಮವಾದ ಹೆಸರಿತ್ತು. ಮಾರ್ಕೆಟ್ಟಿನಲ್ಲೆಲ್ಲ ನಮ್ಮದೇ dominate ಆಗುತ್ತಿತ್ತು. Mysore Silk Fabrics ಎಂದರೆ ಹೆಸರುವಾಸಿಯಾಗಿತ್ತು. ಈ ಕಾರ್ಖಾನೆಯಲ್ಲಿ ಅನೇಕ ವರ್ಷಗಳ ಹಿಂದೆ ಹಾಕಿದ ಹಳೆಯ ಯಂತ್ರಗಳೇ ಕೆಲಸ ಮಾಡುತ್ತಿವೆ. ಜೊತೆಗೆ ನಾನಾ ತರಹ ಸಿಲ್ಕ್‌ಗಳು ಬಂದಿವೆ, different fashions ಬಂದಿವೆ. ಎಷ್ಟೇ ಗೌರವಯುತವಾದ ವಸ್ತುವಿದ್ದರೂ, ತಳುಕು ಇದ್ದರೆ ಜನ ಅದಕ್ಕೆ ವ್ಯಾಮೋಹಗೊಳ್ಳುವುದು ಹೆಚ್ಚೇನೂ ಅಲ್ಲ, ಬಹಳ ಗಾಂಭೀರ್ಯವಾದ, ಎಲ್ಲ ಸುಲಕ್ಷಣಗಳೂ ಇರತಕ್ಕ ಒಂದು ವಸ್ತುವಿದ್ದರೂ, ಜನ ತಳುಕಿಗೆ ಮೋಸ ಹೋಗುತ್ತಾರೆ. ಆರ್ಟ್‌ಸಿಲ್ಕ್, ನೈಲಾನ್, ರೇಯಾನ್, ಇಂಥ ವಸ್ತುಗಳಿಗೆ ಮೋಸ ಹೋಗಿ ಅದರಿಂದ ಒಳ್ಳೆಯ ರೇಷ್ಮೆಗೆ ದೆಲ್ಲಾ ಬಂದಿದೆ.

ಶ್ರೀ ಎಂ. ಲಿಂಗೇಗೌಡ.—ಒರಿಜಿನಲ್ ಕ್ವಾಲಿಟಿ ಮೈಂಟೈನ್ ಮಾಡದೆ ಇರುವುದರಿಂದ ಮಾರ್ಕೆಟ್ ಹೋಗಿದೆ.

ಶ್ರೀ ಟಿ. ಮರಿಯಪ್ಪ.—ಅದರ quality deteriorate ಆಗಿದೆ.........

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸ್ಪನ್‌ಸಿಲ್ಕ್ ಫ್ಯಾಕ್ಟರಿ ವಿಷಯ ಏನು ಹೇಳಿದಹಾಗಾಯಿತು?

ಶ್ರೀ ಟಿ. ಮರಿಯಪ್ಪ.—ಆದಷ್ಟು ಬೇಗ, ಈಗ ಇರುವುದನ್ನೇ rehabilitate ಮಾಡುವುದೇ ಅಥವಾ ಬೇರೆ ಮಾಡುವುದಕ್ಕೆ ಸಾಧ್ಯವಿದೆಯೇ, ಇಲ್ಲವೇ ಎಂಬುದನ್ನೆಲ್ಲಾ ಆಲೋಚನೆ ಮಾಡಬೇಕಾದ ವಿಷಯ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಬೇರೆ ಮಾಡುವುದು ಎಂದರೆ ಏನು ಸ್ವಾಮಿ !

ಶ್ರೀ ಟಿ. ಮರಿಯಪ್ಪ.—ಗವರ್ನಮೆಂಟ್ ವೀವಿಂಗ್ ಫ್ಯಾಕ್ಟರಿ ವಿಷಯ ಹೇಳಿರುವುದನ್ನು ಗಮನಿಸಬೇಕಾದ್ದೇ. ಮಾರ್ಕೆಟ್‌ನಲ್ಲಿ ಅದಕ್ಕೆ ಇದ್ದ ಸ್ಥಾನವನ್ನು ನಾವು ಕಳೆದುಕೊಂಡಿದ್ದೇವೆ; ಮೊದಲನಂತೆ ನಫೆ ಬರುವುದೂ ಕಡಮೆಯಾಗಿದೆ; ಕ್ವಾಲಿಟಿ ಕೂಡ ಡಿಟೇರಿಯೊರೇಟ್ ಆಗಿದೆ ಎಂದು ಹೇಳಿದ್ದಾರೆ. ಇದನ್ನೆಲ್ಲ ಖಂಡಿತವಾಗಿಯೂ ಪರಿಶೀಲನೆ ಮಾಡುತ್ತೇವೆ. ಆದಷ್ಟು ಬೇಗನೆ ರಚನಾತ್ಮಕವಾದ ಸಲಹೆಗಳನ್ನು ಏನೇನು ಮಾಡಿದ್ದೀರಿ ಅವುಗಳನ್ನೆಲ್ಲ ಮನಸ್ಸಿನಲ್ಲಿಟ್ಟುಕೊಂಡು ಕೆಲಸ ಮಾಡುತ್ತೇವೆ. ಈಗ ಇದಕ್ಕೋಸ್ಕರವಾಗಿ ಪೂರನ್ನೂ ಒಟ್ಟಿಗೆ ಸೇರಿಸಿ ಮಾಡುವುದು ಸಾಧುವೇ ಅಥವಾ ಒಂದೊಂದು line of developmentಗೂ ಪ್ರತ್ಯೇಕವಾಗಿ small units, ಮಾಡಿಕೊಂಡು small boards or small commitees ಮಾಡುವುದು ಸಾಧುವೇ ಎಂದು ಯೋಚನೆ ಮಾಡಿ ಕೆಲಸ ಮಾಡಬೇಕಾಗುತ್ತದೆ. ದುಡುಕಿ ಯಾವುದನ್ನೂ ಸಹ ಮಾಡುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಏಕ'ದಂ ಏನೂ ಮಾಡುವುದಕ್ಕಾಗುವುದಿಲ್ಲ. ಇದು highly scientific ಆಗಿರತಕ್ಕದ್ದು.

ಜಪಾನ್ ದೇಶದಲ್ಲಿ ಹಾಗಿವೆ, ಹೀಗಿದೆ ಎಂದು ಶ್ರೀ ರಾಜಯ್ಯಶೆಟ್ಟರು ಹೇಳಿದರು. ಜಪಾನ್‌ನಲ್ಲಿ ಎಷ್ಟೋ ಇದೆ. ಅದನ್ನೆಲ್ಲ ನಾವು ಒಂದೇ ಸಲ ಮಾಡಲು ಸಾಧ್ಯವೇ ಎಂಬುದನ್ನು ಅವರು ಆಲೋಚನೆ ಮಾಡಬೇಕು. ಅಲ್ಲಿ ಸುಮಾರು 600 ತರಹ ಬೊಂಬಿನ ಪದಾರ್ಥಗಳನ್ನು ಮಾಡುತ್ತಾರೆ. "ನವಿಲನ್ನುನೋಡಿ ಕೆಂಬೂತ ಪುಕ್ಕ ಕೆದರಿಕೊಂಡಿತು " ಎಂಬ ಹೇಳಿದ ಹಾಗಾಗುತ್ತದೆ. ಇವುಗಳಿಗೆ ಸಂಬಂಧಪಟ್ಟ ಲಿಟರೇಚರ್ ನಾನೂ ಸ್ವಲ್ಪ ಓದಿದ್ದೇನೆ. ಅವರು ಇಷ್ಟು ಮುಂದುವರಿಯಲು ಎಷ್ಟು ವರ್ಷ ತೆಗೆದುಕೊಂಡರು ? ಯುದ್ಧವಾದ ಮೇಲೆ ಅವರು ಎಷ್ಟು ಕೆಳಕ್ಕೆ ಹೋಗಿ ಪುನಃ recoup ಆದರು. ನಾವು ನಮ್ಮಲ್ಲಿ ಮಾಡತಕ್ಕ ಕಾರ್ಯ ಬಹಳವಿದೆ. ಅದರಲ್ಲಿಯೂ ರೇಷ್ಮೆ ಉದ್ಯಮದಲ್ಲಿ ಭೂಮಿಯಿಂದ ಹಿಡಿದು ಬಟ್ಟೆ ಆಗುವವರೆಗೆ ಬರೀ ವಿಜ್ಞಾನವಿದೆ. ನಮ್ಮ ಮೈಸೂರು ದೇಶದಲ್ಲಿ natural segregation ಇವೆ. ಕಾನೂನು ಮೂಲಕ ರೀಲಿಂಗ್ ಕಕೂನ್ಸ್, ಸೀಡ್ ಕಕೂನ್ಸ್ ವಗೈರೆಗೆ ಬೇರೆ ಬೇರೆ ಭಾಗಗಳಲ್ಲಿ ಮಾಡಬೇಕೆಂದು segregate ಮಾಡುತ್ತಾರೆ. ನಮ್ಮ ಅದೃಷ್ಟಕ್ಕೆ ಮೈಸೂರಿನಲ್ಲಿ ರೀಲಿಂಗ್ ಕಕೂನ್ಸ್ ಏರಿಯಾ ಬೇರೆ, ಸೀಡ್ ಕಕೂನ್ಸ್ ಏರಿಯಾ ಬೇರೆ, ಹೀಗೆ ಪ್ರತಿಯೊಂದಕ್ಕೂ natural segregation ಇದೆ. ಕೋಲಾರ ಪ್ರಾಂತದಲ್ಲಿ ಹೆಚ್ಚಿಗೆ ನೀರಾವರಿ ಮೂಲಕ ನಡೆಯುತ್ತದೆ. ಸದರ್ನ್ ಜೋನ್‌ನಲ್ಲಿ ಎಲ್ಲ rainfed. ಇದಕ್ಕೆ ಕುಣಿಗಲ್, ದೊಡ್ಡಬಳ್ಳಾಪುರ ಮತ್ತು ಮಾಗಡಿ ತಾಲ್ಲೂಕಿನ ಸುಗ್ಗನಹಳ್ಳಿ, ಈ ಪ್ರಾಂತಗಳಲ್ಲಿ ಬೇಕಾದಷ್ಟು ಅವಕಾಶವಿದೆ. ಆದರೆ ಅವಕಾಶ ಪೂರ್ತಿಯಾಗಿಲ್ಲ. ಪ್ರಥಮ ದರ್ಜೆಯ ಸೀಡ್ ಕಕೂನ್ಸ್, ಹೇರಳವಾಗಿ ತಯಾರುಮಾಡುವುದರಲ್ಲಿ ಎಷ್ಟು ಮಟ್ಟದಲ್ಲಿ ಹೋಗಬಹುದೋ ಅಷ್ಟು ಮಟ್ಟದಲ್ಲಿ ಹೋಗಿಲ್ಲವೆನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಏನೂ ಆಗಿಲ್ಲವೆಂದು ಹೇಳಬಾರದು.

ಇತ್ತೀಚೆಗೆ ನಾವು ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ಪ್ರಾರಂಭ ಮಾಡಿದ ಮೇಲೆ ಅನೇಕ ಕೆಲಸಗಳನ್ನು ಮಾಡಿದ್ದೇವೆ. ಶ್ರೀ ಅಬ್ದುಲ್ ರಷೀದ್ ಅವರು ಇದನ್ನು ಚೆನ್ನಾಗಿ ವಿಂಗಡಿಸಿ ಹೇಳಿದ್ದಾರೆ. ಪುನಃ ಅದನ್ನೇ ಹೇಳಬೇಕಾದ ಪ್ರಮೇಯವಿಲ್ಲ. ಎಷ್ಟು ಮಟ್ಟದಲ್ಲಿ, ಎಷ್ಟು ತೀವ್ರವಾಗಿ ಆಗಬೇಕಾಗಿತ್ತು, ಎಷ್ಟು quantity ಬೇಕಾಗಿತ್ತು, ಯಾವ ಪ್ರಮಾಣದಲ್ಲಿ ಬೇಕಾಗಿತ್ತು, ಅಷ್ಟು ಆಗಿಲ್ಲವೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಏನೂ ಆಗಿಲ್ಲವೆಂದರೆ ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಇದೆಲ್ಲ ಶ್ರೀ ಲಿಂಗೇಗೌಡರಿಗೆ ಗೊತ್ತು. ಅವರು ತಿಳಿದೂ ಸಹ ಹೀಗೆ ಮಾತನಾಡಿದ್ದಾರೆಂದು ನಾನು ಭಾವಿಸುತ್ತೇನೆ.

ನಿರ್ಣಯದ ಮೇಲಿನ ಚರ್ಚೆ ಹೇಗಾಯಿತು ಎಂದರೆ, ರೇಷ್ಮೆ ಉದ್ಯಮಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳೂ ಪ್ರಸ್ತಾಪಿಸಲ್ಪಟ್ಟವು. ಭೂಮಿಯನ್ನು ಹಸನು ಮಾಡುವುದರಿಂದ ಅದರ ಸತ್ವಾಂಶ ಹೆಚ್ಚಿ ಅದರಿಂದ ಉತ್ತಮ ದರ್ಜೆಯ ಎಲೆ ಬರುತ್ತದೆ. ಇದರಲ್ಲಿ ಸುಧಾರಣೆಗಳು ಆಗುವುದು ಇದೆ. ಎಲೆಯಲ್ಲಿ ಒಳ್ಳೆಯ ಸತ್ವ, proteins ಇರುವುದರಿಂದ ಹುಳುವು ಚೆನ್ನಾಗಿ ಬೆಳೆಯುತ್ತದೆ, ತನ್ಮೂಲಕ ರೇಷ್ಮೆ ಗೂಡು ದೊಡ್ಡದಾಗಿ, even ಆಗಿ ಎಳೆ ಬರುವಂಥಾದ್ದು ಆಗುತ್ತದೆ. ತನ್ಮೂಲಕ ರೀಲಿಂಗ್ ಆಗುತ್ತದೆ ಅಥವಾ seed ಆದರೂ ಆಗುತ್ತದೆ. ಈ ರೀತಿ ಸದಸ್ಯರು ಮಾಡಿರತಕ್ಕ ಚರ್ಚೆಯಿಂದ ಸರ್ಕಾರಕ್ಕೂ ಮತ್ತು ಮಾನ್ಯ ಸದಸ್ಯರಿಗೂ ಈ ವಿಷಯದಲ್ಲಿ ಜ್ಞಾನವುಂಟಾಗುವಂತೆ ಆಗಿದೆ. ಈ ಚರ್ಚೆಯಲ್ಲಿ ಭಾಗವಹಿಸಿದಂಥ ಎಲ್ಲ ಸದಸ್ಯರಿಗೂ ವಂದನೆಗಳನ್ನರ್ಪಿಸುತ್ತೇನೆ. ಹೀಗೆ ಹೇಳಿದ ಮಾತ್ರಕ್ಕೆ ಸರ್ಕಾರದವರು ಏನೂ ಮಾಡಿಲ್ಲವೆಂದರೆ ಅದನ್ನು ಮಾತ್ರ ಖಂಡಿತ ಒಪ್ಪಿಕೊಳ್ಳುವುದಿಲ್ಲ. ನಮ್ಮಲ್ಲಿ ಪ್ರಯೋಗಕ್ಕೋಸ್ಕರ ಅಲ್ಲಲ್ಲಿ ಕ್ಷೇತ್ರಗಳನ್ನು ಮಾಡಿದ್ದಾರೆ. ಕಣ್ವದಲ್ಲಿ ಮತ್ತು ದೇವನಹಳ್ಳಿಯಲ್ಲಿ foreign race ಗೋಸ್ಕರ ಬಹಳ ಚೆನ್ನಾಗಿ ಮಾಡಿದ್ದಾರೆ. ಏನೂ ಮಾಡಿಲ್ಲವೆಂದರೆ ಅಷ್ಟೊಂದು ರಚನಾತ್ಮಕವಾಗುವುದಿಲ್ಲ. ಸರ್ಕಾರದ ಮೇಲೆ attack ಮಾಡಬೇಕು ಎಂದು ಟೀಕೆ ಮಾಡುವ ವಿಚಾರ ಬೇರೆ.

ಶ್ರೀ ಲಿಂಗೇಗೌಡರು ಮತ್ತೊಂದು ಸಲಹೆ ಮಾಡಿದರು. ಅವರು ಹೇಳಿದಂತೆ centralised principle ಒಪ್ಪಿಕೊಳ್ಳುತ್ತೇನೆ. ಈ ಕೈಗಾರಿಕೆಗೆ ಸ್ಥಾನ ಕೊಡಬೇಕು, ನಷ್ಟವಾಗುತ್ತಿದೆ, ಹತ್ತು ಲಕ್ಷ ಜನರಿಗೆ ಜೀವನದ ವಿಚಾರವಾಗಿದೆ ಎಂದು ಹೇಳಿದರು. ಅವರಿಗೂ ಕೂಡ ಸ್ಥಾನಮಾನ ಗಳಿಸಿಕೊಡಬೇಕು ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಎದುರು ಪಕ್ಷದವರಿಂದ ಬಂದ ಸಲಹೆ ಎಂದು ನಾನು ತಳ್ಳಿಹಾಕುವುದಿಲ್ಲ. ನನಗೂ ಇವರಲ್ಲಿ ಸ್ವಲ್ಪ ಪರಿಶ್ರಮವಿರುತ್ತದೆ. ನಾನು silk worm rearing ಮಾಡದೆ ಇದ್ದರೂ ಕೂಡ ತಮ್ಮಂಥವರ ಜೊತೆಯಲ್ಲಿ ಸ್ವಲ್ಪ ಕಾಲ ಕಳೆದಿದ್ದೇನೆ, ಅದರ ವಿಷಯಗಳನ್ನು ತಿಳಿದುಕೊಂಡಿದ್ದೇನೆ. ಆದುದರಿಂದ ಮಾನ್ಯ ಸದಸ್ಯರು ಮಾಡಿರುವ ರಚನಾತ್ಮಕ ಸಲಹೆಗಳನ್ನು ಸ್ವೀಕರಿಸುತ್ತೇನೆ.

ಸಭೆಯ ಗಮನಕ್ಕೆ ಕೆಲವು ಅಂಕಿಅಂಶಗಳನ್ನು ತರಬೇಕೆಂದು ಇಷ್ಟಪಡುತ್ತೇನೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 80 ಲಕ್ಷ ರೂಪಾಯಿ ಇದಕ್ಕಾಗಿ ಅಲಾಟ್ ಆಗಿದೆ. ಅದರಲ್ಲಿ 1956-57, 1957-58 ಮತ್ತು 1958-59 ಈ ಮೂರು ವರ್ಷಗಳಲ್ಲಿ 60 ಲಕ್ಷ ರೂಪಾಯಿ ಖರ್ಚು ಮಾಡಬೇಕಾಗಿತ್ತು. ನಾವು 42 ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಸ್ವಲ್ಪ short fall ಆಗಿದೆ. ಆದರೆ ನಾವು

general fall ನೋಡಿದರೆ 1956-57, 1957-58 ಮತ್ತು 1958-59 ಈ ಮೂರು ವರ್ಷಗಳಲ್ಲಿ ಏನು short fall ಇದೆಯೋ ಅದೇ short fall ಇಲ್ಲಿಯೂ reflect ಆಗಿದೆ. ಅದಕ್ಕೆ ಆಗಲೇ ಉತ್ತರಗಳನ್ನು ಕೊಟ್ಟಿದ್ದೇನೆ. ಮಗುವಿಗೆ ಹಲ್ಲುಗಳು ಹುಟ್ಟುವಾಗ ಬಹಳ ತೊಂದರೆ ಬರುತ್ತದೆ. ಹಾಗೆಯೇ teething troubleನಿಂದ ಸ್ವಲ್ಪ short fall ಆಗಿದೆ. 1959-60ಕ್ಕೆ 20ಲಕ್ಷ ರೂಪಾಯಿ ಪ್ರೊವೈಡ್ ಮಾಡಿದ್ದೇವೆ. ಪೂರ್ತಿಯಾಗಿ ಖರ್ಚು ಮಾಡುತ್ತೇವೆ ಎಂದು ಹೇಳುತ್ತೇನೆ. ಹೀಗೆ ಮಾಡುವಾಗ representatives of these various industries, ಅವರ ಸಲಹೆಯನ್ನೂ ಕೇಳುತ್ತೇವೆ. ತಾವೇನೂ ಅನುಮಾನ ಪಡಬೇಕಾಗಿಲ್ಲವೆಂದು ಭರವಸೆ ಕೊಡಬೇಕಾಗಿದೆ. ಈ ಕೈಗಾರಿಕೆಯನ್ನು ಉದ್ಧರಿಸಬೇಕು, ಯಾವ ಮಟ್ಟದಲ್ಲಿ ಪ್ರಗತಿ ಹೊಂದಬೇಕು ಎನ್ನುವ ದೃಷ್ಟಿಯಿಂದ ಒಂದು ನಿರ್ಧಾರಕ್ಕೆ ಬಂದಿದ್ದೇವೆ.

ಇನ್ನೂ ಒಂದು ವಿಷಯವನ್ನು ಯೋಚನೆ ಮಾಡೋಣ. ಜಪಾನೀಸ್ ಕಟಿಂಗ್ ಸ್ವಲ್ಪ ಸ್ವಲ್ಪ ಏರುತ್ತದೆ. ಅಂಥದರಲ್ಲಿ ನರ್ಸರಿ ಮಾಡಿ ಒಂದು ಲಕ್ಷಕ್ಕೆ ಮೇಲ್ಪಟ್ಟು ಗ್ರಾಫ್ಟ್ಸ ಈಗಾಗಲೇ ಹಂಚಿದ್ದೇವೆ. ಸುಮಾರು 40 per cent improvement ಇದೆ. Local mulberryಯನ್ನು ಕೂಡ constant ಆಗಿ improve ಮಾಡತಕ್ಕ ಪ್ರಯತ್ನ ಮಾಡುತ್ತಿದ್ದೇವೆ. ಸುಮಾರು ಆರೇಳು ಸಾವಿರ ಪೌಂಡ್ ಎಲೆ ಸಾಮಾನ್ಯವಾಗಿ ಸಿಕ್ಕುತ್ತದೆ. ಕೆಲವು selected areasನಲ್ಲಿ 20 ಸಾವಿರ ಪೌಂಡುಗಳ ವರೆಗೂ ಹೋಗಿರತಕ್ಕ ನಿದರ್ಶನಗಳು ನಮ್ಮ ಗಮನಕ್ಕೆ ಬಂದಿವೆ. Cuttings ಕೊಡುವುದನ್ನು ಇನ್ನೂ ಜಾಸ್ತಿ ಮಾಡಬೇಕು, ಅದರ ಸೌಲಭ್ಯ ಎಲ್ಲ ರೈತರಿಗೂ ದೊರಕಬೇಕು ಎನ್ನುವ ಆಶಯವಿರುವವರ ಪೈಕಿ ನಾನೂ ಒಬ್ಬ. ಇದರ ಸಂಪೂರ್ಣ ಪ್ರಯೋಜನವನ್ನು ಎಲ್ಲ sericulturists ಪಡೆಯಬೇಕು.

ಶ್ರೀ ವೆಂಕಟಪ್ಪನವರು ಇನ್ನೊಂದು ಸೂಕ್ತವಾದ ಸಲಹೆಯನ್ನು ಕೊಟ್ಟರು. ಒಬ್ಬರೂ ಅದನ್ನು ಗಮನಿಸಿದ ಹಾಗೆ ಕಾಣುವುದಿಲ್ಲ. ಸರ್ಕಾರ ಒಂದೇ ಕೈಯಿಂದ ಮಾಡುವುದಕ್ಕಾಗುವುದಿಲ್ಲ. ಸರ್ಕಾರದವರ ಜೊತೆಗೆ ಈ ಕೈಗಾರಿಕೆಯನ್ನು ನಂಬಿಕೊಂಡಿರುವ ಎಲ್ಲ ಸೆಕ್ಷನ್‌ಗಳಿಂದಲೂ ಶೇಕಡ 12½ ಕಂಟ್ರಿಬ್ಯೂಟ್ ಮಾಡಿ ಈ ಉದ್ಯಮದ ಅಭಿವೃದ್ಧಿಯನ್ನು ತೀವ್ರವಾಗಿ ಮಾಡಿ ಎಂದು ಹೇಳಿದ್ದು most constructive ಆದದ್ದು. ಏಕೆಂದರೆ ಜಪಾನ್ ದೇಶದ ವಿಚಾರವನ್ನು ರಾಜಯ್ಯ ಶೆಟ್ಟರು ಹೇಳಿದರು. ಇದಕ್ಕೆ ಅಲ್ಲಿನ ಸರ್ಕಾರದವರ ಪಾತ್ರ ಬಹಳ ಕಡಮೆ, ಖಾಸಗಿ ಮನುಷ್ಯರ ಪಾತ್ರ ಬಹಳವಿದೆ. ಸಂಶೋಧನೆ ವಗೈರೆ ಎಲ್ಲವನ್ನೂ ಖಾಸಗಿಯವರೇ ಮಾಡುತ್ತಾರೆ.

5-30 P.M.

**Sri M. RAMAPPA.**—Sir, under Rule 140, the Minister is entitled to reply only for half an hour. Unless he is specifically permitted by the Speaker, he is not entitled to continue after half an hour. You have not done so far. Even after 30 minutes, it is open to you now to permit him. I want to know if it is the intention of the Speaker also that the next resolution should not come up.

**Sri M. C. NARASIMHAN** (Kolar Gold Fields).—I have asubmission to make.

**Mr. CHAIRMAN.**—There is a point of order and you want to make a submission. I must give a ruling on the point of order that is now raised. The very fact that I have allowed him to speak shows that he has my permission.

**Sri C. M. ARUMUGHAM.**—Mr. Speaker, the Leader of the House has said that we would take up the other resolutions also. May I know what has happened to this assurance ?

**Mr. CHAIRMAN.**—As soon as this resolution is finished, the next resolution will be taken up.

**Sri M. C. NARASIMHAN.**—Under Rule 300, you have got discretion to fix up time. I invite your attention to that. In order to see that the next resolution is taken up, may I appeal to the Chair to fix up the time limit to the Minister's speech?

**Sri T. MARIAPPA.**—I never thought that my Hon'ble friends on the opposite side would display such impatience. If they want me to paraphrase the whole thing, I will do it. But I wanted to answer the points raised.

**Sri J. B. MALLARADHYA.**—You please tell us whether you accept the resolution or not.

**Sri T. MARIAPPA.**—They could have done the same thing and actually said that they wanted Corporation and nothing more. Why did you allow Sri Venkatappa to speak for one hour 45 minutes ?

**Sri J. B. MALLARADHYA.**—Let not Government allow the impression to gain ground in the public mind that they are adopting obstructionist tactics.

**Sri T. MARIAPPA.**—I refute it.

**Sri J. B. MALLARADHYA.**—I am only saying that this is the impression gaining ground in the public streets and bus corners. I do not mind.

**Sri D. DEVARAJ URS** (Hunsur).—How do bus people come to know about these things ?

**Sri J. B. MALLARADHYA.**—I do not want the Government to allow that impression to gain ground. Let them be charitable. ಇದು ಎಲ್ಲಾ ಬೇಕಿಲ್ಲ. ನಮಗೂ ಗೊತ್ತಿದೆ. We can do a lot. That is not correct. Let him say in principle that he does not accept because of the wordings of the resolution. We will keep quiet.

**ಶ್ರೀ ಟಿ. ಮರಿಯಪ್ಪ.**—ಒಂದೇ ಒಂದು ವಿಷಯದ ಮೇಲೆ ಮೂರು ದಿವಸಗಳು ಚರ್ಚೆ ನಡೆದಿದೆ. ಅಪೋಜಿಷನ್ ಮೆಂಬರುಗಳು ಒಬ್ಬೊಬ್ಬರು ಒಂದೂವರೆಗಂಟೆ ಮಾತನಾಡಿದ್ದಾರೆ. ಶ್ರೀ ವೆಂಕಟಪ್ಪನವರನ್ನು ಮೊದಲನೆಯ ದಿವಸ ಮಾತನಾಡಿದ್ದಲ್ಲದೆ ಮಾರುದಿನ ಕೂಡ ಮಾತನಾಡಬೇಕು ಎಂದು ಮಾತನಾಡಿಸಿ, ಈಗ ನಾನು ಉತ್ತರ ಕೊಡುವುದಕ್ಕೆ ಪ್ರಾರಂಭಿಸಿ ಇನ್ನೂ 20 ನಿಮಿಷ ಕೂಡ ಆಗಿಲ್ಲ ಮಾನ್ಯ ಸದಸ್ಯರುಗಳು ಎತ್ತಿರತಕ್ಕ ಪಾಯಿಂಟುಗಳಿಗೆಲ್ಲಾ ಉತ್ತರ ಕೊಡದೆ ಹೋದರೆ "Government is unable to meet the points" ಎಂದು ಹೇಳುತ್ತಾರೆ.

**Mr. CHAIRMAN.**—Now, you may continue and meet as many points as possible.

**Sri M. C. NARASIMHAN.**—May I know if my half an hour discussion will be taken up ?

**Mr. CHAIRMAN.**—That will be taken up after this business is over.

**Sri Y. VEERAPPA.**—May I know what is the time exactly fixed for the Minister to reply ?

**ಶ್ರೀ ಟಿ. ಮರಿಯಪ್ಪ.**—ನಾನು ನುಮ್ಮನೆ ಟ್ಯಾಕ್‌ಟಿಕ್ಸ್ ಉಪಯೋಗಿಸಿ ಕಾಲ ಕಳೆಯುವವನಲ್ಲ. That is alien to my nature, foreign to my nature.

**Sri Y. VEERAPPA.**—What exactly is the tactics meant by Hon'ble Sri Mariappa ?

**Mr. CHAIRMAN.**—There is no question of tactics.

**Sri Y. VEERAPPA.**—You were dealing with cocoons, farms, etc. ; all that has become a drudgery.

**ಶ್ರೀ ಟಿ. ಮರಿಯಪ್ಪ.**—I am not yielding. ಈ ಸಂಶೋಧನೆಯ ವಿಚಾರವನ್ನು ಕುರಿತುಕೂಡ ಮಾತನಾಡಿದ್ದೇನೆ. ಸಂಶೋಧನೆ ರಿಸರ್ಚ್ ಸ್ಟೇಷನ್ಸ್ ಎಸ್ಟಾಬ್ಲಿಷ್ ಆದಮೇಲೆ ಸಂಶೋಧನೆಯ ಕಾರ್ಯ ಆಗಲೇ ಪ್ರಾರಂಭ ಆಗಿದೆ. ಯಾವ ಮಟ್ಟದಲ್ಲಿ ಆಗಬೇಕೋ ಆ ಮಟ್ಟದಲ್ಲಿ ಅದು ಆಗಿಲ್ಲ ಎಂದು ಒಪ್ಪಿಕೊಂಡಿದ್ದೇನೆ. ಇಂಪೋರ್ಟೆಡ್ ರೇಸಸ್‌ನ್ನು ಅಕ್ಲಿಮಟೈಸ್‌ಮಾಡಿ ಜನರಿಗೆ ಹಂಚಬೇಕು ಎಂದು ಮಾಡಿದ್ದೇವೆ. It has improved the yield by 25 per cent and the quality has been improved 50 to 60 per cent (*Interruption*). ತಾವು ಮಾತನಾಡಬೇಕು ಎಂದು ಹೇಳಿಬಿಟ್ಟು ಎರಡು ದಿವಸ ಮಾತನಾಡಿ ಈಗ ಮಾತನಾಡಲು ಅವಕಾಶ ಕೊಡದೆ ಇದ್ದರೆ ಏನು ಪ್ರಯೋಜನ? ರಿಸರ್ಚ್ ಸ್ಟೇಷನ್ ವಿಚಾರದಲ್ಲಿ ಕೂಡ ಬಹಳ ಡಿಲೇ ಆಯಿತು ಎಂದು ಮಾನ್ಯ ಸದಸ್ಯರು ಹೇಳಿದರು. ರಿಸರ್ಚ್ ಆಗಿಲ್ಲ, 20 ಲಕ್ಷ ಖರ್ಚಾಗಿದೆ ಎಂದು ಹೇಳಿದರು. ಅದಕ್ಕೆ ಬಾಟನಿ, ಸಿರಿಕಲ್‌ಚರ್ ಸೆಕ್ಷನ್ ಮಾಡಿದೆ. ಮತ್ತೆ ಕೆಮಿಸ್ಟ್ರಿ, ಜುಯಾಲಜಿ, ಇಂಜಿನಿಯರಿಂಗ್ ಮುಂತಾದ ನಾಲ್ಕು ಸೆಕ್ಷನ್ ಮಾಡಲು we have taken steps and we will start these sections also. ರೀಲಿಂಗ್ ವಿಚಾರದಲ್ಲಿ ಸರ್ಕಾರದವರು ಗಮನ ಕೊಟ್ಟು ಹತ್ತು ಎನ್ ಬೇಸಿನ್ ಕಾರ್ಯಕ್ರಮ ತೆಗೆದುಕೊಂಡಿರುವುದು ತಮಗೆಲ್ಲರಿಗೂ ಗೊತ್ತಿದೆ. ಅದನ್ನು ಆಗಲೇ ಹೇಳಿದ್ದೇನೆ. ಸಿಲ್ಕ್‌ವರಮ್ ಸೀಡ್ ಕಂಟ್ರೋಲ್ ವಿಚಾರದಲ್ಲಿ ಸ್ವಲ್ಪ ಚರ್ಚೆ ಆಯಿತು. ಸರ್ಕಾರದವರು 1952ನೆಯ ಇಸವಿಯಿಂದಲೂ ಜಾರಿಗೆ ತರಲಿಲ್ಲ ಎಂದು ಹೇಳಿದರು. ಸರ್ಕಾರದವರು ಉದ್ದೇಶಪೂರ್ವಕವಾಗಿ ಜಾರಿಗೆ ತರಕೂಡದು ಎಂದು ಇಲ್ಲ. ಅಡ್ಡಿ ಆತಂಕಗಳು ಬಂದವು. ಸರ್ಕಾರದವರೂ ಕೂಡ ತೀವ್ರವಾಗಿ ಜಾರಿಗೆ ತರಬೇಕೆಂದಿದ್ದಾರೆ. ತೊಂದರೆಗಳೂ ಇವೆ. ಸೀಡ್ಸ್‌ನ್ನು ಯಾವಮಟ್ಟದಲ್ಲಿ ತಯಾರು ಮಾಡಬೇಕೋ ಆ ಮಟ್ಟದಲ್ಲಿ ಮಾಡಿಕೊಡಲು ಪ್ರತಿಬಂಧಕ ಬಂದಿರುವುದರಿಂದ ಡಿಲೇ ಆಗಿದೆ. ನಮ್ಮ ಉದ್ದೇಶ, ನಿಮ್ಮ ಉದ್ದೇಶ ಎರಡೂ ಒಂದೇ, ಕೈಗಾರಿಕೆಗಳನ್ನು ತನ್ನಷ್ಟಕ್ಕೆ ತಾನೇ ಬೆಳೆಯಲಿಕ್ಕೆ ಬಿಡುವುದು ಅಲ್ಲ, ಎಂದು ಸರ್ಕಾರಕ್ಕೆ ಗೊತ್ತು. ಎಸ್ಟ್ಯಾಬ್ಲಿಷ್ ... 

ಎಸ್ ಲೈಟನ್ಡ್ ಜನರು ತಮ್ಮ ಸಹಕಾರ ಕೊಡಬೇಕು. ಬಹಳ ಜನ ಎನ್‌ಲೈಟನ್ಡ್ ಇಂಟರೆಸ್ಟ್ ಇದ್ದವರು ಇದ್ದಾರೆ. ಶ್ರೀ ವೆಂಕಟಪ್ಪನವರು ಹೇಳಿದ ಹಾಗೆ ಅನೇಕ ಜನ ಪ್ರಾಫಿಟ್‌ಗೋಸ್ಕರ ಸೇರಿಕೊಂಡಿದ್ದಾರೆ. ಅದು ಮನವರಿಕೆಯಾಗಿದೆ. ಅದಕ್ಕೆ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಆಶೆ ಇದೆ. ಏಯ್‌ಡೆಡ್ ಗ್ರೈನ್ಯೂರ್ಸ್ ವಿಚಾರದಲ್ಲಿ ಕೂಡ ಸರ್ಕಾರದವರು ಸ್ವಲ್ಪ ನಿರ್ಬಂಧ ಹಾಕಿ ಸಂಖ್ಯೆ ಜಾಸ್ತಿ ಮಾಡಬೇಕು ಎಂದು ಇದ್ದಾರೆ. ಆದರೆ ಖಾಸಗಿ ಮನುಷ್ಯರ ಸಹಕಾರದಿಂದ 30-40 ಪರ್ಸೆಂಟ್ ಜಾಸ್ತಿಮಾಡಿ ತನ್ಮೂಲಕ ಆದಷ್ಟು ಇಂಪ್ರೂವ್ಡ್ ಸೀಡ್ಸ್ ಕೊಡಬೇಕು ಎನ್ನುವ ದೃಷ್ಟಿಯಿಂದ ನಾವು ಕಾರ್ಯಕ್ರಮ ಕೈಗೊಳ್ಳಬೇಕು ಎಂದು ಇಟ್ಟುಕೊಂಡಿದ್ದೇವೆ. ಪ್ರಾಯಶಃ ಲಿಂಗೇಗೌಡರು ಹೇಳಿದ್ದಾರೆ. ಫಿರೇಚರ್ಸ್ ಬೇಸಿನ್ಸ್ ಎಷ್ಟೆಷ್ಟು ಆಗಿವೆ ಎಂದು ಹೇಳೋಣ ಎಂದು ಇದ್ದೇನೆ.

**ಶ್ರೀ ಎಂ. ರಾಮಪ್ಪ.**—ಆ ವಿಚಾರದಲ್ಲಿ ಮುಖ್ಯ ಮಂತ್ರಿಗಳು ಬೆಳಿಗ್ಗೆ ಉತ್ತರ ಕೊಟ್ಟಿದ್ದಾರೆ.

**ಶ್ರೀ ಟಿ. ಮರಿಯಪ್ಪ.**—ಫಿರೇಚರ್ ಕೋಟ ಹತ್ತು ಪರ್ಸೆಂಟ್ ಇಂಪ್ರೂವ್ ಆಗುತ್ತದೆ. ಈಗಿನ ಆಧಾರದ ಪ್ರಕಾರ ಪ್ರೊಡಕ್ಷನ್ 20 ಪರ್ಸೆಂಟ್ ಇಂಪ್ರೂವ್ ಆಗುತ್ತದೆ. ಸಬ್ಸಿಡಿ ವಿಚಾರ ಹೇಳಿದರು. ವೆಲ್ಸ್‌ಗೋಸ್ಕರ ಸಬ್‌ಸಿಡಿ ಕೊಡಬೇಕು, ಸಾಧ್ಯವಾದಷ್ಟು ಎಲ್ಲಾ ಇರಿಗೇಟ್ ಆದರೆ ಉತ್ತಮ, ಪ್ರೊಡಕ್ಷನ್ ಜಾಸ್ತಿ ಆಗುತ್ತದೆ. ಕ್ವಾನ್‌ಟಿಟಿ ಜಾಸ್ತಿಯಾಗುತ್ತದೆ ಎಂದು ಹೇಳಿದರು.

**ಶ್ರೀ ಎಂ. ಲಿಂಗೇಗೌಡ.**—ಪಂಪುಗಳಿಗೆ ವೆಲ್ಸ್‌ಗೆ ಸಬ್‌ಸಿಡಿಯನ್ನು ಕೊಡುತ್ತಾ ಇಲ್ಲ ಏತಕ್ಕೆ? ಸ್ವಲ್ಪ ಉದಾರವಾಗಿ ಕೊಡಿ.

ಶ್ರೀ ಟಿ. ಮರಿಯಪ್ಪ.—ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 100 ಬಾವಿಗಳನ್ನು ತೆಗೆಯಬೇಕೆಂದು ಮಾಡಿದ್ದೇವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಆರೂ ಆಗಿಲ್ಲ.

ಶ್ರೀ ಟಿ. ಮರಿಯಪ್ಪ.—ನನಗೇನು ವ್ಯಂಗ್ಯವಾಗಿ ಹೇಳುವುದಕ್ಕೆ ಬರುವುದಿಲ್ಲವೆಂದು ತಿಳಿದುಕೊಳ್ಳಬೇಡಿ. ಬೇಕಾದರೆ ಅಪ್ಪಳಿಸಿ ಬಿಟ್ಟೇನು. ಎಲ್ಲರೂ ಸಹ ವಿಶ್ವಾಸದಿಂದ ಮಾಡುವಕಾರ್ಯ. ನಾನೇ ಕ್ವೇರಿ ಹಾಕಿ ಯಾತಕ್ಕೆ ಸಬ್‌ಸಿಡಿ ಕೊಡ ವುದರಲ್ಲಿ ಡಿಲೇ ಆಯಿತು, ವೆಲ್ಸ್ ಜಾಸ್ತಿ ಸಿಂಕ್ ಮಾಡಬೇಕು ಈ ವರ್ಷ ಪೂರ್ತಿ ಕೊಡಬೇಕು ಎಂದು ಇನ್ಸ್ಟ್ರಕ್ಷನ್ಸ್ ಕೊಟ್ಟಿದ್ದೇನೆ.

ಇನ್ನೊಂದು ವಿಷಯ. Production ಕಡೆ ಸಹ ತಮ್ಮ ಗಮನವನ್ನು ಸೆಳೆಯಬೇಕಾಗಿದೆ. ಯುದ್ಧ ಆಗಿಹೋದಮೇಲೆ it has come down to one lakh. The latest figure for filature production is 1.3 lakhs. ಇದರಲ್ಲೂ ಕೂಡ cost of production ಜಾಸ್ತಿಯಾಗುತ್ತದೆ, cost of production ಬೆಲೆಯಲ್ಲಿ "ಟೀನ್ ಎಂಡ್ಸ್" ನರೇಟೂ ಕೂಡ 28, 29ರವರೆಗೆ ಆದರೆ ಸಪ್ಲೈ ಮಾಡ ಬಹುದು. ಈಗ ಈ ರೇಟು 36, 38, 39ರವರೆಗೆ ಏರುತ್ತಿರುವುದರಿಂದ ಈ ಕೈಗಾರಿಕೆಗೆ ಧಕ್ಕೆ ಬರುತ್ತಿದೆ. ಈ ದೃಷ್ಟಿಯಿಂದ ನಾವು ಆಲೋಚನೆ ಮಾಡುತ್ತಿದ್ದೇವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಆದರೂ ಏನೂ ಆಗಿಲ್ಲ (ನಗು).

ಶ್ರೀ ಟಿ. ಮರಿಯಪ್ಪ.—ನೀವು ಹೇಳಿದಂತೆ ಹೇಳಬೇಕಾದರೆ ನಾನೂ ಅಪ್ಪಳಿಸಿಬಿಡಬಲ್ಲೆ, ಆದರೆ ಒಂದು ಸೌಹಾರ್ದದ ದೃಷ್ಟಿಯಿಂದ ಹೋಗಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—I raise a point of order. ಮಂತ್ರಿಗಳು ಶ್ರೀ ರಾಜಯ್ಯಶೆಟ್ಟರು ಮಾತನಾಡಿದ್ದಕ್ಕೆ "ಅಪ್ಪಳಿಸಿ ಬಿಡುತ್ತೇನೆ" ಎಂಬ ಪದ ಪ್ರಯೋಗ ಮಾಡಿರುವುದು ಸರಿಯೇ? ಇದು Parliamentary ಯೇ ತಿಳಿಸಬೇಕು.

**Mr. CHAIRMAN.**—It is mereby a figure of speech. It is not physical. (*Laughter*).

ಶ್ರೀ ಟಿ. ಮರಿಯಪ್ಪ.—With re-doubled vigour ಎಂದು ಅರ್ಥ. ಇದಕ್ಕೆ ಕನ್ನಡದ ಟ್ರಾನ್ಸ್‌ಲೇಷನ್ನಾಗಿ ಹೇಳಿವೆ ಅಷ್ಟೆ.

**Sri B. K. PUTTARAMIYA.**—Are we also allowed to use it ?

**Mr. CHAIRMAN.**—I think it is parliamentary.

ಶ್ರೀ ಟಿ. ಮರಿಯಪ್ಪ.—ಆಪ್ಯರಾಗಿ ಈ Silk Developmentನ ವಿಚಾರವಾಗಿ "The amount to the credit is Rs. 40 lakhs" ಎಂದು ತಾವು ಹೇಳಿದಿರಿ.

The balance as on 1st April 1958 in the fund is in the order of 18.16 lakhs. It is anticipated that a sum of about 4.07 lakhs will be drawn from the fund during 1958-59, and the balance at the end of the year is anticipated to stand at 14.09 lakhs. Silk Industryಗಾಗಿ 1959-60ರಲ್ಲಿ ಎಷ್ಟು ಖರ್ಚಾಗಿದೆ ಎಂದರೆ 14.09 lakhs. This is the only field in which we can successfully compete with machine.

**Sri J. B. MALLARADHYA.**—Then why did you reduce it by 1,500 ?

**Sri T. MARIAPPA.**—Because it is controlled and we cannot allow our reputation to suffer. ಚರಕವನ್ನು replace. ಮಾಡುವುದರಿಂದ ಎಷ್ಟೋ ಸುಲಭವಾಗುತ್ತದೆ ಎಷ್ಟೋ ಜನ ಹೇಳಿರುವಂತೆ ರೀಸರ್ಚು ಮಾಡುತ್ತಿದ್ದೇವೆ. ಈಗಿರತಕ್ಕ ಚರಕಗಳನ್ನು replace ಮಾಡಬೇಕು ಎಂದು ಈ ವರ್ಷದಿಂದ 500 ಬೇಸಿನ್ನುಗಳನ್ನು ಕೊಡಬೇಕೆಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಂ. ಲಿಂಗೇಗೌಡ.—ತೂಕದಲ್ಲಿ 12 ಪೌಂಡುಗಳು ತೆಗೆಯುವಾಗ 13 ಪೌಂಡುಗಳಷ್ಟು ತೆಗೆದುಕೊಳ್ಳುತ್ತಾರೆ. ಇದರಿಂದ ಸ್ವಲ್ಪ ತೊಂದರೆ ಇದೆ.

ಶ್ರೀ ಟಿ. ಮರಿಯಪ್ಪ.—ತೂಕದಲ್ಲಿ ವ್ಯತ್ಯಾಸವಿದೆ. ರೇಟಿನಲ್ಲಿ ವ್ಯತ್ಯಾಸವಿದೆ. ಮತ್ತು ಇನ್ನೂ ಇತರ ಕಾರಣಗಳೂ ಇವೆ. ಇದನ್ನು control ಮಾಡಬೇಕು. cocoon ಕೂಡ graded ಆಗಿರಬೇಕು. ಇದಕ್ಕೆಲ್ಲ ಸರಿಯಾದ Marketಗಳಿರಬೇಕು Priceಗೆ upper limit ಆಗಬೇಕು. ಇಷ್ಟೇ ಅಲ್ಲ. ಇದರಲ್ಲಿ ಏನೇನು experience ಪಡೆದಿರುವಂತಹ ತಜ್ಞರಿದ್ದಾರೋ ಅವರಿಂದ ಪ್ರಯೋಗ ನಡೆಸಬೇಕು. ಹೀಗೆ ಪ್ರತಿ ಸ್ಟೇಜಿನಲ್ಲೂ ಶಾಸ್ತ್ರೀಯವಾಗಿ ಮಾಡತಕ್ಕ ಕೈಗಾರಿಕೆಗೆ ಒಂದು ಕಾರ್ಪೊರೇಷನ್ನನ್ನು ಮಾಡುವುದು ಸರಿಯಾಗಿರುತ್ತದೆಯೋ ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತಿದ್ದೇವೆ. ಇಷ್ಟು ನಾವು ಒಪ್ಪಿಕೊಳ್ಳುತ್ತೇವೆ. ಇದನ್ನು Develop ಮಾಡುವುದಕ್ಕೆ ತಜ್ಞರ ಸಲಹೆ ಅವರ ಅನುಭವವನ್ನು ಪಡೆಯುತ್ತೇವೆ. ಯಾವರೀತಿ ಮಾಡಬೇಕು ಎನ್ನುವುದನ್ನೆಲ್ಲ ಆಲೋಚನೆ ಮಾಡಿ ಅತಿ ಶೀಘ್ರದಲ್ಲೇ ಯಾವ ರೂಪು ಕೊಡಬೇಕು, ಯಾವ ತರಹ urban areaದಲ್ಲಿ ಯಾವ ರೀತಿ function ಮಾಡುವುದಕ್ಕೆ ಸಾಧ್ಯ, ಎನ್ನುವುದನ್ನೆಲ್ಲ ಪರಿಶೀಲಿಸಿ ಈ ಕೈಗಾರಿಕೆಯನ್ನು ಮುಂದಕ್ಕೆ ತರಲು ಏನೇನು ಕಾರ್ಯಕ್ರಮಗಳು ಬೇಕೋ ಅವನ್ನೆಲ್ಲ ತೆಗೆದುಕೊಳ್ಳಲು ತಯಾರಿದ್ದೇವೆ. ಆದ್ದರಿಂದ ಶ್ರೀ ಲಿಂಗೇಗೌಡರು ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಎಂ. ಲಿಂಗೇಗೌಡ.—ನಾನು withdraw ಮಾಡುವುದಿಲ್ಲ. ಇದನ್ನು press ಮಾಡುತ್ತೇವೆ.

**Mr. CHAIRMAN.**—I shall first put the amendment of Sri Mallaradhya. The question is :

"That for the word 'Corporation' the words 'autonomous Board' be substituted."

*The motion was negatived.*

**Mr. CHAIRMAN.**—I shall now put the main resolution. The question is :

"That this Assembly is of the opinion that suitable steps be taken immediately to form a Corporation of Silk Industries in the State comprising of all filature factories, Spun Silk Factory and Government Weaving Factory."

*The motion was negatived.*

---

## Resolution re: Changing the name of "Mysore State" to "Karnataka State".

**Mr. CHAIRMAN.**—Next resolution.

ಶ್ರೀ ಎಂ. ರಾಮಪ್ಪ (ಹರಿಹರ).—ಸ್ವಾಮೀ, ಈ ಕೆಳಗಿನ ನಿರ್ಣಯವನ್ನು ಈ ಸಭೆಯ ಮುಂದೆ ಮಂಡಿಸುತ್ತೇನೆ:—

"ಈಗಿರುವ "ಮೈಸೂರು ರಾಜ್ಯ" ಎಂಬ ಹೆಸರನ್ನು "ಕರ್ಣಾಟಕ ರಾಜ್ಯ" ಎಂದು ಬದಲಾಯಿಸುವುದಕ್ಕಾಗಿ ಕೂಡಲೇ ಅವಶ್ಯಕವಾದ ಕಾರ್ಯಕ್ರಮಗಳನ್ನು ಕೈಗೊಳ್ಳಲು ಭಾರತ ಸರಕಾರದವರಿಗೆ ಸಲಹೆ ಮಾಡಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ."

**Mr. CHAIRMAN.**—Resolution moved :

"This Assembly is of the opinion that a recommendation be made to the Government of India to take necessary steps urgently to change the present name of 'Mysore State' to 'Karnatak State'.

There is an amendment by Sri V. P. Deenadayalu Naidu The Hon'ble Member is absent. So the amendment lapses.

ಶ್ರೀ ಎಂ. ರಾಮಪ್ಪ.—ಸ್ವಾಮಿ, ಈ ನಿರ್ಣಯ ಐದನೆ ದಿನವಾದ ಇಂದು ಪ್ರಪ್ರಥಮವಾಗಿ ಈ ಸಭೆಯ ಮುಂದೆ ಬಂದಿದೆ......

**Sri C. M. ARUMUGHAM.**—Mr. Speaker, I rise to a point of order. According to article 3 of the Constitution, it is the Parliament that is vested with the power to change the name of any State or the territory or the dimunition of a State or for altering the boundaries of any State. Therefore according to this article, unless the President gives permission to introduce any Bill in a State the Legislature has no power. Even the Parliament has no power to change the name of a State unless the President gives permission. So according to article 3 of the Constitution the State Legislature is not the competent authority to discuss the question of changing the name of the State.

**Sri M. C. NARASIMHAN.**—May I make a submission ? The objection raised by my friend Sri Arumugham is not tenable because this resolution only seeks to make a recommendation to the Government of India that the name has changed. So this does not in any manner come in the way of the procedure prescribed in article 3. Article 3 only lays down that Parliament may by law amend the name of a particular State.

If this objection is upheld, it would lead to strange consequences. Any non-official body outside this House is entitled to discuss this issue and pass resolutions, but then this House would stand deprived of such an opportunity. It has been nowhere laid down that either in the rules or in the Constitution that a State Legislature cannot make a recommendation to the Government of India.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಪ್ರಶ್ನೆ, ಇದೇ Point of orderನ್ನು ಇದೇ ಮಹಾಶಯರೇ ಕಳೆದ ಸೆಪ್ಟಂಬರ್ . 0ನೆಯ ತಾರೀಖು 1957ರಲ್ಲಿ ಈ ಸಭೆಯಲ್ಲಿ ಎತ್ತಿದ್ದರು. ಆಗ್ಗೆ ಸ್ಪೀಕರು ಸರ್ಕಾರದವರ ಅಭಿಪ್ರಾಯವನ್ನು ತೆಗೆದುಕೊಂಡು, ಇದಕ್ಕೆ ಅವಕಾಶ ವಿದೆಯೆಂದು ತೀರ್ಮಾನಕೊಟ್ಟಿದ್ದಾರೆ. ಆದ್ದರಿಂದ ಈಗ ತಾವು ಇದನ್ನು allow ಮಾಡಬಹುದು.

**Mr. CHAIRMAN.**—This resolution is only recommendatory. It is not a bill which would require consent of the President. Hence it is in order.

ಶ್ರೀ ಎಂ. ರಾಮಪ್ಪ.—ನಾನು ಈಗ ಹೇಳುತ್ತಿದ್ದೆ, ಎರಡು ಸಲ ಇದೇ ನಿರ್ಣಯ ಬಂದಿದ್ದರೂ ಆಡಳಿತ ಪಕ್ಷದವರು ಇದಕ್ಕೆ ಅವಕಾಶಕೊಡುವ ವಿಷಯದಲ್ಲಿ ಸಂಕುಚಿತ ಮನೋಭಾವನೆಯನ್ನು ಎತ್ತಿ ತೋರಿಸಿದ್ದಾರೆ. ಈ ನಿರ್ಣಯ ಸಭೆಯ ಮುಂದೆ ಬರಬಾರದೆಂಬ ದುರುದ್ದೇಶದಿಂದ ಕಾಂಗ್ರೆಸ್ಸಿನವರು...

ಶ್ರೀ ಟಿ. ಮರಿಯಪ್ಪ.—I rise to a point of order. ದುರುದ್ದೇಶ ಎಂದರೇನು ...

**Sri K. PUTTASWAMY (Mysore).**—I rise to a point of order, Sir. The Hon'ble Member has used the word ದುರುದ್ದೇಶ obviously referring to the